ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೧–೧೨ನೇ ಸಾಲಿನ ಎಂ.ಫಿಲ್. ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ : ಒಂದು ಅಧ್ಯಯನ

ನಿಬಂಧಕಾರರು

ಲೋಕೇಶ್.ಬಿ

ನೋಂದಣಿ ಸಂಖ್ಯೆ : KVTMKS - 00525

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಹೆಚ್.ಪಿ.ಗೀತಾ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಕುವೆಂಪುನಗರ, ಮೈಸೂರು – ೫೭೦ ೦೨೩

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೧–೧೨

1063

1063

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೧–೧೨ನೇ ಸಾಲಿನ ಎಂ.ಫಿಲ್. ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ : ಒಂದು ಅಧ್ಯಯನ

ನಿಬಂಧಕಾರರು

ಲೋಕೇಶ್.ಬಿ

ನೋಂದಣಿ ಸಂಖ್ಯೆ : KVTMKS - 00525

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಹೆಚ್.ಪಿ.ಗೀತಾ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು – ೫೭೦ ೦೨೩

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೧–೧೨

ಅಭ್ಯರ್ಥಿಯ ಘೋಷಣಾ ಪತ್ರ

"ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮಸಂಖ್ಯೆ KVTMKS - 00525 ವಿದ್ಯಾರ್ಥಿ ಆದ ನಾನು ೨೦೧೧-೧೨ನೇ ಸಾಲಿನ ಪರೀಕ್ಷೆಗಾಗಿ **ಡಾ. ಹೆಚ್.ಪಿ.ಗೀತಾ, ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು – ೫೭೦ ೦೨೩** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಲೋಕೇಶ್ .ಬಿ.

(ಲೋಕೇಶ್.ಬಿ)

ಸ್ಥಳ: ಮೈಸೂರು

ದಿನಾಂಕ: ೨೨-೦೭-೨೦೧೩

೨೦೧೧-೧೨ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು.

<u>**ದೃಢೀಕರಣ ಪ್ರಮಾಣಪತ್ರ**</u>

೨೦೧೧-೧೨ನೇ ಸಾಲಿನಲ್ಲಿ ಕ್ರಮಸಂಖ್ಯೆ KVTMKS-00525ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ಲೋಕೇಶ್.ಬಿ** ಅವರು ನನ್ನ ಮಾರ್ಗದರ್ಶನದಲ್ಲಿ **"ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಳಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೨-೦೭-೨೦೧೩

(ಡಾ. ಹೆಚ್.ಪಿ.ಗೀತಾ)
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮೈಸೂರು – ೫೭೦ ೦೨೩

ಡಾ. ಎಚ್.ಪಿ. ಗೀತಾ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು-23.

ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ : ಒಂದು ಅಧ್ಯಯನ

ಪ ರಿ ವಿ ಡಿ

*****

ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ:

ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯದ ನವೋದಯ ಕಾವ್ಯದ ಉನ್ನತ ಸಾಧಕರಲ್ಲಿ ಒಬ್ಬರಾದಂತಹ ಶ್ರೀ ಪು.ತಿ.ನ. (ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಚಾರ್) ರವರು ಶ್ರೀ ವೈಷ್ಣವ ಧರ್ಮದ ತೀರ್ಥಕ್ಷೇತ್ರಗಳಲ್ಲಿ ಒಂದಾದ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ನೆಲೆಸಿದ್ದ ವೈಧಿಕ ಮನೆತನಕ್ಕೆ ಸೇರಿದವರು. ವೇದ, ಉಪನಿಷತ್ತು, ಆಗಮ, ತರ್ಕ, ಪುರಾಣ ಮುಂತಾದ ಹತ್ತು ಹಲವು ಜ್ಞಾನ ಶಾಖೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದ ಶ್ರೀ ತಿರುನಾರಾಯಣ ಅಯ್ಯಂಗಾರ್ ಮತ್ತು ಗೊರೂರಿನ ಶ್ರೀರಂಗಮ್ಮ ಇವರ ಮೊದಲ ಮಗನಾಗಿ ೧೯೦೫ರಲ್ಲಿ ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿಯ ವೈರಮುಡಿ ಉತ್ಸವದಂದೇ ಪು.ತಿ.ನ. ಜನಿಸಿದರು.

ಇವರ ಬಾಲ್ಯದ ದಿನಗಳ ಭೌತಿಕ ಪರಿಸರಕ್ಕೂ, ಸಾಮಾಜಿಕ, ಸಾಂಸ್ಕೃತಿಕ ಪರಿಸರಕ್ಕೂ ಇರುವ ಅಂತರ ಮಹತ್ವಪೂರ್ಣವಾದುದು. ಪ್ರಾಥಮಿಕ ಶಾಲೆಯ ವ್ಯಾಸಂಗವನ್ನು ಮೇಲುಕೋಟೆಯಲ್ಲಿಯೇ ಪೂರೈಸಿದ ಮೇಲೆ ಮೈಸೂರು ಮಹಾರಾಜ ಕೊಲಜಿಯೇಟ್ ಹೈಸ್ಕೂಲು ಮತ್ತು ಮಹಾರಾಜ ಕಾಲೇಜುಗಳು ಅವರು ಓದಿದಂತಹ ಶಿಕ್ಷಣ ಸಂಸ್ಥೆಗಳು. ೧೯೨೬ರಲ್ಲಿ ಬಿ.ಎ ಪದವಿಯನ್ನು ಪಡೆದರು. ತತ್ವಶಾಸ್ತ್ರ, ವೇದಾಂತದರ್ಶನ, ಸಂಸ್ಕೃತ ಇವರ ವ್ಯಾಸಂಗದ ವಿಷಯಗಳು. ಜೊತೆಗೆ ಫ್ರೆಂಚ್ ಭಾಷೆಯನ್ನು ಕಲಿತವರು. ವಿಮರ್ಶಕರು ಹೇಳುವಂತೆ ಪು.ತಿ.ನ ಅವರದು ಕಾಳಿದಾಸ ಮತ್ತು ವರ್ಡ್ಸ್‌ವರ್ತ್‌ರಿಂದ ಪ್ರಭಾವಿತರಾದ ಮನೋಧರ್ಮ, ಗುರುಗಳಲ್ಲಿ ಎಂ ಹಿರಿಯಣ್ಣನವರು ಮತ್ತು ಸ್ನೇಹಿತರಲ್ಲಿ ತೀ.ನಂ.ಶ್ರೀ ಹಾಗೂ ನಂ.ಶಿವರಾಂ ಶಾಸ್ತ್ರಿ ಮುಂತಾದವರು ಇವರ ಕಾವ್ಯ ರಚನೆಗೆ ಪ್ರೇರಕ ಶಕ್ತಿಗಳಾಗಿದ್ದರು. ಸಂಸ್ಕೃತ, ಇಂಗ್ಲೀಷ್, ಕನ್ನಡ, ಮೂರರಲ್ಲೂ ಪು.ತಿ.ನ. ಅವರದು ಪರಿಪೂರ್ಣ ಪಾಂಡಿತ್ಯ. ಮನೆಮಾತು ತಮಿಳಾದ್ದರಿಂದಲೂ ಶ್ರೀ ವೈಷ್ಣವ ಆಳ್ವಾರುಗಳ ದಿವ್ಯ ಪ್ರಬಂಧಗಳು ತಮಿಳು ಭಾಷೆಯಲ್ಲಿರುವುದರಿಂದಲೂ ವೈಷ್ಣವ ಸಂಸ್ಕೃತಿಯ ಪರಿಸರದಲ್ಲಿಯೇ ಪು.ತಿ.ನ ಬೆಳೆದದ್ದರಿಂದಲೂ ಆ ಭಾಷೆಯಲ್ಲೂ ಇವರು ಪ್ರಭುತ್ವ ಪಡೆದಿದ್ದಾರೆ. ೧೯೨೫ರಲ್ಲಿ ಹೆಮ್ಮಿಗೆ ಗ್ರಾಮದ ಶ್ರೀ ರಂಗಚಾರ್ಯ ಮತ್ತು ಶ್ರೀಮತಿ ಎಗ್ಗಮ್ಮನವರ ಮಗಳಾದ ಶ್ರೀಮತಿ ಶೇಷಮ್ಮನವರನ್ನು ಮದುವೆಯಾದ ಪು.ತಿ.ನ. ಅವರು ಸುಮಾರು ಅರವತ್ತು ವರ್ಷಗಳ ತುಂಬು ಕೌಟುಂಬಿಕ ಜೀವನವನ್ನು ನಡೆಸಿದ್ದಾರೆ. ಏಳು ಜನ ಹೆಣ್ಣು ಮಕ್ಕಳು

ಮತ್ತು ಒಬ್ಬ ಮಗನ ತಂದೆಯಾದ ಇವರದು ಕೆಳಮಧ್ಯಮ ವರ್ಗದಿಂದ ಉನ್ನತ ಮಧ್ಯಮವರ್ಗದವರೆಗೆ ಬುದ್ಧಿಶಕ್ತಿಯ ನೆರವಿನಿಂದಲೇ ಚಲಿಸಿದ ಇವರ ಜೀವನ ಕ್ರಮವು ಬಹಳ ಅರ್ಥಪೂರ್ಣವಾದುದು.

ಹೀಗೆ ಪು.ತಿ.ನ ಅವರು ಸುಮಾರು ಇಪ್ಪತ್ತೈದು ವರ್ಷ ಸಂಸ್ಥಾನದ ಸೈನಿಕ ಇಲಾಖೆಯ ಕಛೇರಿಯಲ್ಲಿ ಸೇವೆ ಸಲ್ಲಿಸಿದರು. ಅನಂತರ ಸುಮಾರು ಎಂಟು ವರ್ಷ ರಾಜ್ಯ ವಿಧಾನಮಂಡಲ ಕಲಾಪಗಳ ಸಂಪಾದಕನ ಕಾರ್ಯ, ಸರ್ಕಾರದ ಸೇವೆಯಿಂದ ನಿವೃತ್ತರಾದ ಮೇಲೆ, ಮೂರು ವರ್ಷ (೧೯೬೩-೬೬) ಕನ್ನಡ ವಿಶ್ವಕೋಶ ವಿಭಾಗದಲ್ಲಿ ಕೆಲಸ ಮಾಡಿದರು. ಅಂದಿನ ಸಂದರ್ಭದಲ್ಲಿ ವಿಶ್ವಕೋಶದ ಯೋಜನೆ ಇದ್ದದ್ದು ಸರ್ಕಾರದಲ್ಲಿಯೇ. ಅನಂತರ ಸುಮಾರು ಐದುವರ್ಷ ಮೈಸೂರು ವಿಶ್ವವಿದ್ಯಾನಿಲಯ ಪರಿಷ್ಕರಿಸುತ್ತಿರುವ ಇಂಗ್ಲೀಷ್, ಕನ್ನಡ ನಿಘಂಟಿನ ಸಂಪಾದಕರಾಗಿದ್ದರು.

ಪು.ತಿ.ನ. ಅವರಿಗೆ ಹಲವಾರು ಪ್ರಶಸ್ತಿಗಳು ಮತ್ತು ಜನಪ್ರಿಯತೆಯು ಲಭಿಸಿದೆ. 'ಹಂಸದಮಯಂತಿ ಮತ್ತು ಇತರ ರೂಪಕಗಳು' ಎಂಬ ಕೃತಿಗಾಗಿ ೧೯೬೬ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ದೊರೆಯಿತು. ತದನಂತರ ೧೯೭೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ಮತ್ತು ೧೯೮೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಶ್ರೀ ಸು.ರಂ. ಎಕ್ಕುಂಡಿಯವರು ಪು.ತಿ.ನ. ಅವರನ್ನು ಕುರಿತ ಕಿರುಪುಸ್ತಕವನ್ನು ರಚಿಸಿದ್ದಾರೆ. 'ಯದುಗಿರಿಯ ವೀಣೆ' ಪು.ತಿ.ನ. ಅವರನ್ನು ಕುರಿತ ಕವಿತೆಗಳ ಸಂಕಲನ. ಇವರ ಅಭಿನಂದನ ಗ್ರಂಥ 'ಯದುಗಿರಿ' ೧೯೮೧ರಲ್ಲಿ ಪ್ರಕಟವಾಯಿತು. ಇಷ್ಟೆಲ್ಲ ಮಹತ್ವಪೂರ್ಣ ಜೀವನವನ್ನು ನಡೆಸಿದ ಪು.ತಿ.ನ.ರವರು ಅಕ್ಟೋಬರ್ ೨೩, ೧೯೯೮ರಲ್ಲಿ ನಿಧನರಾದರು.

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಈ ಅಧ್ಯಯನದಲ್ಲಿ ಪು.ತಿ.ನ. ಅವರ ಸಾಹಿತ್ಯದಲ್ಲಿ 'ಸಾಮಾಜಿಕ ಪ್ರಜ್ಞೆ' ಎನ್ನುವ ವಿಷಯವನ್ನು ನನ್ನ ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡು ಅದನ್ನು ಸ್ಥೂಲವಾಗಿ ಸಮೀಕ್ಷೆಮಾಡಿ ಪು.ತಿ.ನ. ಅವರ ಕಾವ್ಯಗಳನ್ನು, ಗೀತನಾಟಕಗಳನ್ನು, ಪ್ರಬಂಧಗಳನ್ನು, ಅವಲೋಕನ ಮಾಡಿ ಅವುಗಳಲ್ಲಿರುವ ಆಕರ ಸಾಮಗ್ರಿಯನ್ನು ಬಳಸಿಕೊಂಡು ಈ ನಿಬಂಧದಲ್ಲಿ ಅಧ್ಯಯನಕ್ಕೊಳಪಡಿಸಿದ್ದೇನೆ.

ಮೊದಲಿಗೆ ಈ ಮೇಲಿನ ಪರಿಕಲ್ಪನೆಯನ್ನು ಆಧರಿಸಿ ಬಂದಂತಹ ಪೂರ್ವ ಸಾಹಿತ್ಯವನ್ನು ಅವಲೋಕನ ಮಾಡುವುದಾದರೆ ಪು.ತಿ.ನ. ಅವರ ಸಮಗ್ರ ಕಾವ್ಯ ಕೃತಿಯಲ್ಲಿ ಅವರ ಕಾವ್ಯಗಳ ವೈಶಿಷ್ಟ್ಯತೆಯ ಬಗ್ಗೆ ಗುರುತಿಸಲಾಗುತ್ತದೆ. ಅಲ್ಲದೇ ಪು.ತಿ.ನ. ಅವರ ನಾಟಕಗಳಲ್ಲಿ ಮತ್ತು ಪ್ರಬಂಧಗಳಲ್ಲಿ, ತದನಂತರ ಪು.ತಿ.ನ. ಅವರ ಒಂದು ಅಧ್ಯಯನ ವಿವಿಧ ಲೇಖಕರು ಈ ಕೃತಿಯಲ್ಲಿ ಒಟ್ಟಾರೆ ಸಾಹಿತ್ಯವನ್ನು ಕುರಿತಂತೆ ವಿವೇಚಿಸಲಾಗಿದೆ.

ಆದರೆ ಪು.ತಿ.ನ. ಅವರ ಒಟ್ಟು ಸಾಹಿತ್ಯವನ್ನು ಆಧಾರವನ್ನಾಗಿಟ್ಟುಕೊಂಡು 'ಸಾಮಾಜಿಕ ಪ್ರಜ್ಞೆ' ಎಂಬ ವಿಷಯ ಕುರಿತಂತೆ ಸಂಶೋಧನೆ ನಡೆದಿಲ್ಲವಾದ್ದರಿಂದ ಈ ವಿಚಾರವನ್ನು ಆಯ್ಕೆ ಮಾಡಿಕೊಂಡು ಪ್ರಬಂಧ ಸಿದ್ದಪಡಿಸಿರುತ್ತೇನೆ. ನನ್ನ ಅಧ್ಯಯನದ ಅಥವಾ ಸಂಶೋಧನಾ ವಿಧಾನಗಳನ್ನು ಈ ಕೆಳಗಿನಂತೆ ಕಾಣಬಹುದು. ಮತ್ತು ಈ ಕೆಳಗಿನಂತೆ ವಿಂಗಡಿಸಲಾಗಿದೆ.

'ಕಣಿವೆಯ ಮುದುಕ' 'ವಿಶ್ವ ಕುಟುಂಬಿಯ ಕಷ್ಟ' 'ರಂಗವಲ್ಲಿ' 'ನನ್ನನಾಯಿ' 'ಪ್ರತೀಕ್ಷೆ' ಮೊದಲಾದ ಕವನಗಳನ್ನು ಕುರಿತಂತೆ ಅವಲೋಕಿಸಿದಾಗ ಸಾಮಾಜಿಕ ಪ್ರಜ್ಞೆ ಬಿಂಬಿಸುವ ಕವನಗಳಾಗಿ ಗೋಚರವಾಗಿದೆ. ಅಲ್ಲದೆ ಗೀತನಾಟಕಗಳಾಗಿ ರಾಮೋದಯ, ಅಹಲ್ಯೆ, ಸೀತಾಪರಿಣಯ, ಹರಿಣಾಭಿಸರಣ, ಶಬರಿ, ಶ್ರೀರಾಮಪಟ್ಟಾಭಿಷೇಕ, ಗೋಕುಲನಿರ್ಗಮನ, ಸತ್ಯಾಯನ ಹರಿಶ್ಚಂದ್ರ, ಹಂಸದಮಯಂತಿ, ವಿಕಟಕವಿ ವಿಜಯ, ಮೊದಲಾದ ನಾಟಕಗಳನ್ನು ಈಚಲು ಮರದ ಕೆಳಗೆ, ಧೇನುಕ ಪುರಾಣ, ರಾಮಾಚಾರಿಯ ನೆನಪು, ರಥಸಪ್ತಮಿ ಮತ್ತು ಇತರ ಚಿತ್ರಗಳು, ಧ್ವಜರಕ್ಷಣೆ,

ಮೊದಲಾದ ಪ್ರಬಂಧ ಸಂಕಲನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಈ ಅಧ್ಯಯನದಲ್ಲಿ ಈ ಕೆಳಕಂಡ ಅಂಶಗಳನ್ನು ನಿರೂಪಿಸಲಾಗಿದೆ.

ಸಮಾಜ:- ಸಾಮಾಜಿಕ ಸಂಬಂಧಗಳ ಸಂರಚನೆಯೇ ಸಮಾಜ. ಅಂದರೆ ಕುಟುಂಬ ಅಂದಾಗ ಅಣ್ಣ-ತಮ್ಮ, ಅಕ್ಕ-ತಂಗಿ, ಗಂಡ-ಹೆಂಡತಿ, ತಾಯಿ-ಮಕ್ಕಳು, ವೃದ್ಧರು ಇತರೆ. ಹಿಂದೆ ಅವಿಭಕ್ತಕುಟುಂಬ, ಇಂದು ಅಣುಕುಟುಂಬ, ಕುಟುಂಬ ಪತನ, ಕಾರಣ, ಪರಿಣಾಮ, ಸಂಬಂಧಗಳ ಕಡಿತ, ಪತ್ನಿ-ಪತಿ, ಪ್ರೇಮ, ಸಂಗಡ, ತಾಯಿ-ಮಗನ ನಡುವಿನ ಮಾತೃಪ್ರೇಮ.

ಧರ್ಮ:- ವೈಧಿಕ ಧರ್ಮ, ವೀರಶೈವ ಧರ್ಮ, ಜೈನಧರ್ಮ, ಬೌದ್ಧಧರ್ಮದ ನಿಯಮಾವಳಿಗಳು, ತತ್ವಗಳು, ಸಿದ್ಧಾಂತಗಳು.

ರೂಢಿ ಸಂಪ್ರದಾಯ:- ಹಬ್ಬದ ಆಚರಣೆಗಳು, ಮೂಢನಂಬಿಕೆಗಳು, ಸಂಪ್ರದಾಯಗಳು ಮತ್ತು ಆಧುನಿಕತೆ ನಡುವಿನ ಸಂಘರ್ಷ ಅಂದು-ಇಂದು. ಸಮಾಜದಲ್ಲಿ ಸ್ತ್ರೀಯರಿಗೆ ಸರಿಯಾದ ಸ್ಥಾನ-ಮಾನ ನೀಡುವುದು. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಸೋದರತ್ವ

ಒಟ್ಟಾರೆಯಾಗಿ ನನ್ನ ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಯನಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ-೧ :- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಈ ಅಧ್ಯಾಯದಲ್ಲಿ ಪು.ತಿ.ನ. ಅವರ ಸಮಗ್ರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಹೊರ ಸೆಳೆಯುವ ಮೊದಲ ಪ್ರಯತ್ನ ಇದಾಗಿದೆ. ಪು.ತಿ.ನ. ಕುರಿತು ಕಾವ್ಯ ಸೌಂದರ್ಯೋಪಾಸನೆಯ ಹಿನ್ನೆಲೆಯಲ್ಲಿ ಹಲವು ಸಂಶೋಧಕರು, ಕವಿಗಳು, ಲೇಖಕರು, ವಿಮರ್ಶಾಕೃತಿಗಳನ್ನು ರಚಿಸಿದ್ದು, ಸಾಮಾಜಿಕ ಪ್ರಜ್ಞೆಯ ಕೃತಿ ರಚನೆ ವಿರಳವಾಗಿರುವುದರ ಕಾರಣವನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ.

ಅಧ್ಯಾಯ-೨ :- ಸಮಾಜದ ಪರಿಕಲ್ಪನೆ ಮತ್ತು ಸಾಮಾಜಿಕ ಪ್ರಜ್ಞೆ

ಈ ಅಧ್ಯಾಯದಲ್ಲಿ ಸಮಾಜದ ಪರಿಕಲ್ಪನೆಯ ಬಗ್ಗೆ ಮತ್ತು ನವೋದಯ ಕಾಲದ ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತು ಸಾಮಾಜಿಕ ಪ್ರಜ್ಞೆಯಲ್ಲಿ ಕಾಣಬಹುದಾದ ಅಂಶಗಳನ್ನು ಕುರಿತು ಈ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಅಧ್ಯಾಯ–೩ :– ಪು.ತಿ.ನ. ಅವರ ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ

ಪು.ತಿ.ನ. ಅವರ ಪ್ರಸಿದ್ಧ ಕಾವ್ಯಗಳಾದ ಹಣತೆ, ಮಾಂದಳಿರು, ಶಾರದಾಯಾಮಿನಿ, ಗಣೇಶದರ್ಶನ, ರಸಸರಸ್ವತಿ, ಮಲೆದೇಗುಲ, ಹೃದಯವಿಹಾರಿ ಮತ್ತು ಶ್ರೀಚರಿತೆ ಎಂಬ ಪುಟ್ಟ ಮಹಾಕಾವ್ಯ, ಮುಂತಾದ ಕಾವ್ಯಗಳಲ್ಲಿ ಕವಿಯ ಸಾಮಾಜಿಕ ಪ್ರಜ್ಞೆಯನ್ನು ಈ ಅಧ್ಯಾಯದಲ್ಲಿ ಪ್ರಸ್ತುತಪಡಿಸಲಾಗಿದೆ.

ಅಧ್ಯಾಯ–೪ :– ಪು.ತಿ.ನ. ಅವರ ಗೀತ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ

ಈ ಅಧ್ಯಾಯದಲ್ಲಿ ಗೀತನಾಟಕಗಳ ಉಗಮ, ಬೆಳವಣಿಗೆ, ಭಾರತೀಯ ಭಾಷೆಯಲ್ಲಿ ಮತ್ತು ಕನ್ನಡದಲ್ಲಿ ಗೀತ ರೂಪಕಗಳೊಂದಿಗೆ ಪು.ತಿ.ನ.ರವರ ಗೀತ ನಾಟಕಗಳಾದ ಹಂಸದಮಯಂತಿ, ಸತ್ಯಾಯನ ಹರಿಶ್ಚಂದ್ರ, ಹರಿಣಾಭಿಸರಣ, ಅಹಲ್ಯೆ, ರಾಮೋದಯಂ, ಸೀತಾಪರಿಣಯಂ ಮುಂತಾದ ಗೀತನಾಟಕಗಳಲ್ಲಿ ಸಾಮಾಜಿಕ ಅಂಶವನ್ನು ಗುರುತಿಸಲಾಗಿದೆ.

ಅಧ್ಯಾಯ–೫ :– ಪು.ತಿ.ನ. ಅವರ ಪ್ರಬಂಧಗಳಲ್ಲಿ ಸಾಮಾಜಿಕ ಪ್ರಜ್ಞೆ

ಪು.ತಿ.ನ. ಅವರ ಪ್ರಬಂಧ ರೂಪಕಗಳಾದ ಈಚಲು ಮರದ ಕೆಳಕೆ, ಧೇನುಕಪುರಾಣ, ರಾಮಾಚಾರಿಯ ನೆನಪು, ರಥಸಪ್ತಮಿ ಮತ್ತು ಇತರ ರೂಪಕಗಳು, ಧ್ವಜರಕ್ಷಣೆ ಮುಂತಾದ ಕೃತಿಗಳಲ್ಲಿ ಸಮಾಜದ ವಿಡಂಬನ, ವ್ಯಂಗ್ಯ, ಮೇಲು–ಕೀಳು, ಸತ್ಯ–ಮಿತ್ಯ, ಮೌಢ್ಯತೆ, ದೇವರು, ಧರ್ಮ, ಆಚಾರ–ವಿಚಾರ, ಸಂಪ್ರದಾಯ ಇವುಗಳನ್ನು ಕುರಿತು ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ಈ ಅಧ್ಯಯನದಲ್ಲಿ ಸೆರೆಹಿಡಿಯಲಾಗಿದೆ.

ಅಧ್ಯಾಯ–೬ :– ಉಪಸಂಹಾರ

ಸಮಾಜ ಸಂಸ್ಕೃತಿಯ ಏಕೀಕರಣಕ್ಕೆ ಒತ್ತಾಯಪಡಿಸುತ್ತಿರುವ ಈ ಜಾಗತೀಕರಣ ಯುಗದಲ್ಲಿ ಪು.ತಿ.ನ. ರವರ ಚಿಂತನೆಯ ಅನುಷ್ಠಾನದ ಅಗತ್ಯವಿದೆ. ಹಾಗೂ ಅವರ ಸಾಮಾಜಿಕ ಪ್ರಜ್ಞೆಯೊಂದಿಗೆ ಆಧ್ಯಾತ್ಮದ ಅರಿವೂ ಅಗತ್ಯ ಎಂಬ ಹಿನ್ನೆಲೆಯಲ್ಲಿ ಅವರ ಒಟ್ಟು ಕೃತಿಯ ಅಧ್ಯಯನದೊಂದಿಗೆ ಈ ನಿಬಂಧದ ಉದ್ದೇಶ ಮತ್ತು ವ್ಯಾಪ್ತಿ ಕುರಿತಂತೆ ಅಧ್ಯಾಯವನ್ನು ಸಾರ ಸಂಗ್ರಹಗೊಳಿಸಲಾಗಿದೆ.

ಅಧ್ಯಾಯ ಎರಡು

ಸಮಾಜದ ಪರಿಕಲ್ಪನೆ ಮತ್ತು ಸಾಮಾಜಿಕ ಪ್ರಜ್ಞೆ

ಸಾಹಿತ್ಯವೆನ್ನುವುದು ಹರಿಯುವ ನದಿ ಇದ್ದ ಹಾಗೆ. ಜೀವ ಪ್ರೇಮದ ಕಡಲನ್ನು ಸೇರುವ ಆಕಾಂಕ್ಷೆಯಲ್ಲಿ ಅದು ಹರಿಯುತ್ತಲೇ ಇರುತ್ತದೆ. ಎಲ್ಲಿಯೂ ನಿಲ್ಲದೆ ಹರಿಯುವುದು ಅದರ ಮೂಲಭೂತ ಸ್ವಭಾವ. ಅದೇ ರೀತಿಯಲ್ಲಿ ಪು.ತಿ.ನ ಅವರ ಸಾಹಿತ್ಯವು ನಿರಂತರ ವಿಕಾಸಪಥದಲ್ಲಿ ವೈವಿಧ್ಯಮಯ ಪಾತ್ರಗಳಲ್ಲಿ ಜೀವಂತವಾಗಿ ಹರಿಯುತ್ತಿದೆ. ತನ್ನ ಸುದೀರ್ಘ ಪ್ರಯಾಣದ ಉದ್ದಕ್ಕೂ ಎದುರಾಗುವ ಹೊಸ ಹೊಸ ವಿಚಾರಗಳಿಗೆ ಸಾವಕಾಶವಾಗಿ ತೆರೆದುಕೊಳ್ಳುತ್ತಾ ಬಂದಿದೆ. ಅದು ಜೀವ ತಳೆದ ಕಾಲದಿಂದಲೂ ಸಮಾಜ ಮುಖಿಯಾದ ಅಧ್ಯಾತ್ಮದ ಮುಖವಾಣಿಯಾಗುವ ತುರ್ತಿನಲ್ಲೇ ಮುನ್ನೆಡೆಯುತ್ತಿದೆ.

ಹೀಗೆ ಮುನ್ನೆಡೆಯುತ್ತಿದ್ದ ಕನ್ನಡ ವಾಹಿನಿ ಒಮ್ಮೆಲೆ ಹತ್ತೊಂಬತ್ತನೆಯ ಶತಮಾನದ ಆಸುಪಾಸಿನಲ್ಲಿ ಹೊಸ ದಿಕ್ಕು ದೆಸೆಗಳನ್ನು ಹುಡುಕಿಕೊಂಡು ಹರಿಯ ತೊಡಗಿತು. ಹಿಂದೆಲ್ಲಾ ಒಳಹರಿವಿನಲ್ಲಿ ಗುಪ್ತಗಾಮಿನಿಯಂತೆ ಸುಳಿದಾಡುತ್ತಿದ್ದ ಸಾಮಾಜಿಕ ಪ್ರಜ್ಞೆ ಈ ಅವಧಿಯಲ್ಲಿ ಮುನ್ನೆಲೆಗೆ ಬಂದು ನಿಚ್ಚಳವಾಗ ತೊಡಗಿತು.

ಪ್ರಸ್ತುತ ಅಧ್ಯಯನವು ವಿಶೇಷವಾಗಿ ಈ ಘಟ್ಟಕ್ಕೆ ಸಂಬಂಧಿಸಿದ್ದಾಗಿದೆ. ಕಳೆದ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನ ಆಧುನಿಕ ಅರ್ಥದಲ್ಲಿ ಸಂಕ್ರಮಣದ ಕಾಲಘಟ್ಟ, ಇಡೀ ಪ್ರಪಂಚವೇ ಕೈಗಾರೀಕರಣದ ಪರಿಣಾಮವಾಗಿ ಬದಲಾವಣೆಗಳಿಗೆ ಒಳಗಾಗುತ್ತಿದ್ದ ಕಾಲಘಟ್ಟ, ಹೊಸ ಹೊಸ ಶೋಧನೆಗಳು, ಆವಿಷ್ಕಾರಗಳು ಸಂಭವಿಸುತ್ತಿದ್ದಂತಹ ಯುಗಮಾನ. ಅದು ಒಂದು ಅನಿರೀಕ್ಷಿತ ಸಂದರ್ಭದಲ್ಲಿ ನಮ್ಮ ದೇಶದ ಪರಂಪರೆಯನ್ನು ತೀವ್ರ ಪರೀಕ್ಷೆಗೆ ಒಳಪಡಿಸುವ ಸಂದರ್ಭದಲ್ಲಿ ನಮ್ಮ ದೇಶದ ಪರಂಪರೆಯನ್ನು ತೀವ್ರ ಪರೀಕ್ಷೆಗೆ ಒಡ್ಡಿತು. ಅದರಂತೆ ಒಂದುವರೆ ಸಾವಿರ ವರ್ಷಗಳ ಇತಿಹಾಸ ಹೊಂದಿದ್ದಂತಹ ಕನ್ನಡ ಸಾಹಿತ್ಯ ಸಂಸ್ಕೃತಿಯೂ ಪರೀಕ್ಷೆಗೆ ಒಳಗಾಗಬೇಕಾಯಿತು. ಕನ್ನಡ ಬದುಕಿಗೆ ಸೃಜನ ಶೀಲತೆ, ಪೂರ್ವಗ್ರಹಗಳು, ಮೌಢ್ಯಚರಣೆಗಳು, ವೈಚಾರಿಕತೆ ಮತ್ತು ಮಾನವತಾವಾದಗಳು ಆಳವಾದ ಪರಿಶೀಲನೆಗೆ ಪಕ್ವವಾದುವು. ಇದರ ಪರಿಣಾಮವೆಂಬಂತೆ ಹೊಸ ಹೊಸ ಎಚ್ಚರದ ದನಿಗಳು ನಾನಾ ಮೂಲಗಳಿಂದ ಒಡಮೂಡಿದವು. ಹೀಗೆ ಹಠಾತ್ತನೆ ನಿರ್ಮಾಣವಾದ ಈ ಸಂಕೀರ್ಣ

ಯುಗ ಸಂದರ್ಭವನ್ನು ನಮ್ಮ ಹಿರಿಯ ವಿದ್ವಾಂಸರು ಕನ್ನಡ ಪುನರುಜ್ಜೀವನ ಯುಗವೆಂದೂ ಸಂಕ್ರಮಣಾವಸ್ಥೆ ಎಂದು, ಸತ್ವ ಪರೀಕ್ಷೆಯ ಕಾಲವೆಂದು ಸಮನ್ವಯ ಕಾಲಘಟ್ಟವೆಂದೂ ಹೊಸ ಗನ್ನಡದ ಅರುಣೋದಯವೆಂದೂ, ನವೋದಯವೆಂದು ಮುಖ್ಯವಾಗಿ ಕರೆದರು.

ಇಂತಹ ವಿಶೇಷ ಕಾಲಮಾನದಲ್ಲಿ ಭಾರತೀಯ ಸಮಾಜದೊಳಗೆ ಹಲವಾರು ಬಗೆಯ ಬದಲಾವಣೆಗಳು ಕಾಣಿಸಿಕೊಂಡವು. ಅದುವರೆಗೆ ಒಂದು ರೀತಿಯ ಚಲನಶೀಲತೆಯನ್ನು ಕಳೆದುಕೊಂಡ ಸ್ಥಿತಿಯಲ್ಲಿದ್ದ ಭಾರತೀಯ ಸಮಾಜ ವಸಾಹತು ಶಾಹಿಯ ಸಂಪರ್ಕದಿಂದ ಒಮ್ಮೆಲೆ ಅಲುಗಾಡತೊಡಗಿತು. ವಸಾಹತುಶಾಹಿ ಆಡಳಿತ, ಆಧುನಿಕ ಇಂಗ್ಲೀಷ್ ಶಿಕ್ಷಣ, ಔದ್ಯೋಗಿಕರಣ, ನಗರೀಕರಣ, ಸಾರಿಗೆ ವ್ಯವಸ್ಥೆ, ಸ್ವಾತಂತ್ರ್ಯ ಚಳುವಳಿ ಹಾಗೂ ದೇಶದ ಮೂಲೆ ಮೂಲೆಯಲ್ಲಿ ಹುಟ್ಟಿಕೊಳ್ಳುತ್ತಿದ್ದ ದೇಶಿ ಚಳುವಳಿಗಳು ಇಲ್ಲಿನ ಸಮಾಜವನ್ನು ಚಲನೆಯತ್ತ ಕೊಂಡೊಯ್ದು ವು. ಅದರಲ್ಲೂ ಮುಖ್ಯವಾಗಿ ಗಾಂಧೀಜಿ ನೇತೃತ್ವದ ಸ್ವಾತಂತ್ರ್ಯ ಹೋರಾಟ ಬದಲಾವಣೆಯ ಅಲೆಗಳನ್ನು ಎಬ್ಬಿಸಿತು. ಸಾಂಸ್ಕೃತಿಕ ಬಹುತ್ವಗಳ ನಡುವೆ ಮೊದ ಮೊದಲು ಇಡೀ ದೇಶದ ಚೈತನ್ಯ ಒಂದೆಂಬ ಭಾವನೆಯು ಬಲಿಯ ತೊಡಗಿತು. ಇದರೊಂದಿಗೆ ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಅಂತರಜಾತಿ, ಮದುವೆಗಳಿಗೆ ಸಂಬಂಧಿಸಿದ ಹೋರಾಟಗಳು ಒಟ್ಟಾಗಿ ಸೇರಿ ದೇಶವನ್ನು ಉತ್ತಮ ಚಿಂತನೆಯೆಡೆಗೆ ಮುನ್ನೆಡೆಸಿದ್ದವು.

ಪು.ತಿ.ನ ಅವರ ಸಾಹಿತ್ಯದಲ್ಲಿ ಮಹತ್ವಪೂರ್ಣ ವಿವೇಕದ ಮೂಲಕ ರಚಿಸಿರುವ ಕಾವ್ಯ, ನಾಟಕ, ಪ್ರಬಂಧಗಳನ್ನು ಮುಖ್ಯವಾಗಿ ಚರ್ಚೆಗೆ ಒಳಪಡಿಸಲಾಗುತ್ತದೆ. ಇಲ್ಲಿ ಪ್ರಕಟಗೊಳ್ಳುವ ಜೀವನಧೋರಣೆ ಕಟ್ಟಿಕೊಡುವ ಲೋಕದೃಷ್ಠಿ ಸಾಕಾರಗೊಳ್ಳುವ ಸದಾಶಯಗಳನ್ನು ಒಂದು ತಾತ್ವಿಕ ಚೌಕಟ್ಟನೊಳಗೆ ಶೋಧಿಸುವ ಪ್ರಯತ್ನ ಈ ಹಿನ್ನೆಲೆಯಲ್ಲಿದೆ. ಕಥಾ ಸಾಹಿತ್ಯಗಳಿಗೆ ವ್ಯಕ್ತವಾಗುವ ಸಾಮಾಜಿಕ ಪ್ರಜ್ಞೆಯನ್ನು ಶೋಧಿಸುವ ದಾರಿಯಲ್ಲಿ ಪ್ರಸ್ತುತ ಅಧ್ಯಯನಕ್ಕೊಂದು ಪರಿಪೂರ್ಣ ಆಕಾರ ಕೊಡುವ ಸಲುವಾಗಿ ಅವರ ಇನ್ನಿತರ ಗದ್ಯ ಬರಹಗಳನ್ನು ಪೂರವಾಗಿ ಬಳಸಿಕೊಳ್ಳಲಾಗುತ್ತದೆ.

ಹೀಗೆ ಅವರ ಬಿಡಿ ಬರಹಗಳನ್ನು ಒಗ್ಗೂಡಿಸಿಕೊಂಡು ಒಂದು ಪರಿಣಾಮಕಾರಿ ತಾತ್ವಿಕ ಪರಿಕಲ್ಪನೆಯ ಮೂಲಕ ಕಥಾ ಸಾಹಿತ್ಯದ ಸಮಾಜಪರ ಧೋರಣೆಯನ್ನು ಶೋಧಿಸುವ ನಿಟ್ಟಿನಲ್ಲಿ ಈ ಅಧ್ಯಯನ ಸಾಗಿದೆ.

ಈ ನಿಟ್ಟಿನಲ್ಲಿ ಕನ್ನಡ ಭಾಷೆಯ ಸಾಹಿತ್ಯ ಪರಂಪರೆಯನ್ನು ೨೧ನೇ ಶತಮಾನದಲ್ಲಿ ವಿಶೇಷವಾಗಿ ಗುರುತಿಸಿ ಶಾಸ್ತ್ರೀಯ ಭಾಷೆಯ ಸ್ಥಾನ-ಮಾನವನ್ನು ನೀಡಲಾಗಿದೆ. ಇಂತಹ ಗೌರವದ ಸ್ಥಾನ ಪಡೆಯಲು ಕನ್ನಡ ಪರಂಪರೆಗೆ ಸಾಕಷ್ಟು ಹಳೆಯ ಹಿನ್ನೆಲೆ ಇರುವುದರ ಜೊತೆಗೆ ಅದು ಸಮಾಜ ಮುಖಿಯಾಗಿ ಬೆಳೆದಿರುವುದು ಬಹುದೊಡ್ಡ ಕಾರಣ. ಎಲ್ಲ ಕಾಲಘಟ್ಟಗಳಲ್ಲೂ ಕನ್ನಡ ಸಾಹಿತ್ಯ ಪರಂಪರೆಯು ಚಲನಶೀಲತೆ ಮತ್ತು ಜಡತೆಯ ನಡುವಿನ ಸಂಘರ್ಷಗಳ ಮುಖಾಂತರ ತನ್ನ ಸಾಮಾಜಿಕ ಪ್ರಜ್ಞೆಯನ್ನು ಕಾಣಿಸಿದೆ.

ನಮ್ಮ ಕನ್ನಡ ಸಾಹಿತ್ಯ ಪರಂಪರೆಯನ್ನು ಪಕ್ವತೆಯೆಡಗಿನ ನಿಡುಗಾಲದ ಪಯಣವೆಂದೇ ಕರೆಯಬಹುದು. ಅದನ್ನೇ ಇಲ್ಲಿ ಸಾಮಾಜಿಕ ಪ್ರಜ್ಞೆಯ ವಿಕಾಸವೆಂಬ ಶೀರ್ಷಿಕೆಯಲ್ಲಿ ಚರ್ಚೆಗೆತ್ತಿಕೊಳ್ಳಲಾಗಿದೆ.

"ಸತ್ಯದ ನೆಲೆಯನ್ನು ಬೇರೆ ಬೇರೆ ಆಯಾಮಗಳಲ್ಲಿ ಹುಡುಕುವ ಪ್ರಯತ್ನ ಮಾತ್ರ ನಮ್ಮ ಸಾಹಿತ್ಯ ಪರಂಪರೆಯೊಳಗೆ ಗುರುತಿಸಬಹುದು."

ಇಲ್ಲಿನ ಬದುಕನ್ನು ಏನಾದರೂ ಮಾಡಿ ಹಸನು ಮಾಡುವ ಕೃಷಿಯಲ್ಲಿ ನಮ್ಮ ಕವಿಗಳು ಉತ್ಸಾಹದಿಂದ ತೊಡಗುತ್ತಾರೆ. ಇಂತಹ ಉತ್ಸಾಹದ ಪ್ರಯತ್ನವನ್ನು ನಾವು ಪ್ರಧಾನವಾಗಿ ಕನ್ನಡ ಜನಪದ ಸಾಹಿತ್ಯ ಪರಂಪರೆಯಲ್ಲೇ ಹೇರಳವಾಗಿ ಕಾಣಬಹುದು. ಇಲ್ಲಿನ ಎಲ್ಲಾ ಜೀವಿಗಳ ಪರವಾಗಿ ಆಲೋಚಿಸುವ ಮಾನವೀಯ ವಿವೇಕವೊಂದರ ಶೋಧವನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನೋಡಬಹುದು. ಇಂತಹ ಮಾನವೀಯ ವಿವೇಕದ ಶೋಧವನ್ನು ಈ ಅಧ್ಯಯದಲ್ಲಿ ವಿಶೇಷವಾಗಿ ಚರ್ಚಿಸಲಾಗಿದೆ.

ಹಾಗಾಗಿ ಕನ್ನಡ ಸಾಹಿತ್ಯವು ಅಂದು ಕಾಲಕ್ಕೆ ತಕ್ಕಂತೆ ಬಿಡುಗಡೆಯ ಆಶಯಗಳನ್ನು ಆಯಾ ಯುಗ ಸಂದರ್ಭದ ಪರಿಭಾಷೆಗಳ ಮೂಲಕ ಕಟ್ಟಿಕೊಡುತ್ತಾ ಬಂದಿದೆ ಮತ್ತು ಶ್ರದ್ಧೆಯ ರೀತಿಯಲ್ಲಿ ಪ್ರಕಟಿಸುತ್ತಾ ಬಂದಿದೆ. ಅಷ್ಟೆ ಅಲ್ಲ ಅಂತಹ ಪ್ರಕ್ರಿಯೆಯಲ್ಲಿ ಒಂದು ವಿನೂತನ ವಿಕಾಸವನ್ನು ನಮಗೆ ಕಾಣಿಸಿದೆ. ಪ್ರತಿಯೊಂದು ಹಂತದಲ್ಲಿ ಕನ್ನಡದ ಕಾಳಜಿ ಮತ್ತು ತಾತ್ವಿಕತೆಯು ಚಿಂತನಾ ಮುಖಿಯಾಗಿ ಬೆಳೆದಿರುವುದನ್ನು ಕಾಣಬಹುದು. ಇನ್ನು ಮುಂದೆ ಅದೇ ಪರಂಪರೆಯು ಕಟ್ಟಿಕೊಟ್ಟಿರುವ ಕೆಲವು ಚಿಂತನೆಗಳ ಮೂಲಕ ಸಮೀಕ್ಷಿಸಬಹುದು.

ಸಾಮಾಜಿಕ ಪ್ರಜ್ಞೆ

ಕಳೆದ ಶತಮಾನದಲ್ಲಿ ಭಾರತದಲ್ಲಿ ತಳವೂರಿದ್ದ ವಸಾಹತುಶಾಹಿ ವ್ಯವಸ್ಥೆಯನ್ನು ಬಹುನೆಲೆಗಳಿಂದ ಎದುರಾದ ನವೋದಯ ಕಾಲಘಟ್ಟವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯವಾದುದು. ಅಂದಿನ ಸಂದರ್ಭದಲ್ಲಿ ಸಾಹಿತ್ಯದ ಮೂಲಕ ಸೃಷ್ಟಿಯಾದ ಪ್ರತಿ ಕ್ರಿಯೆಗಳು ಈ ಹೊತ್ತಿಗೂ ಒಂದು ವಿನೂತನ ಪ್ರತಿರೋಧದ ಮಾದರಿಯಾಗಿ ನಮ್ಮೆದುರಿಗಿದೆ. ಭಾರತದ ಸತ್ವ ಕೇಂದ್ರವನ್ನು ಮುನ್ನೆಲೆಗೆ ತರಬೇಕಾಗಿದ್ದ ತುರ್ತಿನಲ್ಲಿ ನಮ್ಮ ನೆಲದ ಬಹುಪಾಲು ಸಂವೇದನಾಶೀಲರು ಪೂರ್ವ ಪರಂಪರೆಯ ಅಜ್ಞಾತ ನೆಲೆಗಳನ್ನು ತಡಕಾಡತೊಡಗಿದ್ದು ಈಗ ಇತಿಹಾಸ. ವಸಾಹತುಶಾಹಿಯ ಎದುರು ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾದ ದಾರಿಯಲ್ಲಿ ನಮ್ಮ ಹಲವು ದೊಡ್ಡ ಲೇಖಕರು ಏಕಕಾಲದಲ್ಲಿ ಸಾಹಿತಿಯಾಗಿ, ಸಮಾಜವಿಜ್ಞಾನಿಯಾಗಿ, ಚರಿತ್ರಕಾರರಾಗಿ, ಮನೋವಿಜ್ಞಾನಿಯಾಗಿ ತೊಡಗಿಸಿಕೊಂಡದ್ದು ಗಮನಾರ್ಹ ಸಂಗತಿ. ಹೀಗೆ ಇಷ್ಟೆಲ್ಲಾ ಪಾತ್ರಗಳನ್ನು ಒಮ್ಮೆಲೆ ವಹಿಸಬೇಕಾಗಿ ಬಂದಾಗ ಸಹಜವಾಗಿ ನಾಡು-ನುಡಿ ಪ್ರಕೃತಿಯ ಕುರಿತು ಒಂದು ಬಗೆಯ ಭಾವಾವೇಶವು ಕಾಣಿಸಿಕೊಂಡದ್ದು ಸತ್ಯ. ಈ ಬಗೆಯ ಅಭಿಮಾನದ ನೆಲೆಯ ಭಾವಾವೇಶದ ಮೊತ್ತವಾಗಿಯೇ ಇಡೀ ಶತಮಾನವನ್ನು ಆವರಿಸಿಕೊಳ್ಳಬಲ್ಲ ಸಂಪದ್ಭರಿತ ಸಾಹಿತ್ಯವು ರಚನೆಯಾಯಿತೆಂದರೆ ಉತ್ಪ್ರೇಕ್ಷೆಯಾಗಲಾರದು.

ಪು.ತಿ.ನ. ರವರು ನವೋದಯ ಯುಗದ ಬಹುದೊಡ್ಡ ವಾಸ್ತವವಾದಿ ಬರಹಗಾರರು. ಆ ಕಾಲದ ಇತರ ಲೇಖಕರಲ್ಲಿ ಸಹಜವಾಗಿದ್ದಂತಹ ಭಾವುಕ ಉತ್ಸಾಹದ ನಿರೂಪಣೆಯನ್ನು ಕೈಬಿಟ್ಟು ತಮ್ಮದೇ ಆದ ಮಾರ್ಗವನ್ನು ಕೈಗೊಂಡವರು. ಅವರೇ ಹೇಳಿಕೊಂಡಿರುವಂತೆ ಅವರದು ಸ್ವಾನುಭವ ನಿಷ್ಠವಾದ ವಾಸ್ತವತಾ ಮಾರ್ಗ. ಕಂಡದ್ದನ್ನು ಕಂಡ ಹಾಗೆಯೇ ನಿರೂಪಿಸುವ ದಾರ್ಷ್ಟ್ಯತನದಿಂದ ಸೃಷ್ಟಿಯಾದ ಮಾರ್ಗ. ಒಂದು ಬಗೆಯ ಅನ್‌ರೊಮ್ಯಾಂಟಿಕ್ ಎನ್ನಿಸುವ ಮನೋಭಾವದಲ್ಲಿ ಮೂಡಿದ್ದು ಮೇಧಾವಿ ಮನುಷ್ಯನೊಬ್ಬ ಜನಸಮೂಹದ ಮಧ್ಯೆ ನಿಂತು ವಿಚಾರ ವಿನಿಯಮದಲ್ಲಿ ತೊಡಗಿದಂತೆ ಅವರ ಬರವಣಿಗೆಯ ದಾಟಿ ವಸಾಹತುಶಾಹಿ ಕಾಲಘಟ್ಟದಲ್ಲಿ ಜನ ಬದುಕು ಅರಿಯಬೇಕಾಗಿದ್ದ ವಿಚಾರವನ್ನು ತಮ್ಮ ನಿರಾಡಂಬರ ಶೈಲಿಯಲ್ಲಿಯೇ ಕಟ್ಟಿಕೊಟ್ಟ ಹೇಳಿಕೆ ಪು.ತಿ.ನ ಅವರದ್ದು. ಈ ಹೊತ್ತಿಗೂ ಅದೊಂದು ಮಾದರಿಯಾಗಿ ಕನ್ನಡದ ಸಂದರ್ಭದಲ್ಲಿ ಉಳಿದುಕೊಂಡಿರುವುದನ್ನು ನಾವು ವಿವೇಚಿಸಬಹುದಾಗಿದೆ.

ಅಧ್ಯಾಯ ಮೂರು

ಪು.ತಿ.ನ. ಅವರ ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆ

ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್ ಅವರು ರಚಿಸಿರುವ ೧೨ ಪ್ರಮುಖ ಕವನ ಸಂಕಲನಗಳಲ್ಲಿ 'ಹಣತೆ' ಕವನ ಸಂಕಲನವು ಮೊದಲ ಮೇರು ಕೃತಿಯಾಗಿ ೧೯೩೩ರಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರ ಮುನ್ನುಡಿಯೊಂದಿಗೆ ಪ್ರಕಟವಾಯಿತು. ತದ ನಂತರ 'ಮಾಂದಳಿರು', 'ಶಾರದಾ ಯಾಮಿನಿ', 'ಗಣೇಶದರ್ಶನ', 'ರಸಸರಸ್ವತಿ', 'ಮಲೆದೇಗುಲ', 'ಹೃದಯವಿಹಾರಿ', 'ಇರುಳಮೆರಗು' ಮತ್ತು 'ಹಳೇಬೇರು ಹೊಸಚಿಗುರು' ಎಂಬ ಕವನ ಸಂಕಲನಗಳನ್ನು ಮತ್ತು ಶ್ರೀ ಹರಿಚರಿತೆ ಎಂಬ ಪುಟ್ಟ ಮಹಾಕಾವ್ಯವನ್ನು ರಚಿಸಿದ್ದಾರೆ.

ಈ ಬಗೆಯ ಸಂಕಲನಗಳಲ್ಲಿ 'ಕಣಿವೆಯ ಮುದುಕ' ವಿಶ್ವಕುಟುಂಬಿಯ ಕಷ್ಟ, ರಂಗವಲ್ಲಿ, ನನ್ನನಾಯಿ, ಪ್ರತೀಕ್ಷೆ ಮುಂತಾದ ಕವನಗಳು ಸಾಮಾಜಿಕ ಚಿಂತನೆಯನ್ನು ಮೂಡಿಸುತ್ತದೆ. ಇವರ ಸಾಹಿತ್ಯ ಕೃಷಿಯು ಕನ್ನಡ ಸಾರಸ್ವತ ಲೋಕದಲ್ಲಿ ಉತ್ತಮ ಫಸಲೆಂದೇ ಹೇಳಬಹುದು. ನವೋದಯ ಕಾಲದ ಆಸ್ತಿಕ, ಅಧ್ಯಾತ್ಮ, ಪರಿಸರ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯ ದೃಷ್ಟಿಕೋನ, ಇವೆಲ್ಲವುಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ಮುನ್ನೆಡೆದ ಧೀಮಂತ ಕವಿ ಎಂದು ಬಣ್ಣಿಸಬಹುದು.

ಪು.ತಿ.ನ ರವರು ಯದುಗಿರಿಯೆಂದು ಪ್ರಸಿದ್ಧಿ ಪಡೆದ ಮೇಲುಕೋಟೆಯ ಮೇರುಶಿಖರವಾಗಿ ಪ್ರಜ್ವಲಿಸುತ್ತಾ ತಮ್ಮ ಪ್ರೌಢಿಮೆಯ ಮೂಲಕ ಕವಿತ್ವ ಹಾಗೂ ಗೀತ ನಾಟಕಗಳಿಂದ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಆದುದರಿಂದ ಯಾವುದೇ ಕವಿಯಾದರೂ ಭುವಿಯನ್ನು ಅರ್ಥೈಸಿಕೊಂಡು ಪ್ರಮುಖವಾದ ರಸವಿನ್ಯಾಸಗಳನ್ನು ಕಂಡುಹಿಡಿದು ಪ್ರಸ್ತುತ ಪ್ರಸಿದ್ಧವಲ್ಲದ ವಿಷಯ-ಗಳನ್ನು ಬೆಳಕಿಗೆ ತಂದು ಸಮಾಜದ ಶ್ರೀಸಾಮಾನ್ಯ ಕಾಲಮಾನದ ಅತಿಮುಖ್ಯ ಅವಶ್ಯಕತೆ, ಜೀವನ ಚಿಂತನೆಯನ್ನು ತನ್ನ ಕಲ್ಪನೆಯೊಂದಿಗೆ ಒಗ್ಗೂಡಿಸಿ ಕಾವ್ಯರಚಿಸಿ ರಸಕ್ರಿಯೆಗೆ ನ್ಯಾಯ ಒದಗಿಸುವುದೇ ಪ್ರಮುಖ ಆಶಯವಾಗಿರುತ್ತದೆ.

ರೋಚಕತೆಯು ಕಾವ್ಯಕ್ಕೆ ಮೂಲವೆನ್ನುತ್ತಾರೆ ಪು.ತಿ.ನರವರು ರೋಚಕತೆ ಇಲ್ಲದಿದ್ದರೆ ಲಭಿಸುವುದು ಪ್ರಸಾರ ಸಾಹಿತ್ಯ, ಪ್ರಚೋದಕ ಸಾಹಿತ್ಯ, ಪ್ರಬೋಧನೆ ಸಾಹಿತ್ಯ. ಈ ಸಾಹಿತ್ಯದಿಂದ ಪ್ರಯೋಜನವಿಲ್ಲವೆಂದು ಅದನ್ನು ನಿರ್ಮಿಸತಕ್ಕಂಥವರು

ಬೆಲೆಯಿಲ್ಲದವರೆಂದಲ್ಲ. ಸತ್ಕಾವ್ಯದಲ್ಲೂ ಈ ಅಂಶಗಳಿದ್ದೇ ಇವೆ. ಕಾಲಾನುಗುಣವಾಗಿ ಅವುಗಳಿಗೆ ಪ್ರಾಮುಖ್ಯತೆ ಬರುತ್ತದೆ.

ಕವಿಯ ಗುರಿ ಭಾವನೆಗಳಿಗೆ ಪ್ರಾಮುಖ್ಯತೆ ನೀಡುವುದಾಗಿದೆ. ಕವಿಗೂ ಅವತಾರಕ್ಕೂ ಇಲ್ಲದ ವ್ಯತ್ಯಾಸವನ್ನು ಕುರಿತ ಈ ಹೇಳಿಕೆ ತೀರ ಹೊಸದು. ಅರ್ಥ ಕಾಮಗಳು ಹದಗೆಟ್ಟು ಧರ್ಮಗ್ಲಾನಿಯಾದಾಗ ಭಗವದವತಾರಕ್ಕೆ ಬಯಸುತ್ತದೆಯೋ ಹೊರತು ಕವಿಗಲ್ಲ. ಆ ಮಹದವತಾರದಿಂದ ಅರ್ಥ ಕಾಮಗಳು ಹದಕ್ಕೆ ಬಂದು ಧರ್ಮದ ಸತ್ವವೃದ್ಧಿಯಾಗಿ ಜೀವನ ಸಮೃದ್ಧವಾದ ಮೇಲೆ ಕವಿ ಸಂಭೂತಿ ಕಾವ್ಯೋದಯ ಆ ಅವತಾರ ಸೂರ್ಯನ ತೇಜಸ್ಸನ್ನು ಸಂಯಮಿಸಿ ಮರಳಿ ಈ ಭವದ ಮೇಲೆ ಸ್ಮೃತಿರೂಪದಲ್ಲಿ ಚೆಲ್ಲುವುದಕ್ಕಾಗಿ ಆ ಭವವೇ ಕವಿಯನ್ನು ಕಲ್ಪಿಸಿಕೊಳ್ಳುತ್ತದೆ. ತಕ್ಕ ಕಾಲದಲ್ಲಿ ಭಾವನೆಗಳಿಗೆ ನೀಡುವ ಪ್ರಾಮುಖ್ಯತೆಯು ಕಾವ್ಯದ ಪ್ರಮುಖ ಗುಣವಾದ್ದರಿಂದ ಅದರ ವಸ್ತು ಭಿನ್ನತೆಯಿಂದ ಕೂಡಿದ್ದು, ಅಶ್ಲೀಲತೆಯ ಸೋಂಕಿಲ್ಲ. ಕಾವ್ಯದಲ್ಲಿ ಎಲ್ಲವೂ ಅಸಾಧ್ಯವಾಗುತ್ತದೆ ಎನ್ನುತ್ತಾರೆ. ಪು.ತಿ.ನ. ಭಾವನೆಗಳ ಪ್ರಾಮುಖ್ಯತೆಯಿಂದ ನಮಗೆ ಲಭಿಸುವುದು ಹೃದಯಶುದ್ಧಿ, ದರ್ಶನದ ಶುದ್ಧಿ ಮತ್ತು ಭಾವನೆಗಳ ಸಮ್ಯಕ್‌ಜ್ಞಾನ. ಈ ನಿಲುವಿನಲ್ಲಿ ಕವಿಗಳು ಸಮದರ್ಶಿಗಳು ವಸ್ತುವಿನಿಂದ ಕವಿತ್ವಕ್ಕೆ ಉನ್ನತಿಯಾಗಲಿ, ಅವನತಿಯಾಗಲಿ ಲಭಿಸದು. ಆ ವಸ್ತುವಿನ ವಿಷಯದಲ್ಲಿ ಕವಿಯ ಮನಸ್ಸು ನಿಲ್ಲುವ ನೆಲೆಯ ಬೆಲೆಯಿಂದ ಆ ಕಾವ್ಯಕ್ಕೆ ಉತ್ತಮ ಮೌಲ್ಯ ಲಭಿಸುತ್ತದೆ ಎಂದು ಈ ಸಂಬಂಧವಾಗಿ ಪುಷ್ಪ ಧ್ರುವಗಳ ಹೋಲಿಕೆಯನ್ನು ಕೊಡುತ್ತಾರೆ.

ಪು.ತಿ.ನ.ರವರು "ಶರತ್ಕಾಲದಲ್ಲಿ ಹಸುರೆಲೆಗಳನ್ನು ಹೆಸರಿಸಿ ಸಮಸ್ತ ಬೋಗಗಳನ್ನು ಪಡೆಯುತ್ತಾ ಶಿಶಿರದಲ್ಲಿ ತಾನು ಪಡೆದುದನ್ನು ಪರಿಷ್ಕರಿಸಿ ರೂಢಿಸಿ-ಕೊಳ್ಳುವಾಗ ಶುಷ್ಕವಾಗುತ್ತಾ ಮರಳಿ ವಸಂತದಲ್ಲಿ ತಮ್ಮನ್ನು ಯಾವ ವಿಷಯದಲ್ಲಿ ಹೋಲಿಕೆಯಾಗದ ಕಸುಬುಗಳ ಶೋಭೆಯನ್ನು ಮರಗಳು ತಾಳುವಂತೆ ಕವಿಯು ಕೂಡಾ ಅನುಭವಗಳನ್ನು ಪಡೆಯುತ್ತಾ ಸಂಯಮಿಸುತ್ತಾ ಅವುಗಳಿಂದ ತನ್ನನ್ನು ಮರೆಸಿಕೊಳ್ಳುತ್ತಾ ಕಾವ್ಯ ಕುಸುಮ ರೂಪದಲ್ಲಿ ಅವನ್ನು ಸ್ಥಿರತೋರುವಾಗ ಅವಕ್ಕೆ ತಕ್ಕ ರಂಗು ರೂಪು ಕಂಪುಗಳು ಪ್ರಾಪ್ತವಾಗುತ್ತವೆ. ಹಾಗಾಗಿ ವಾಸ್ತವ ಜಗತ್ತಿಗೂ ಕಾವ್ಯ ಜಗತ್ತಿಗೂ, ಶಾಸ್ತ್ರಕ್ಕೂ ಇರುವ ಭಿನ್ನತೆಯನ್ನು ಭಾವನೆಗಳ ಲೋಕದಲ್ಲಿ ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ನಿರೂಪಿಸಲಾಗಿದೆ.

ಪು.ತಿ.ನ. ಅವರು ತಮ್ಮ ಮೇಲುಕೋಟೆಯ ಪರಿಸರವನ್ನು ಸಾಮಾಜಿಕ ಪ್ರಜ್ಞೆಯ ಅನೇಕ ನೆಲೆಗಳಲ್ಲಿ ವಿಸ್ತರಿಸಿ ಕಾವ್ಯವನ್ನು ರಚಿಸಿ ರಾಷ್ಟ್ರೀಯ ಪ್ರಜ್ಞೆಯನ್ನು ಸಮರ್ಪಕವಾಗಿ ಬೆಳೆಸಿದವರು. ಇವರು ಸ್ವಾತಂತ್ರ್ಯ ದಿಶೆಯಲ್ಲಿ ಗಾಂಧೀಜಿಯ ಜನನ, ಜೀವನ ಮರಣಗಳು, ಶ್ರವಣಬೆಳಗೊಳದ ಬಾಹು ಬಲಿಯ ಧನಾತ್ಮಕವಾದ ವೈರಾಗ್ಯವನ್ನು 'ಹಣತೆಯ' ಕವನ ಸಂಕಲದಿಂದ ಪ್ರಾರಂಭವಾದ ನನ್ನ ಹಾಡು ಕವಿತೆಯಿಂದ ಆರಂಭವಾಗಿ 'ವಿಜಯನ ತೇರು' ಎನ್ನುವ ಕವನದವರೆಗೂ ಅನೇಕ ದೇಶಿಯ ಮಾರ್ಗ ಹಾಗೂ ಅಧ್ಯಾತ್ಮ ಸಮಾಜದ ಹಲವು ಸ್ತರಗಳನ್ನು ಪು.ತಿ.ನ. ರವರು ತಮ್ಮ ಕಾವ್ಯದೃಷ್ಠಿಯಲ್ಲಿ ಸಾಕಾರಗೊಳ್ಳುತ್ತಿದ್ದಾರೆ. ಮಡಿವಂತಿಕೆಯ ಕೆಲವು ಕವನಗಳು ಕೂಡ ಎರಡು ಮೂರು ಬಾರಿ ಓದಿದಾಗ ಅದರಲ್ಲೂ ಸಾಮಾಜಿಕ ಅಂಶವನ್ನು ಗುರುತಿಸಬಹುದಾಗಿದೆ ಹಾಗೂ ಕವಿಯ ಮನೋಧರ್ಮವನ್ನು, ವಿಶಾಲತೆಯನ್ನು ಮತ್ತು ಸಹೃದಯವನ್ನು ಅರ್ಥಮಾಡಿ ಕೊಳ್ಳ ಬಹುದು. ನನಗೆ ನನ್ನ ವಿಷಯಧಾರಿತವಾಗಿ ಅಧ್ಯಯನ ನಡೆಸಿದಾಗ ಪು.ತಿ.ನ. ಅವರು ಈ ಕಾಲಮಾನ ಸಮಾಜಕ್ಕೆ ಎಷ್ಟು ಪ್ರಸ್ತುತ ಎಂದು ಕೆಲವು ವಿಮರ್ಶಕರ ಮಾತನ್ನು ಕೇಳಿದ್ದೇನೆ. ಆದರೆ ನನ್ನ ದೃಷ್ಠಿಕೋನದಲ್ಲಿ ಅವರ ಕಾವ್ಯದ ವಸ್ತು ವಿಷಯ ಹಾಗೂ ಸಾಮಾಜಿಕ ಪ್ರಜ್ಞೆಯ ಅಂಶಗಳನ್ನು ಅಗತ್ಯವಾಗಿ ಪ್ರಸ್ತುತ ಕಾಲಮಾನಕ್ಕೆ ತಂದು ವಿವೇಚಿಸಬಹುದಾಗಿದೆ.

ಮೇಲುಕೋಟೆಯ ಪರಿಸರದಿಂದ ಉಂಟಾದ ಹೃದಯ ಪರಿಪಾಠದ ಫಲಶೃತಿ ಎಂಬಂತೆ ಪು.ತಿ.ನ. ಅವರಿಗೆ ಸಾಮಾಜಿಕ ಪ್ರಜ್ಞೆಯ ಜೊತೆಗೆ ಪ್ರಕೃತಿಯೆಂದರೆ ಅವರಿಗೆ ಬಲು ಪ್ರೀತಿ. ಅನನ್ಯವಾದ ಉಪಾಸನಾ ಮನೋಭಾವ, ಅಂತೆಯೇ ಋತುಮಾನದ ಒಂದೊಂದು ನಿಲುವು. ಹಗಲಿರುಳಿನ ಒಂದೊಂದು ನೋಟ ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತಲೇ ಅವರ ಹೃನ್ಮನದ ಕಣ್ಣುಗಳನ್ನು ತೆರೆಯುತ್ತದೆ. ಅವರ ಸೃಷ್ಠಿಕಾರಕ ಪ್ರತಿಭೆಗೆ ಪ್ರೇರಣಾಸ್ತೋತ್ರವಾಗುವುದರೊಂದಿಗೆ ಅವರ ಕಾವ್ಯದಲ್ಲಿ ಭಕ್ತಿಯ ಪರಿಮಳ ಪ್ರವಹಿಸುವಂತೆಯೂ ಚಿಂತನೆಯ ಕಾಂತಿ ಪ್ರತಿಫಲಿಸುವಂತೆಯೂ ಮಾಡುತ್ತದೆ. ಈ ಮಾತಿಗೆ ಅವರ 'ಮಳೆಯು ನಾಡ ತೊಯ್ಯುತಿರೆ' ಕವನವು ಒಂದು ಹೊಳೆಯುವ ನಿದರ್ಶನವಾಗಿದೆ.

ಮಳೆಯು ನಾಡ ತೊಯ್ಯುತಿರೆ
ಮಿಂಚಿಗಿರುಳು ಬೆದರುತಿರೆ
ಗೂಡ ಮುದ್ದು ಗೊಲ್ಲನೆಡೆಯೊಳೊಂದು ಹಣತೆ ಮಿರುಗುತಿರೆ[9]

ಮಳೆಗಾಲದ ಇರುಳೊಂದರಲ್ಲಿ ಕಣ್ಣಿಗೆ ಮುದ್ದುಗೊಲ್ಲನೊಬ್ಬನ ಗೂಡು. ಅಲ್ಲಿ ಮಿರುಗುವ ಹಣತೆ ಹೃದಯಕ್ಕೆ ಮುದವನ್ನಿತ್ತು ಮನದ ಕಣ್ಣನ್ನು ತೆರೆದು ಕವಿಯನ್ನು ಅಂತರ್ಮುಖಿ ಯಾಗಿಸುತ್ತದೆ. ಭಾಗವತ ಪರಂಪರೆಯ ಸಂಸ್ಕಾರ ವಿಶೇಷತೆಯ ಪರಿಣಾಮವೆಂಬಂತೆ ಕವಿಯ ಅಂತರಂಗದಲ್ಲಿ ನಿಗೂಢ ಸೆಲೆಯೊಡೆಯುತ್ತದೆ. ಇಂಥದೇ ಆದ ಮಳೆಗಾಲದ ಒಂದು ಇರುಳಿನಲ್ಲಿ ಜನ್ಮ ತಾಳಿದ ಭಗವಾನ್ ಶ್ರೀಕೃಷ್ಣನ ನೆನಪು ಮನಸ್ಸಿನಲ್ಲಿ ಮಿಂಚಿ, ಆತನ ಬದುಕಿನ ಸ್ವರ್ಣಮಯ ಚಿತ್ರಗಳನ್ನು ಕವಿಯ ಬಗೆಗಣ್ಣಿನೆದುರು ಒಂದೊಂದಾಗಿ ಹೊಳೆಯಿಸುತ್ತದೆ. ತನ್ಮೂಲಕ ಆತನನ್ನು ಸ್ವಪ್ನಲೋಕ ವಿಹಾರಿಯನ್ನಾಗಿಸುತ್ತದೆ. ಆದರೆ ಅದೆಲ್ಲ ಕ್ಷಣವೊಂದರ ಮಾತಾಗುತ್ತದೆ. ಕನಸು ಕರಗಿ, ವಾಸ್ತವತೆಯ ಇರವು ಅರಿವಿಗೆ ಬಂದಾಗ

ಇಂದು ನಮ್ಮ ಬಾಳು ಗೋಳು ಬಯಲು, ಹುಸಿಯು.....

ಎಂಬುದು ಹೃದ್ಗತವಾಗಿ ನಿಟ್ಟುಸಿರೊಂದು ಹೊಮ್ಮುತ್ತದೆ. ಕವಿಗೆ ಪ್ರೇರಕವಾದ ಪ್ರಕೃತಿಯ ನೋಟ ಇಲ್ಲಿ ಮೂರೆ ಮೂರು ಸಾಲುಗಳಲ್ಲಿ ಒಂದು ಸುಂದರ ಚಿತ್ರವಾಗಿ ಕಾಣತೊಡಗಿದರೆ. ಅದರಿಂದ ಸ್ಫೂರ್ತಿಗೊಂಡ ಭಗವಂತನ ಕೃಷ್ಣವಾತಾರದ ಕಥಾನಕವು ಮೂವತ್ತೈದು ಚರಣಗಳುದ್ದಕ್ಕೂ ಹರಡಿಕೊಂಡು ಭಕ್ತಿಯ ಪರಿಮಳ ನೀಡುವಂತೆ ಮಾಡಿದೆ. ಅನಂತರದಲ್ಲಿ ಜಾಗೃತಗೊಂಡ ಸಾಮಾಜಿಕ ಪ್ರಜ್ಞೆಯ ಮನಸ್ಸು ಅದು ಇಂದಿನ ಸಮಾಜದ ಓರೆ ಕೋರೆಗಳನ್ನು ತೂಗಿ ನೋಡುವ ಚಿಂತನಶೀಲತೆಗೆ ಎಡೆಗೊಟ್ಟು, ಇಂದಿನ ಬದುಕಿನ ಸ್ವಾರ್ಥತೆಗಾಗಿ ಮರುಗುವ ದೃಷ್ಟಿಕೋನದೊಳಗೆ ಕವನವನ್ನು ಮುಕ್ತಾಯಗೊಳಿಸಿದೆ. ಹೀಗೆ ಕವಿಯ ಮನಸ್ಸು ಪ್ರಕೃತಿಯೆಡೆಗೆ ತಲ್ಲಣವನ್ನು ಮೂಡಿಸಿದೆ ಆದರೂ ಸಹ ಸಾಮಾಜಿಕವಾಗಿ ಅವರು ತಮ್ಮ ಸೃಜನಶೀಲ ಚಿಂತನೆಗೆ ಓರೆ ಹಚ್ಚಿ ನೋಡುತ್ತಾರೆ.

ಇಂದಿನ ರಾಜಕೀಯ ಅರಾಜಕತೆ ಹಾಗೂ ಭ್ರಷ್ಟಾಚಾರವನ್ನು ಸಾಬೀತುಗೊಳಿಸುವಂತೆ ಗೊಮ್ಮಟ ಶ್ರವಣ ಬೆಳಗೊಳವನ್ನು ಕುರಿತು

ಒಳಗುಗುವ ಚಿತ್ಸುಖವ ಪ್ರತ್ಯಕ್ಷಗೊಳಿಸುವೊಲು
ಕಣ್ಣನರೆತೆರೆದು ಮಿದುನಗೆಯೊಡನೆ ಕೆಳಗೊಳಿಸಿ
ತನ್ನ ಸುಖವನ್ನರಿಗು ದೊರೆ ವೊಲನುಕಂಪಿಸುತ
ಇಳಿಮುಗಿಲ ಸೋಪಾನ ಮಾರ್ಗದೊಲು ನಿಂತನಿವ

ತನ್ನ ನೀತಿಗಾಗಿ ಧರ್ಮಕ್ಕಾಗಿ ತನ್ನ ಮುಕ್ತಿಗಾಗಿ ತನ್ನ ಸ್ವಂತ ಗಳಿಕೆಯ ಅಪಾರ ಸಂಪತ್ತನ್ನು ಅಣ್ಣನ ಕುತಂತ್ರಕ್ಕೆ ಧಾರೆ ಎರೆದು ತಾನು ಎಲ್ಲಾ ರೀತಿಯಲ್ಲೂ ಸಮರ್ಥನಿದ್ದರೂ ವೈರಾಗ್ಯ ತ್ಯಾಗದ ಮುಂದೆ ಬಾಹ್ಯ ಸಮರ್ಥನಗಳು ಕ್ಷುಲ್ಲಕವೆಂದು ತಿಳಿದು ಒಲ್ಲದ ಜೀವನ ನಡೆಸುವುದು ಸರಿಯಲ್ಲವೆಂದು ಜಗಕ್ಕೆ ಸಾರಿದ ಮಹಾತ್ಮನೆಂದು ಬಾಹುಬಲಿಯನ್ನು ಕುರಿತು ಪು.ತಿ.ನ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

'ಬುದ್ಧ' ಎಂಬ ಪದ್ಯಭಾಗದಲ್ಲಿ ಸಮಾಜದ ಸ್ವಾಸ್ತ್ಯವನ್ನು ಕಾಪಾಡಿದ ಲೋಕಗುರು ಬುದ್ಧನನ್ನು ಕುರಿತು ಪು.ತಿ.ನ. ನಿರೂಪಿಸಿರುವ ಪರಿಯೇ ವಿಶಿಷ್ಟತೆಯಿಂದ ಕೂಡಿದೆ.

ನೀನಂದ ಚಿನ್ಮೂರ್ತಿ ಭಾವಸುಪ್ತಿಗೆ ಸಂದು
ಲೀಲೆಯಿಂ ಬಗೆಗೊಂಡೆ ಜಗದ ಜೀವನದ ಕನಸ
ಕಾಲದೇಶವ್ಯಾಪ್ತಿ ಕನಸಿನೊಳು ನಿನಗಾಯ್ತು
ಆನಂದ ವೆರಡಾಯ್ತು, ಚಿತ್ತು ಚಿದಚಿತ್ತಾಯ್ತು
ಎಚ್ಚರಲು.ಹೇ ಬುದ್ಧ, ಹಿಂಗಿತಾ ಭವಕ್ರಾಂತಿ
ಸೋಲಿಲ್ಲ. ಸಾವಿಲ್ಲ, ಏನಿಲ್ಲ ಶೂನ್ಯ ಶಾಂತಿ.[3]

ಈ ಜಗತ್ತಿನ ಸುಂದರ ಸ್ಥಿರವಾದ ಕನಸು ಕಂಡು ನನಸು ಮಾಡಲು ಶ್ರಮಿಸಿದವನೇ ಜಗದ ಜನರ ಬವಣೆಯನ್ನು ನೀಗಿಸಲು ನಿರಂತರ ದುಡಿಯುವನೆ, ಕಾಲದೇಶದ ಸ್ಥಿತಿಗತಿಗಳನ್ನು ತಳದವನೆ. ನೀನೆ ನಿನ್ನ ಅಂತರಂಗದ ಚೆಲುವನ್ನು ಸಮಾನತೆಯ ಸಮಾಜವನ್ನು ಕಟ್ಟಲು ಪ್ರಯತ್ನಿಸಿದವರಲ್ಲಿ ಮೊದಲಿಗವನಾದೆ ಎಂದು ಸಮಾಜಮುಖಿಯಾಗಿ ಆಲೋಚಿಸಿದ ಹಾಗೂ ಕಾರ್ಯಗತಗೊಳಿಸಿದ ಭಗವಾನ್ ಬುದ್ಧನನ್ನು ಕುರಿತು ಪು.ತಿ.ನರವರು ತಮ್ಮ ಕವನದಲ್ಲಿ ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ಚಿತ್ರಿಸಿದ್ದಾರೆ.

ಪು.ತಿ.ನ. ಅವರ ದೃಷ್ಟಿಯು ಸಮಗ್ರವಾದುದು ಅದಕ್ಕೆ ಪುಷ್ಠಿ ನೀಡುವಂತೆ ಅವರ **'ವಿಶ್ವಕುಟುಂಬಿಯ ಕಷ್ಟ'** ಪದ್ಯ ಭಾಗವನ್ನು ಗಮನಿಸುವುದಾದರೆ

ಬೇಸಗೆ ಮಧ್ಯಾಹ್ನ ತಾಪವುಮ್ಮಳಿಸಿತಾ
ಕಾಶಕೆಲ್ಲಕು ರವಿಯೊಬ್ಬ
ಬೀಸುತ ಗೋದುವೆ ಹಿಟ್ಟನ್ನು ನಾಗಿ ಆ
ಯಾಸದೊಳೆಳೆವಳು ಕಲ್ಲ
ಬಿಸಿಯುಂಡ ಬವಣೆಗೆ ನೆಲೆದೊಳು ಹೊರಳಿ ನಿಟ್ಟುಸಿ

ಕಿಳೆಯುವಳೆನ್ನ ಅಜ್ಜಿ;
ಅಸುವನ್ನು ನಮಗಾಗಿ ಮೀಸಲು ತೆಗೆದಿಟ್ಟು
ಕಸಿ ಹಣ್ಣು ಹಣ್ಣು ನಮ್ಮಜ್ಜಿ"

ಜೀವನ ಪಥದಲ್ಲಿ ಸಂಚರಿಸುವಾಗ ಸಾಕಷ್ಟು ಸಂಕಷ್ಟಗಳು ಬರುವುದು ಸರಿ, ಅವುಗಳನ್ನು ನಾನು ಎದುರಿಸಿ ಮುನ್ನುಗ್ಗಿ ದೃತಿಗೆಡೆದೆ ಯಾವುದೇ ಕಷ್ಟವಿದ್ದರೂ ದಿನಪ್ರತಿ ಉದಯಿಸುವಾಗ ಕಷ್ಟವಿಲ್ಲದ ಜೀವಿಯಿಲ್ಲ. ನಷ್ಟವನನುಭವಿಸಿದ ರಂಗವಿಲ್ಲ. ಹಾಗಾಗಿ ಅವೆಲ್ಲವುಗಳನ್ನು ನಾವು ಜೀವನ ಯಾತ್ರೆಯ ಮೂಲಕ ಕಾಣಬೇಕಾಗುತ್ತದೆ. ಇಂತಹ ಕಷ್ಟಗಳನ್ನು ಅನುಭವಿಸಿದರೆ ತಾನೇ ಮುಂದಿನ ಸುಖಕ್ಕೆ ನಾಂದಿ ಎಂದು ಹೇಳುತ್ತಾರೆ. "ಬೀಸುತ ಗೋದುವೆ ಹಿಟ್ಟನ್ನು ನಾಗಿ ಆಯಾಸದೊಳೆಳವಳು ಕಲ್ಲ. ಆಯಾಸಗೊಂಡು ಆಹಾರ ಸವಿದರೆ ಅದಕ್ಕೊಂದು ಮಹತ್ವ ಹಾಗೂ ಅದರ ರುಚಿಯೇ ರುಚಿ ಎಂದು ತನ್ನ ಅಜ್ಜಿಯೊಬ್ಬಳು ವಿಶ್ವ ಕುಟುಂಬಿಯ ಪಾತ್ರವನ್ನು ನಿರ್ವಹಿಸಿದ ಬಗೆಯನ್ನು ಪು.ತಿ.ನ. ರವರು ಸಾಮಾಜಿಕ ಪ್ರಜ್ಞೆಯ ದೃಷ್ಠಿಕೋನವನ್ನು ಅರಿತು ವಿವರಿಸಿದ್ದಾರೆ. ಬಾಧೆಗಳನ್ನು ಕುಟುಂಬ ಪೋಷಣೆಯಲ್ಲಾಗುವ ಕಷ್ಟಗಳನ್ನು ಮನೆ ಮಕ್ಕಳ ಹಸಿವನ್ನು ನೀಗಿಸಲು ಅವಳು ಕೈಗೊಳ್ಳುವ ನೀತಿ ನಿಯಮಗಳು ಅವಳಸಿದಿದ್ದು ಮಕ್ಕಳಿಗೆ ಹೊಟ್ಟೆ ತುಂಬಿಸುವಳು. ಅರಿವಿನೊಳಗೆ ಮೀಸಲು ಕಸಿಕಣ್ಣು ಹುಟ್ಟು ನಮ್ಮಜ್ಜಿ ಅವಳೆ ಒಂದು ಹಣ್ಣು ಅಂದರೆ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಅವಳು ಅಷ್ಟೊಂದು ಮಾಗಿದವಳು.

ಬೇಗೆಯ ಬವಣೆಗೆ ಜಡವಾಯ್ತು ಸೃಷ್ಠಿಯು
ಕೂಗಿಲ್ಲ-ಸದ್ದಿಲ್ಲ ಬಿಡುವು
ಬೀಗಲು-ಭಯ ಜೀವ ನೆಳಲಿಗೆ ಶರಣಾಯ್ತು
ನಾಗಿಗನಾಥೆಗೆ ಬಿಡುವೆ
ವರುಷದ ಕೂಸೆದ್ದು ಅಳುತಿರಬಹುದೇನು?
ನರಸೀಗೆ ಹಸಿವೆನೋ ಭಯವೊ
ಸರಿ ಹಗಲಚ್ಚೇರು ಬೀಸುವುದುಳಿದಿದೆ
ಇರುಳಿಗೆ ತುಸು ಹಿಟ್ಟೆ ಇಲ್ಲ"

ಬಿರು ಬೇಸಿಗೆ ಹಾಗೂ ಒಂದು ಕುಟುಂಬದ ಹೀನಾಯವಾದ ಅತೀವವಾದ ಬಡತನದ ಚಿತ್ರಗಳನ್ನು ಪು.ತಿ.ನ. ರವರು ಕಟ್ಟಿಕೊಡುತ್ತಾರೆ. ಆ ಬೇಸಿಗೆಯ ಬವಣೆಗೆ

ಜಗತ್ತು ಜಡವಾಗುತ್ತಿದೆ. ದಿನಚರಿಗಳು ಸ್ಥಬ್ಧವಾಗಿ ಬಿಡುವಿಲ್ಲದೆ ಬೇಸಿಗೆ ಜೀವ ಸಂಕುಲಕ್ಕೆ ಕಂಟಕವಾಗಿ ಪರಿಣಮಿಸಿದೆ. ಜೀವ, ಭಾವ, ಪ್ರಕೃತಿ ಮತ್ತು ರೋಚಕತೆಗಳ ನಡುವಿನ ವಿಷಯಗಳನ್ನು ಅವರು ಸುಸೂತ್ರವಾಗಿ ರಚಿಸಿದ್ದಾರೆ. ಒಂದು ವರ್ಷದ ಕೂಸು ನಿದ್ದೆ ಎಂದು ಅಳುತಿರಬಹುದೇನೋ? ಆ ಮಗುವಿನ ಸಮಾಧಾನಕ್ಕೆ ನನ್ನ ಕೈಯಲ್ಲಿ ಏನೂ ಕೂಡ ಇಲ್ಲ. ಹಸಿವೂ, ಭಯ, ಏಕೆ ಮಗುವನ್ನು ಕಾಡುವದೋ ಹಗಲಲ್ಲಿ ಹೇಗೂ ಅದು ಇದು ತೋರಿಸಿ ಸಮಾಧಾನಪಡಿಸಬಹುದು. ಇರುಳಲ್ಲಿ ಸಂತೈಸಲು ಕೊಂಚ ಇದ್ದು ಇಲ್ಲ ಎನ್ನುವ ದೈನ್ಯ ಸ್ಥಿತಿಯನ್ನು ಪು.ತಿ.ನ ಸೆರೆಹಿಡಿದಿರುವುದು ಪ್ರಸ್ತುತ ಕಾಲದಲ್ಲಿ ಕೂಡ ಸಮಾಜದಲ್ಲಿ ನಡೆಯುವ ಪರಿಗಳು ಇವು.

ಸೊರ ಸೊರ ಬುಸು ಬುಸು ಎಂಬೊಂದು ದನಿಯಂದು
ಗರಿ ಮೂಡಿದಜ್ಜಿಯ ಕನಸ
ಹರಿಯ, ತಾನೆಲ್ಲೆಡೆ ನಿರುಕಿಸಿ ಕಂಡಳು
ಸೊರಗುವ ಒಕ್ಕಲ ಹೆಣ್ಣ
ನಾಗಿ ಇದೇನವ್ವ ಬಿಸಿಲೊಳು ಕಣ್ಣೀರು!
ಸಾಗಿದ ಗಂಡನ ನೆನಪೆ?
ಬೇಗುದಿಗೊಂಬೆಯ ಬದುಕಿನ ಬವಣೆಗೆ
ಮಾಗಿಲ್ಲವೆ ಬಾಳದ ಗಾಯ?[೬]

ತಾಣವಿಲ್ಲದ ಅಜ್ಜಿ ಎಷ್ಟು ಯೋಜನೆಗಳನ್ನು ಮಾಡಿದರೇನು ಪ್ರಯೋಜನ, ಕನಸುಗಳಿಗೆ ಗರಿ ಮೂಡಿದರೇನು. ಫಲಕೊಡುವ ವಿವೇಚನೆಯ ಅರ್ಥವಂತಿಕೆಯನ್ನು ಅಥವಾ ಆ ಸಂದರ್ಭಕ್ಕೆ ಬೇಕಾಗುವ ವಿಷಯವನ್ನು ವಿಚಾರವನ್ನು ಅವಳು ಪಡೆದಿರುವವಳೆ ಅಷ್ಟು ಶಕ್ತಿ ಅವಳಗಿದೆಯೇ ಎಂಬ ಪ್ರಶ್ನೆ ಮಾಡುವುದು ಸಹಜ ಎಷ್ಟು ಪ್ರಯತ್ನ ಪಟ್ಟರೂ ಕೂಳು ಗಿಟ್ಟಿಸುವಲ್ಲಿ ಸೋಲುವುದು ಖಚಿತ ಎಂದು ತಿಳಿದಿರುವಾಗ ವಿಫಲ ಪ್ರಯತ್ನ ಎಷ್ಟು ಮಾಡಿದರೇನು ಪ್ರಯೋಜನ, ನಾಗಿಗೆ ಹೇಳುತ್ತಿದ್ದಾಳೆ ಇದೇನವ್ವ ಈ ಬಿಸಿಲಿನಲ್ಲಿ ಕಣ್ಣೀರು? ವಾತಾವರಣ ಸುಡುತ್ತಿದೆ ಕಣ್ಣೀರು ಸುಡುತ್ತಾ ಸುರಿಯುತ್ತಿದೆ ಎಂದೋ ಅಲ್ಪ ಆನಂದದಿಂದ ಇದ್ದ ನೆನಪು. ಅದು ಗಂಡನ ಆಶ್ರಯವಿದ್ದಾಗ ಎಂದು ಹಳೆಯ ನೆನಪುಗಳನ್ನು ಮೆಲುಕುತ್ತಿರುವುದು ಇಷ್ಟೆಲ್ಲಾ ಬೆಗುದಿಗಳಲ್ಲಿ ಬೆಂದಿದ್ದರು ಸಂಸಾರ ವಿಚಾರಗಳು ಸಾಕಷ್ಟು ಇರುತ್ತದೆ.

ಇಷ್ಟೆಲ್ಲಾ ಸಂಘರ್ಷಕ್ಕೆ ತೊಡಗಿದ್ದರು ನಾನು ಬಾಳಿನಲ್ಲಿ ಇನ್ನೂ ಕೂಡ ಮಾಗಲಿಲ್ಲ ಕಾಯಿಯಂತೆ ಇದ್ದೇನೆ ಎಂದು ಹೇಳಿಕೊಳ್ಳುತ್ತಿರುವ ಪಾತ್ರಗಳು ಅವುಗಳ ಅಸಂತೃಪ್ತಿಯನ್ನು ವ್ಯಕ್ತಪಡಿಸುತ್ತಿರುವುದು ತಿಳಿಯುತ್ತದೆ.

ಹುಲುಮನುಸಿಯ ಪಾಡು ಹಿಂಗಯ್ತೆ ನಮ್ಮವ್ವ
ಮಲೆದೇವ್ರ ಪಾಡ ಏನೇಳ್ಳಿ!
ಸುಲುಭಾನೆ ಲೋಕಾದ ಸಂಸಾರ ನಡೆಸೋದು
ಅಳು ಬಂತು ನಮ್ಮಪ್ಪಗಾಗಿ
ಹುಚ್ಚಿ ನೀನೆಲ್ಲಾರು ಹೋಗೆಂದು ನಮ್ಮಜ್ಜಿ
ಹುಚ್ಚಾಗಿ ನಕ್ಕಳು ಅಂದು
ಹೆಚ್ಚುಂಟೆ ಒಕ್ಕಲ ಹೆಣ್ಣಿನ ಮರುಕಕೊ?
ಅಚ್ಚರಿಗೊಂಡೆ ನಾನಿಂದೂ?[2]

ವಿಶ್ವ ಕುಟುಂಬಿಯ ಕಷ್ಟದಲ್ಲಿ ಈ ಭವದ ನೆಲೆ ಇದರಷ್ಟೇ ಸ್ವಾಭಾವಿಕವಾಗಿ ದೈವವನ್ನು ಕುರಿತು ಹೊಮ್ಮುವಾಗ ಲೋಕದ ಸಂಸಾರವನ್ನು ನಡೆಸುವ ಮಲೆದೇವರ ಹಿರಿಮೆಗಿಂತ ಆತನ ಕಷ್ಟಕ್ಕಾಗಿ ಅಳುವ ಕೆಲಸದಾಳು ನಾಗಿಯ ಮುಗ್ಧತೆ ಮತ್ತು ಆ ಕಾರಣದಿಂದಲೇ ಅಜ್ಜಿಗೆ ಸಾಧ್ಯವಾಗಿರುವ ಹೃದಯ ವೈಶಾಲ್ಯ ನಮಗೆ ಹೆಚ್ಚು ಹಿರಿದು ಎನಿಸಿಬಿಡುತ್ತದೆ. ನಾಗಿಯ ಅಳಲು ಅವಳ ದೃಢವಾದ ನಂಬಿಕೆಯ ನೆಲೆಯಿಂದಲೇ ಉಂಟಾಗುವುದರಿಂದ ಕವಿತೆ ಸ್ವಾಭಾವಿಕತೆಯಲ್ಲೇ ಆಧ್ಯಾತ್ಮದ ಅಂಚನ್ನು ತಾಗಿ ಲೌಕಿಕದಲ್ಲಿ ನಿಜವಾಗಿ ಉಳಿಯುತ್ತದೆ.

ಈ ಸಮಾಜದಲ್ಲಿ ಸಾಮಾನ್ಯ ಮನುಷ್ಯರ ಪಾಡೇ ಹೀಗೆ ಹಳ್ಳ ಇರುವ ಕಡೆ ನೀರು ಹೋಗುವಾಗ, ಬಡತನ ಇರುವ ಕಡೆನೇ ಸಂಕಷ್ಟಗಳು ಬರುವವು. ಈ ಸಮಾಜದಲ್ಲಿ ಯಾವುದು ಕೂಡ ಅಷ್ಟು ಸುಲಭವಾಗಿ ದೊರೆಯುವುದಿಲ್ಲ. ಕಷ್ಟಪಟ್ಟರೂ ದೊರೆಯುತ್ತದೆ ಎನ್ನುವ ನಂಬಿಕೆಗಳು ಕೂಡ ಮರೀಚಿಕೆಯಾಗಿದೆ.

ಈ 'ವಿಶ್ವಕುಟುಂಬಿಯ ಕಷ್ಟ' ಎನ್ನುವ ಪದ್ಯ ಭಾಗದಲ್ಲಿ ಜೀವನ ಚಿತ್ರಣವನ್ನು ಸಾಮಾಜಿಕ ಪ್ರಜ್ಞೆಯ ದೃಷ್ಠಿಕೋನಕ್ಕೆ ಸಮೀಕರಿಸಿ ಕಾಲಮಾನಗಳನ್ನು ಗುರುತಿಸಿ ಜೀವನ ಘಟ್ಟಗಳನ್ನು ಸೂಚಿಸಿ, ಒಂದರಂತೆ ಒಂದನ್ನು ಹೇಗೆ ಆಕ್ರಮಿಸುತ್ತಿದೆ. ಹಾಗೂ ಸಫಲತೆಗಳು ವಿಫಲತೆಗಳು ಜೀವನದ ಸಾಕಷ್ಟು ದೃಷ್ಠಿಗಳು ಹೇಗೆ ರಚಿತಗೊಂಡಿದೆ

ಎಂಬುದನ್ನು ಪು.ತಿ.ನರವರು ವಿವರಿಸುವ ಪರಿ ಅದ್ಭುತವಾಗಿರುವುದು ಹಾಗೂ ಅವರಿಗೆ ಸಮಾಜದ ಮೇಲಿರುವ ಕಳಕಳಿಯನ್ನು ಇಲ್ಲಿ ಗುರುತಿಸಬಹುದು.

ಹೀಗೆ ಪು.ತಿ.ನ ಅವರ ಬಗ್ಗೆ ಯೋಚಿಸುವಾಗ ನಮಗೆ ನೆನಪಾಗುವುದು ವಿಶ್ವಕುಟುಂಬಿಯ ಕಷ್ಟ. ಕಣಿವೆಯ ಮುದುಕ, ರಂಗವಲ್ಲಿ, ನನ್ನನಾಯಿ, ಪತೀಕ್ಷೆ, ಈ ಬಗೆಯ ಕವನಗಳು ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ಮೂಡಿಸುತ್ತದೆ. ಕಾರಣವಿಷ್ಟೆ ಈ ಕವನಗಳು ನಮ್ಮ ಸುತ್ತ ಮುತ್ತಲಿನಲ್ಲಿ ಕಂಡು ಬರುವಂತಹ ಸಾಮಾನ್ಯ ಜೀವನದ ಏರಿಳಿತದ ಕಾಲಘಟ್ಟದ ಬಗ್ಗೆ ಕುರಿತದ್ದಾಗಿದೆ. ಅನುಭವದ ಕೇಂದ್ರ ನಾನು ಆಗಬಹುದೆಂಬ ಸಮಾನತೆಯ ಭಾವನೆ ಉಂಟಾಗುತ್ತದೆ. ಅಥವಾ ಇಂಥದ್ದನ್ನು ನಾನು ಕಂಡಿಲ್ಲದೆ ಮರೆತು ಹೋಗಿತ್ತು. ಈ ಪದ್ಯ ಓದುತ್ತಾ ನೆನಪಾಯಿತು ಎನಿಸುತ್ತದೆ ಎನ್ನುವ ಸಮಾಜಮುಖಿ ಆಲೋಚನೆಯು ಬರುವುದುಂಟು.

ಕಣಿವೆಯ ಮುದುಕ

ಕವಿತೆಯಲ್ಲಿ ಕತ್ತಲು ಮತ್ತು ಮಳೆ ಆವರಿಸಿ ಭಯಾನಕವಾಗಿರುವ ಕಣಿವೆಯಲ್ಲಿ ಬಂಡೆಗೆ ಒರಗಿ ಕುಳಿತ ಮುದುಕನೊಬ್ಬನ್ನು ನಿರೂಪಕ ಕಂಡಾಗ ಮೊದಲು ಕಾಣುವುದು ಆ ಮುದುಕನ ವ್ಯಗ್ರತೆ. ಆ ಮೇಲೆ ನಿರೂಪಕನ ಕರುಣೆಯಿಂದ ಮುದುಕ ಕರಗಿ ಹೋಗುವುದು. ಅಳುವಿನ ಕಾರಣವನ್ನು ಕೇಳಿದಾಗ ನಿನ್ನ ಈ ಬಗೆ ಮರುಕ ತಂದಿತು. ಮರೆತ ಕಂದನ ನೆನಪನು ಎಂದು ಮುದುಕ ಹೇಳುವುದು ವರ್ಣಿತವಾಗಿದೆ. ಮುದುಕನ ದಾರುಣ ಸ್ಥಿತಿಗೆ ಪೂರಕವಾಗಿ ನಿರ್ಜನ ಕಣಿವೆ. ಮಳೆ, ಮಿಂಚಿನ ವರ್ಣನೆ ಇದೆ. ಜೀವಕ್ಕೆ ಸಹಜವಾದ ಈ ಭವದ ಸೆಲೆ ಅತ್ಯಂತ ಸ್ವಾಭಾವಿಕ ಸ್ಥಿತಿಯಲ್ಲಿ ಹೊರ ಹೊಮ್ಮುವುದರಿಂದ ಈ ಮುದುಕನ್ನಾಗಲೀ, ಕಣಿವೆಯನ್ನಾಗಲೀ, ನಮಗೆ ಮರೆಯುವುದು ಅಸಾಧ್ಯವಾಗುತ್ತದೆ.

ಹೀಗೆ 'ಕಣಿವೆಯ ಮುದುಕ' ಕವಿತೆಯಲ್ಲಿ ಮುದುಕನ ಮಗನ ಅಂತಃಕರಣ ನಿರೂಪಕನಲ್ಲಿ ಹೇಳಿದ್ದನ್ನು ಇಲ್ಲಿ ನೆನೆಯಬಹುದು. ಹಾಗಾಗಿ ಪು.ತಿ.ನ. ಅವರ ಸಾಮಾಜಿಕ ಪ್ರಜ್ಞೆಯ ಚಿತ್ರಣವನ್ನು ಇವರ ಸೂಕ್ಷ್ಮ ಕಾವ್ಯದೊಂದಿಗೆ ಹೋಲಿಕೆ ಮಾಡಿದಾಗ ಇವರ ಸರಳ ಹೃದ್ಯ ಕವಿತೆಗಳ ಹೊಕ್ಕುಳ ಬಳ್ಳಿಗೂ ಸಾಮಾಜಿಕ ಚಿಂತನೆಗೂ ಅವಿನಾಭಾವ ಸಂಬಂಧವಿರುವುದು ಗೋಚರಿಸುತ್ತದೆ. ಇದೇ ಭಾವನಿಷ್ಠೆಯ ಇನ್ನೂ ಹೃದ್ಯವಾದ ನೋಟಕ್ಕಾಗಿ ನಾವು **'ರಂಗವಲ್ಲಿ'** ಕವಿತೆಯನ್ನು ಓದಬೇಕು. ಅತ್ಯಂತ ಸುಂದರವಾದ ಹಗಲಿನ ವರ್ಣನೆಯೊಂದಿಗೆ ಕವಿತೆ ಪ್ರಾರಂಭವಾಗುತ್ತದೆ.

ಮಾಗಿ ಬಂದು ಗಿರಿಗೆ ಹಗಲು
ಹಿತದ ಬಿಸಿಲ ಹೊದಿಸಿದಂದು
ಹಸುಳೆಗೂಡಿ ಬೆಟ್ಟತುದಿಯ
ಗುಡಿಗೆ ನಡೆದನು.
ಬಾಲ ಕೊಳಕೆ ಕಲ್ಲನೆಸೆದು
ಸುಳಿಯ ರಚಿಸಿ ನಲಿವ ತೆರದಿ
ಹಗಲ ಮೌನಕೆಸೆಯುತ್ತಿತ್ತು
ಹಾಡ ಹಕ್ಕಿಯು.[೮]

ಈ ಹೊತ್ತಿನಲ್ಲಿ ನಿರೂಪಕ ಮಗುವಿನೊಂದಿಗೆ ಗಿರಿಯ ಗುಡಿಗೆ ಬರುತ್ತಾನೆ. ದೇವಾಲಯದಲ್ಲಿ ಯಾರು ಕಾಣುವುದಿಲ್ಲ. ಮಗು-ಮುಸುಕು ಬೆಳಕಿನಲ್ಲಿರುವ ಹಣ್ಣ-ಹಣ್ಣು ಮುದುಕಿಯು ಇರುವುದು ನಿರೂಪಕನ ಗಮನಕ್ಕೆ ಬರುತ್ತದೆ.

ಮುದುಕಿಯುಟ್ಟ ಬಟ್ಟೆ ಚಿಂದಿ
ನೆರೆತ ಹೆರಳು, ಸುಕ್ಕುಮೋರೆ
ಮುಪ್ಪು ತನ್ನ ಮುದ್ರೆಯೊತ್ತಿ
ದಂಗವವಳಿದು;[೯]

ಇಂತಹ ವಯಸ್ಸಾದ ಮುದುಕಿ ಗುಡಿಯಲ್ಲಿ ಬರೆಯುವುದರಲ್ಲಿ ಮಗ್ನಳಾಗಿದ್ದಾಳೆ. ಅದೂ ಕಾಟಾಚಾರಕ್ಕೆ ಏನೋ ಎರಡು ಎಳೆ ಎಳೆಯುವುದರಲ್ಲಿ ದೇವರು ಮೆಚ್ಚಲಿ ಎಂದು ಆ ಮುಪ್ಪಿನಲ್ಲೂ ಏಕಾಗ್ರತೆಯಿಂದ ಸೇವೆಯಲ್ಲಿ ತೊಡಗಿರುವುದು ನಿರೂಪಕನಿಗೆ ಅಚ್ಚರಿ ಉಂಟುಮಾಡುತ್ತದೆ. ಮುಂದೆ ಆ ಮಗುವಾದರೂ ದೇವರ ಮೂರ್ತಿಯ ಕಡೆಗೆ ಗಮನಕೊಡದೆ ಮುದುಕಿಯ ಹಸೆಯಲ್ಲೇ ಕಣ್ಣು ನಾಟಿದೆ. ಆಗ ನಿರೂಪಕನಿಗೆ ಅನಿಸುತ್ತದೆ.

ದೇವನಿರುವು ದಿಟವೋ ಸಟೆಯೊ
ಹೆರರು ತಿಳಿಯದಿರಿತಗಳನು
ಹುದುಗಿ ಇರುವ ಪಾಪಗಳನು
ಗುಟ್ಟ ನೆಲ್ಲುವ
ಎದೆಯ ಹೊಗುತಲೆಲ್ಲ ತಿಳಿದು
ಸಂತ ವಿಡುವ ನೊಬ್ಬನುಂಟು

ಎನ್ನವಚಲ ಭಕ್ತಿ ದಿಟವು
ಮತ್ತು ಸೋಜಿಗ![೧೦]

ದೇವನಿರವು ದಿಟವೋ ಸಟೆಯೊ, ಆದರೆ ದೇವನಿದ್ದಾನೆ ಎಂಬ ಭಕ್ತಿ ದಿಟವು ಎನ್ನುವ ಮಾತು ಪೂರ್ವಯೋಜಿತ. ನಿಲುವುಗಳಿಂದ ಹೊರಡುವ ಮನಸ್ಸಿನಿಂದ ಹೊಮ್ಮುವಂಥದಲ್ಲ. ಶ್ರದ್ಧೆ, ನಂಬಿಕೆ ಈ ಕವಿಗೆ ಯದುಗಿರಿಯ ಕೊಳದ ಹಾಗೆ ಆಳವಿಸ್ತೃತ, ಆ ಕೊಳದ ಆಳದಿಂದ ಚಿಮ್ಮಿ ಈಗಷ್ಟೇ ಮೂಡುವ ಚಿಂತನೆಯ ಅಲೆಯು ಸಾಮಾಜಿಕ ಪ್ರಜ್ಞೆಯ ಮುಖಾಂತರ ಪು.ತಿ.ನ. ಅವರ ಕಾವ್ಯಕ್ಕೆ ವೈಶಿಷ್ಟ್ಯತೆಯನ್ನು ತಂದು ಕೊಡುವ ಸಂಗತಿಯಾಗಿದೆ.

ಹೀಗೆ ಕಾವ್ಯ ಚಿಂತನೆಯಿಂದ ಹೊರಗೆ ಮೊಳೆಯುವ ಅಲೆಯ ಲೌಕಿಕದ ಪರಿಯನ್ನು ಕಾಣಬೇಕಾದರೆ **'ನನ್ನ ನಾಯಿ'** ಈ ಕವಿತೆಯ ಸಂದರ್ಭ ಹೀಗಿದೆ. ಒಮ್ಮೆ ಕೊಳದ ತಡಿಯ ಬಳಿ ನಾಯಿ ಸತ್ತರೂ ಮೊಲೆ ಬಿಡದೆ ಗೋಳಿಡುತ್ತಿರುವ ನಾಯಿಮರಿಯನ್ನು ಕಂಡು ನಿರೂಪಕ ಕರುಣೆಯಿಂದ ಆ ಮರಿಯ ಕೊರಳಿಗೆ ಬಳ್ಳಿಯ ಕುಣಿಕೆ ತೊಡಿಸಿ ಮೆಲ್ಲನೆ ಮನೆಗೆ ಕರೆತರುತ್ತಾನೆ. (ಅದರ ಮೈಯ ಮುಟ್ಟದಂತೆ ಆತನನ್ನು ಜಾತಿಯ ಹೆಮ್ಮೆ ತಡೆದಿದೆ) ಭಯದಿಂದ ನಿರೂಪಕನ ಮನೆಯವರು ನಾಯನ್ನು ಮುಟ್ಟಿದವರಾದರೂ ಹಾಲು, ಹಣ್ಣು, ತಿಂಡಿಯನ್ನಿಟ್ಟು ಅದನ್ನು ಸಾಕುತ್ತಾರೆ. ಮರಿ ಕೂಡ ಇವರ ಜಾತಿಯ ಬಿಂಕ ಅರಿತಂತೆ ಹೊಸಿಲ ಹೊರಗೆ ನಿಲ್ಲುತ್ತದೆ. ಹೀಗೆ ಆರು ತಿಂಗಳು ಕಳೆದ ಮೇಲೆ ಒಂದು ರಾತ್ರಿ ಕುರುಬನೊಬ್ಬ ನಿರೂಪಕನ ಜಗಲಿಗೆ ಮಲಗಲು ಬರುತ್ತಾನೆ. ನಾಯಿಗೆ ರೊಟ್ಟಿ ಕೊಟ್ಟು ಪ್ರೀತಿಯಿಂದ ತಲೆ ಸವರಿ ರಾತ್ರಿ ಚಳಿಗೆ ನಡುಗುವ ನಾಯಿಗೆ ತನ್ನ ಹಾಸಿಗೆಯಲ್ಲಿ ಕಾವು ಕೊಡುತ್ತಾನೆ. ಮಾರನೆಯ ದಿನ ನಾಯಿಯು ಅವನನ್ನೇ ಹಿಂಬಾಲಿಸಿದೆ. ನಾಯಿಗಾಗಿ ಹುಡುಕಿ ನಿರೂಪಕ ಕೊನೆಗೆ ಕುರುಬನ ಬಳಿ ಕಂಡಾಗ.

ಬಂಧು ಬಳಗಗಳಿಲ್ಲವೆನಗೆ
ಕಂದನೀ ಮರಿ ಕಳೆಯಲಾರೆ[೧೧]

ಎಂದು ಗೌಡ ಕಣ್ಣೀರು ತರುತ್ತಾನೆ. ಮರಿಗೆ ಹಗ್ಗ ಹಾಕಿ ಎಳೆದರೂ ಅದು ಗೌಡನನ್ನು ಬಿಟ್ಟುಬಾರದು. ಆಗ ನಿರೂಪಕನಿಗೆ ಅನಿಸುತ್ತದೆ.

ವರುಷ ನೂರರ ಕರುಣೆ ಬಗೆವುದೆ
ಕರುಬನಿರುಳೊಳು ಬಗೆದ ಕಟ್ಟ
ಮರಿಯ ನಡೆತೆಗೆ ಕೋಪಗೊಳ್ಳದೇ
ಕರುಣೆ ಒಲುಮೆಗೆ ಸಾಟಿಯೇ
ಕಣ್ಣ ನೀರೊಳು ತೊಳೆದ ನಂದು
ಜನ್ಮದುನ್ನತಿ ಹೆಮ್ಮೆ ಕೊಳೆಯ
ನನ್ನ ಒಲುಮೆಗೆ ಅಡ್ಡಬಂದ
ಕರುಣೆ ಹಾಯದ ಬಿಂಕವ[೧೨]

ಹೀಗೆ ಕವಿ ಸಂಪ್ರದಾಯ ನಿಷ್ಠರು. ಮಡಿವಂತರು ಎಂಬುದು ಕೆಲವರ ಭಾವನೆ. ತಮ್ಮ ವರ್ಗದ ಪ್ರತಿನಿಧಿಗಳಾಗುವ ವಿಶ್ವಕುಟುಂಬಿಯ ಕಷ್ಟದ ಮನೆಯೊಡತಿ ಮುದುಕಿ. ಕಣಿವೆಯ ಮುದುಕನ ನಿರೂಪಕ, ನನ್ನನಾಯಿಯ ನಿರೂಪಕ, ಕೂಲಿ ಹೆಂಗಸು. ಗೌಡ ಕುರುಬರೆದುರು ಹೆಮ್ಮೆಯಿಂದ ಬೀಗುವುದನ್ನು ನಾವು ನೋಡುವುದಿಲ್ಲ. ನಮ್ಮರಾಗುವುದನ್ನು ನೋಡುತ್ತೇವೆ. ಸಾಮಾನ್ಯ ಎಂದು ಹೇಳುವ ಮನುಷ್ಯನ ಘನತೆಯನ್ನು ಈ ಕವಿತೆಗಳೆಲ್ಲವು ಎತ್ತಿ ಹಿಡಿಯತ್ತವೆ. ಆಧುನಿಕ ಯುಗಕ್ಕೆ ಪು.ತಿ.ನ. ಹೇಗೆ ಮುಖ್ಯರಾಗುತ್ತಾರೆ. ಎಂಬುದನ್ನು ಇಂಥ ಕಡೆ ನಾವು ನೋಡಬೇಕು. ಈ ಕವಿತೆಗಳ ಭಾಷೆ ಮತ್ತು ಛಂದಸ್ಸಿನ ದೇಸಿ ಗಮನಿಸಬೇಕಾಗಿದ್ದು ಸಮಾಜದ ಬಗ್ಗೆ ಇರುವ ಕಳಕಳಿ ಹಾಗೂ ಅವರ ಮನುಜ ಮತದ ಬಗ್ಗೆ ತೋರುವ ಅದಮ್ಯ ಪ್ರೀತಿ, ಪ್ರಾಣಿದಯೆ. ಇವುಗಳು ಸಾಮಾಜಿಕ ಪ್ರಜ್ಞೆಯ ಪ್ರತೀಕವಾಗಿದೆ.

ಹೀಗೆ ಪು.ತಿ.ನ. ಅವರು ಕರುಣೆಯ ಹಾಗೆ ವ್ಯಾಮೋಹವನ್ನು ಒಲುಮೆಗೆ ಮುಖಾಮುಖಿಯಾಗಿ ನಿಲ್ಲಿಸಿ ಅವುಗಳ ತಾರತಮ್ಯವನ್ನು ಈ ಕವನದ ಮೂಲಕ ಚಿಂತಿಸಿದ್ದಾರೆ.

ಒಲುಮೆ ಹೊನಲಿಗಣೆಗಳೆಷ್ಟು
ಹರಿಯ ಬಿಡದ ತಡೆಗಳು
ಹೊನಲ ತಡೆವುವೆಷ್ಟು ಹಿತದಿ!
ಅದರೇನು? ತಡೆಗಳು[೧೩]

ಎಂದು ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ಪರಿಮೂಡಿಸಿದ್ದಾರೆ. ಜ್ವರದಿಂದ ಬಾಯಾರಿ ಸಾಯುತ್ತಿರುವ ಒಬ್ಬ ಅಪರಿಚಿತ ರೋಗಿ, ವಾತ್ಸಲ್ಯಮಯಿ ತಾಯಿ, ಇವರಲ್ಲಿ ಯಾರಿಗೆ ತಾನು ತನ್ನಲಿದ್ದಂತಹ ಏಕಮಾತ್ರ ಹಣ್ಣು ಕೊಡುವುದು? ಎನ್ನುವ ಧರ್ಮ ಸಂಕಟ ಕವಿಗೆ ಆದರೂ ಕೊನೆಗೆ ಮನಸ್ಸು ಮಾನವ ಸಹಜ ದೌರ್ಬಲ್ಯಕ್ಕೆ ಒಳಗಾಗಿ ತಾಯಿಯ ಕಡೆ ವಾಲಿತು. ಆದರೆ ಅನಂತರದಲ್ಲಿ ಉದ್ವಿಗ್ನಗೊಂಡು ತನ್ನ ನಡೆಯನ್ನು ತಾನೇ ವಿಶ್ಲೇಷಿಸಿಕೊಂಡು ಒಲುಮೆಯ ಸಹಜದ ಧರ್ಮ ಹೊನಲಾಗಿ ಹರಿಯುವುದು. ತದ ನಂತರ ತನ್ನೆಡೆಗೆ ಬಂದವರಿಗೆಲ್ಲರಿಗೂ ಯಾವ ಭೇದ ಭಾವವಿಲ್ಲದೆ ತನ್ನ ಅಂತಃಕರಣವನ್ನು ಧಾರೆಯೆರೆಯುವುದು ಆದರೇನಂತೆ? ತಾಯಿ, ತಂದೆ, ಸೋದರ, ಸೋದರಿ, ಬಂಧು ಮಿತ್ರರೆಂಬ ಆಪ್ತರ ವ್ಯಾಮೋಹ ನಮ್ಮ ಒಲುಮೆಯ ಹೊನಲಿಗೆ ಅಡ್ಡಿಯೊಡ್ಡುವುದುಂಟು. ಅದನ್ನು ಬೇರೆಡೆಗೆ ಹರಿಯಗೊಡದಂತೆ ಅಣೆ ಕಟ್ಟುವುದು ಉಂಟು. ಇದು ಕ್ರೂರವಾದರೂ ನೈಜ ಸ್ಥಿತಿ. ಈ ಕೊರಗು ಕವನದಲ್ಲಿ ಕುಂದಣದಂತೆ ಕಾಣಿಸುತ್ತಾದರೂ ಒಲುಮೆಯ ಸ್ವಚ್ಚಂದ ಪ್ರವಾಹಕ್ಕೆ ಅನುವು ಮಾಡಿಕೊಡುವುದು ಬಹುಮುಖ್ಯವೆಂದು ಬಹಳ ಅರ್ಥಪೂರ್ಣವಾಗಿ ಸಾಮಾಜಿಕ ಪ್ರಜ್ಞೆಯ ಚಿತ್ರಣವನ್ನು ಕುರಿತು ವಿವೇಚಿಸುತ್ತದೆ.

ಹೀಗೆ ಗಂಡು-ಹೆಣ್ಣುಗಳನ್ನು ಬೆಸೆಯುವ ಅನುರಾಗವೆನ್ನಬಹುದಾದ ಒಲುಮೆಯ ರಹಸ್ಯ **'ತ್ಯಾಗವೇ ಒಲುಮೆ'** ಎಂಬ ಕವನದಲ್ಲಿ ಅನ್ಯೋಕ್ತಿ ಶೈಲಿಯಲ್ಲಿ ಹರಳುಗಟ್ಟಿದೆ. ಹೆಣ್ಣೊಬ್ಬಳ ಒಲುಮೆಯ ಆದರ್ಶವನ್ನು ಪೂಜಿಸುವ ರೋಜದ ಹೂವು' ತನ್ನ ಸರ್ವಸ್ವವನ್ನು ತನ್ನ ಪ್ರಿಯಕರನಿಗೆ ಸಮರ್ಪಿಸುತ್ತದೆ. ಕೇವಲ ಒಲುಮೆಗಾಗಿ ಸಾಯುವ ಗಳಿಗೆ ಸಮೀಪಿಸಿದಾಗ

ಒಲುಮೆಯ ಸಲುವಾಗಿ ಎಲ್ಲವ ತೆತ್ತೆ.
ಚಂದವ, ಪ್ರಾಯವ, ಜೀವವ ತೆತ್ತೆ
ಒಲಿಯಲು ತೆತ್ತೆ
ಒಲಿದುದಕೇ ತೆತ್ತೆ
ಸಾಯುವೆ: ತುಸ ಹೊತ್ತು ಮುತ್ತಿಡು ಮತ್ತೆ

ಎಂದು ಬೇಡಿಕೊಳ್ಳುತ್ತದೆ, ಆತ ಮುತ್ತಿಡುತ್ತಿರುವಂತೆಯೇ ಅದು ಕೊನೆಯ ಉಸಿರೆಳೆಯುತ್ತದೆ.

ಮುತ್ತಿನ ನೆನಪಿಗೆ ಕಂಪನು ಬಿಟ್ಟು
ತ್ಯಾಗವೆ ಒಲುಮೆ
ಬಾಳ್ವೆಯ ಕುಲುಮೆ
ಎನ್ನುವ ನುಡಿಯನ್ನು ಬೆದೆಯೊಳಗೆ ನೆಟ್ಟು''

ಸರ್ವ ಸಮರ್ಪಣ ಭಾವದ ಒಲುಮೆಯನ್ನು ಉಳಿದು ಇನ್ನಾವ ಪ್ರತಿಫಲವನ್ನೂ ಬಯಸುವ ತ್ಯಾಗವೇ ಜೀವ-ಜೀವಾಳ ಎಂಬ ಚಿಂತನಾಂಶ ಮಾರ್ಮಿಕವಾಗಿ ಇಲ್ಲಿ ಪ್ರತಿಫಲಿತವಾಗಿದೆ. ನಾಗರಿಕತೆ, ಸಮಾಜ ಸಂಸ್ಕೃತಿಯ ತೊಟ್ಟಿಲು ಎನ್ನಿಸಿದ 'ಸಂಸಾರ' ಸ್ವರೂಪದರ್ಶನ ಆದರ್ಶದ ಅಂಚನ್ನು ತಾಗಿದಂತಿದ್ದರೂ ವಾಸ್ತವದ ಸ್ಪರ್ಶವನ್ನು ಹೊಂದಿರುವುದು ಆಗಿದೆ. ಒಟ್ಟಾರೆ ಕವಿಯ ಸಂಸಾರದ ಸಾಮರಸ್ಯ ಚಿತ್ರಣ ಈ ಬಗೆಯ ಕವನಗಳಲ್ಲಿ ಕಂಡು ಬರುತ್ತದೆ. ಅಲ್ಲದೇ ಮುಪ್ಪು-ಸಾವು ಕುರಿತಂತೆ ಕವಿಯ ಚಿಂತನೆಯಂತೂ ಎಂಥಹವರನ್ನು ನಡುಗಿಸುವಂತಹ ವಾಸ್ತವಾನುಭವಕ್ಕೆ ನೆಲೆಯಾಗಿರುವ ರೀತಿಯಲ್ಲಿ ಚಿತ್ರಣವಾಗಿದೆ.

ಹೀಗೆ ಪು.ತಿ.ನ. ಅವರ ಸರಳವಾದ ಸಮಾಜಕ್ಕೆ ಹತ್ತಿರವಾದ ಹೃದ್ಯವಾದ ಕವಿತೆಗಳ ಒಂದು ಬಗೆಯನ್ನು ನೋಡಿದೆವು. ಇಲ್ಲಿ ಕವಿತೆಯ ಪ್ರಜ್ಞಾ ಕೇಂದ್ರ ಕವಿತೆಯ ಹೊರಗೆ ಇದೆ. ಆ ಕೇಂದ್ರ ಕವಿತೆಯ ಒಳಗೆ ಬಂದಾಗ ಅನುಭವ ಸೂಕ್ಷ್ಮವೂ ನವುರಾದದ್ದೂ ಸಂಸ್ಕೃತೀಕರಣಗೊಂಡದ್ದು ಆಗುವುದು ತೀರ ಸ್ವಾಭಾವಿಕವೇ ಪು.ತಿ.ನ. ಅವರ ವ್ಯಕ್ತಿತ್ವಕ್ಕೆ ಅದು ಸಹಜವಾದದ್ದು ಹೌದು. ಆದುದರಿಂದಲೇ ಆತ್ಮಕೇಂದ್ರಿತ ಕವಿತೆಗಳೆಲ್ಲಾ ಅವರಲ್ಲಿ ಆಳವಾದ ಕಡೆಯ ಪಕ್ಷ ಸೂಕ್ಷ್ಮವಾದ ಓದನ್ನು ಆಹ್ವಾನಿಸುವ ಕವಿತೆಗಳಾಗುತ್ತವೆ. 'ಯದುಗಿರಿಯ' ಬಗೆಗಿನ ಅವರ ಪದ್ಯಗಳು **'ಮಲೆದೇಗುಲದ'** ಕವಿತೆಗಳು ಈ ಬಗೆಯವು. ಇಂಥ ಕವಿತೆಗಳ ತಾತ್ವಿಕ ಹಿನ್ನೆಲೆಯನ್ನು ಹಾಗೂ ಸಾಮಾಜಿಕ ಪ್ರಜ್ಞೆಯ ದೃಷ್ಟಿಕೋನವನ್ನು ನಾನು ಗ್ರಹಿಸುವುದು ಹೀಗೆ.

'ಮಲೆದೇಗುಲ' ಕವಿಯ ಕೇಂದ್ರ ವಸ್ತು, ಮೇಲುಕೋಟೆಯಲ್ಲಿರುವ ಮನೋಹರ ಪ್ರಕೃತಿ ಪರಿಸರದ ನರಸಿಂಹ ದೇವಾಲಯವನ್ನು ನೆವವಾಗಿಟ್ಟುಕೊಂಡು ಬರೆದ ಮುಕ್ತಕಗಳ ಸಂಕಲನವಾಗಿದ್ದರೂ ಕವಿ ಬಲುಬೇಗ ಆ ಆವರಣದಿಂದ ಚಿಮ್ಮಿ ಪ್ರಾಕೃತಿಕ ರಹಸ್ಯಗಳ ವ್ಯಾಪಾರವನ್ನು ಚಿಂತಿಸುವ ಸಾಮಾಜಿಕ ಭೂಮಿಕೆಯನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಈ ಮಾರ್ಗ ಪು.ತಿ.ನ. ಅವರ ಕಾವ್ಯಮಾರ್ಗದ ಸಹಜ

ಸ್ವರೂಪವೂ ಹೌದು. ಕವಿಯ ಬಗೆಗೆ ಅವರೇ ಹೇಳಿರುವ ಮಾತನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳಬಹುದು.

"ಕವಿ ಒಂದು ಜನಾಂಗದ ಭವ ಪ್ರವೃತಿ ಶಕ್ತಿಯ ಪ್ರತೀಕವಲ್ಲ, ಅದರಲ್ಲಿ ನಿವೃತ್ತಿ ಶಕ್ತಿ ಪ್ರಬಲವಾಗುವ ಕಾಲದಲ್ಲಿ ಆ ಪ್ರವೃತ್ತಿ ಮತ್ತು ನಿವೃತ್ತಿ ಶಕ್ತಿಗಳ ಸಾಮರಸ್ಯದ ಪ್ರತೀಕ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ.

'ಮಲೆದೇಗುಲ' ದೇಗುಲವನ್ನು ಕುರಿತ ಸಾಮಾಜಿಕ ಲಹರಿ, ಕವಿಯೇ ಹೇಳುವಂತೆ ಇವು ಒಂದು ಕಾಲದಲ್ಲಾಗಲಿ ಒಂದು ಪರಿಸರದಲ್ಲಾಗಲಿ ಬರೆದಂಥವಲ್ಲ, ಇಲ್ಲಿಯ ಚಿಂತನಗಳು ಕವಿ ಏಕ ಧ್ಯಾನದಲ್ಲಿ ನಿಂತು ಬಹಿರ್ಮುಖನಾದಾಗ ಕಂಡ ವಿಷಯವನ್ನು ವರ್ಣಿಸುವ ಮತ್ತು ತಿರುಗಿ ಅಂತರ್ಮುಖನಾಗಿ ಆ ಅಂತರಂಗವನ್ನೇ ಬಹಿರಂಗಗೊಳಿಸುವ ಪ್ರಕ್ರಿಯೆಯಾಗಿವೆ. ದೇಗುಲಕ್ಕೆ ಮೆಟ್ಟಿಲುಗಳನ್ನೇರಿ ಹೋಗಬೇಕು. ನೆಲಹಾಸಿನಲ್ಲಿ ಪು.ತಿ.ನ. ಕರೆಯುವ ಭವ ಎಂದರೆ ಜಾಗೃದವಸ್ಥೆ, ಲೋಕವ್ಯಾಪಾರ ಇತ್ಯಾದಿ.

ಕವಿಯ ದೃಷ್ಟಿಯಲ್ಲಿ ಮಲೆ ದೇಗುಲವು ಒಂದು ಆಶ್ರಯಸ್ಥಾನ. ಭಕ್ತರಿಗೆ ಮಾತ್ರವಲ್ಲ, ಜ್ಞಾನಿಗಳಿಗೂ ವಿಚಾರವಂತರಿಗೂ ತಾರ್ಕಿಕರಿಗೂ ಇದು ಕೊನೆಯಾಸರೆ, ಸಕಲ ಸಂದೇಹಗಳೂ ವಿಜೃಂಭಿಸಿ ಕೊನೆಗೆ ಆಯಾಸಗೊಂಡು ಬಿಡುವನ್ನು ಬಯಸುವ ತವರು ಮನೆ ಇದು! ಭಾವನಾ ಕ್ಷೇತ್ರದಲ್ಲಿ ಬುದ್ಧಿ ದುಡಿಮೆಗಾರನಲ್ಲ ಎಂಬ ಪು.ತಿ.ನ. ಅವರ ಸೂಕ್ತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸಂದೇಹ ಬರಲು ಕಾರಣವಿದೆ. ಸಾಂತ ಮನಸ್ಸುಗಳಿಗೆ ಅನಂತವಾದ ಪ್ರಕೃತಿಯ ಕಾರ್ಯಗತಿಗಳನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ. ಈ ಕಾರಣದಿಂದಲೊ ಏನೋ ಸಂದೇಹದ ಸಾಧ್ಯತೆಯನ್ನು ಅಳಿಸಿಹಾಕಲು ನಮಗೆ ಸಾಧ್ಯವಾಗಿಲ್ಲ. ಈ ದೇವಾಲಯವು ಬುವಿಯ ವಾಸ್ತವದಲ್ಲೇ ಅಲೆದು ಅರೆಜ್ಞಾನ ಪಡೆದು ಕ್ಷೋಭೆಗೆ ಒಳಗಾಗದಂತೆ ತಡೆವ ಮದ್ದು. ಅದು ಒಂದೊಂದು ಘಟ್ಟದಲ್ಲಿ ಒಂದೊಂದು ಸುಖದುಃಖಗಳನ್ನು ಶೋಧಿಸುತ್ತ ಅಲೆದಾಡುವ ಭವದ ನಿಶ್ಚಲಕೇಂದ್ರ. ಇಲ್ಲಿ ಋಜು ಅನೃಜು ಋತ ಅನೃತ, ಲೇಸು, ಕೇಡು ಎಂಬ ಮೌಲ್ಯಮಾಪನ ವ್ಯರ್ಥ. ಈ ಎಡೆಯಲ್ಲಿ ಮಾತಿಗೆ ಮೀರಿದ ಭಾವನೆಗಳ ಭಾರದಿಂದ ತಲೆಬಾಗಿ ನಿಂತಿರುವುದಾಗಿ ಕವಿ ಹೇಳುತ್ತಾರೆ.

ನಮ್ಮ ಬೌದ್ಧಿಕ ಸತ್ವವು ವಾಸ್ತವಗಳಲ್ಲೇ ಅಲೆಯುವುದರಿಂದ, ಅದರ ಅರಿವು ಮಿತಿಯುಳ್ಳದ್ದಾರಿಂದ ನಮ್ಮ ಅಂತರಂಗ ಗೊಂದಲಗೊಂಡು ಅಶಾಂತಿಯಿಂದ ನರಳುತ್ತದೆ. ದೇಗುಲವು ಇಂಥ ಅಶಾಂತಿಯ ರೋಗಗಳಿಗೆ ಔಷಧ ಎಂದು ಕವಿ ಹೇಳುತ್ತಾರೆ. ಹಾಗೆಯೇ ಈ ದೇವಾಲಯವು 'ಮುನಿ ಹೃದಯ ಫಲ' ಅಂದರೆ ಪಕ್ವಗೊಂಡ ಋಷಿ ಚೇತನಗಳ ಆಶಯದ ಫಲವಾಗಿ ಮೂಡಿಬಂದದ್ದು. ನಮ್ಮ ಲೋಕಜೀವನ ಇದೆಯಲ್ಲ. ಇದು ಒಂದು ಭಾವಗೋಳದಂತೆ ತಿರುಗುತ್ತಲೇ ಇದ್ದು ಒಂದೊಂದು ಭಂಗಿಯಲ್ಲಿ ಒಂದೊಂದು ಸುಖ ಅಥವಾ ದುಃಖವನ್ನು ತೋರುವುದರಿಂದ ಅದರ ತಿರುಗುಬುದ್ಧಿಗೆ ತಂಪೀಯುವ 'ನಿಶ್ಚಲ' ಕೇಂದ್ರ ದೇವಾಲಯ. ಈ ದೇವಾಲಯವು ಯೋಗಿಗಳ ಮುದದಿಂದ ಸಾಂದ್ರವಾದದ್ದು. ಯೋಗಿಗಳನ್ನು ಋಜು (ಸರಿಯಾದ ಮಾರ್ಗ) ಅನೃಜ, ಋತ (ಪರಮ ನಿಯಮ), ಅನೃತ, ಒಳಿತು, ಕೆಡುಕು ಮುಂತಾದ ಯಾವ ಮೌಲ್ಯಗಳಿಂದಲೂ ಕಟ್ಟಿಹಾಕಲು ಸಾಧ್ಯವಿಲ್ಲ. ಅಂಥ ನಿಸ್ಸೀಮ ಆನಂದದಿಂದ ಒಪ್ಪಗೊಂಡು ದೇವಾಲಯ ಕಂಗೊಳಿಸುತ್ತದೆ.

ಸಾಮಾಜಿಕ ಪ್ರಕೃತಿಯ ತೀರ್ಪುಗಳನ್ನು ತೂಗಿ ನೋಡಿ, ನಿರ್ಣಯಿಸಲು ನಮ್ಮ ವಿಜ್ಞಾನಕ್ಕೆ ಕೂಡ ಸರಿಯಾದ ಮಾನದಂಡಗಳಿಲ್ಲ. ಪ್ರಕೃತಿ ಎಂಬುದು ನಾವು ತಿಳಿಯಲಾಗದ ಗೂಢಗಳ ಗುಡಾರ. ಅದರ ರಹಸ್ಯದ ಬಾಗಿಲನ್ನು ತೆರೆಯುವ ಕೀಲಿಕೈ ನಮ್ಮಲಿಲ್ಲ. ಪೀಟರ್ ಹೇಳುತ್ತಾನೆ: Take heed, brothern, lest there be in any of you, an evil heart of unbelief in departing from the living God.

ಅಲ್ಲಿರಲಿ ಇಲ್ಲಿರಲಿ ಎಲ್ಲಿರಲಿ ತಲೆಬಾಗಿ
ನಾ ತೆರೆದ ಮಲೆದೇಗುಲದ ಬಾಗಿಲಿದುರು
ನಿಂತ ತೆರವಾಗುತಿದೆ ನನ್ನ ಕಂಗಳಿಗಾಗೆ
ಅರೆ ಬಾನು ಮರ ಹಕ್ಕಿ ಹೊಳ ಹೂ ಹೊದರು
ಅಂತರಂಗದ ದೈವ ಮೂಲೆ ತಿರುಗಿನೊಳವಿತು
ಸನ್ನೆಗೈದಂತೆಯೇ ಮೈಗರೆವ ಪರಿಗೆ
ಒಂದು ನಗೆ ಒಂದು ನುಡಿ ಒಂದು ಚಲನದಿ ಹೊಳೆದು
ಅವುದೋ ನೆನವೊಸಗೆ ಮರಳುವುದು ಮರೆಗೆ
ಆ ನೆನಹಿನೊಸೆಗೆಗಳ ನಿಧಿಗೊಳುತ, ಗುಡಿಯೆ, ನಿಂತೆ[೧೫]

ನನ್ನ ಮಾನಸ ನಿನ್ನ ಶ್ಯಾಮಸುಂದರ ಗರ್ಭದೊಳಗವನು ತಡತಡಕಿ ತೀರದಂತೆ.

ಇದೊಂದು ಮನಸ್ಸನ್ನು ಕಾಡುವ ದೃಶ್ಯ. ಅಲ್ಲಿ ಇಲ್ಲಿ ಎಲ್ಲಿ ಎಂಬ ಶಬ್ದಗಳು ವ್ಯಾವಹಾರಿಕ ವಲಯಗಳನ್ನೆಲ್ಲ ಸೂಚಿಸುತ್ತವೆ. ದೇವಾಲಯದ ಎದುರಿಗೇ ಸದಾ ನಿಲ್ಲಬೇಕೆಂದೇನೂ ಇಲ್ಲ. ಎಲ್ಲ ಆವರಣಗಳನ್ನು ದೇಗುಲದ ಆವರಣವನ್ನಾಗಿ ಮಾಡಿಕೊಳ್ಳುವ ರಸಸ್ಥಿತಿ ಪು.ತಿ.ನ. ಅವರದು. ಅವರ ಕಣ್ಣುಗಳಿಗೆ ಬೀಳುವ ಬಂಡೆ, ಆಕಾಶ, ವೃಕ್ಷರಾಜಿ, ಪಕ್ಷಿ ಸಂಕುಲ, ಕೊಳ, ಹೂವು, ಲತಾಗುಲ್ಮ ಇವೆಲ್ಲ ಬರಿಯ ಭೌತ ವಸ್ತುಗಳಾಗದೆ ಮೂಕ ಸನ್ನೆಯಿಂದ ಇವರನ್ನು ಆಹ್ವಾನಿಸುವ ದೇಗುಲವಾಗುತ್ತವೆ. ಯಾರೋ ನಕ್ಕಾಗ, ಯಾರೋ ಮಾತನಾಡಿದಾಗ, ಯಾರೋ ನಡೆದಾಡಿದಾಗ ಎಲ್ಲವೂ ಕವಿಯನ್ನು ತಮ್ಮೊಡನೆ ಆಹ್ವಾನಿಸುವ ನೆನಪಿನ ಕೋಶಗಳಾಗುತ್ತವೆ. ದೇಗುಲ ಅಂಥ ಎಲ್ಲ ದೃಶ್ಯ ಚಿತ್ರಗಳ ನೆನಪಿನ ನಿಧಿ, ಕೂಡಲೇ ಕವಿಯ ಒಳಮನಸ್ಸು, ರಸಸ್ಥಿತಿಯಲ್ಲಿ ಆ ಶ್ಯಾಮಸುಂದರ ಗರ್ಭದ ಅಂತರಂಗವನ್ನು ತಡಕುವುದಕ್ಕೆ ಆರಂಭಿಸುತ್ತದೆ. ಕವಿ ತಟಕ್ಕನೆ ಲೌಕಿಕತೆಯನ್ನು ಸೀಳಿಕೊಂಡು ದೇಗುಲದ ತೆರೆದ ಬಾಗಿಲಲ್ಲಿ ನಿಂತ ಅನುಭವವನ್ನು ಪಡೆಯುತ್ತಾನೆ.

ಮನೆಯಲ್ಲ ಮಠವಲ್ಲ, ರಾಜರನಮನೆಯಲ್ಲ
ಇದು ನಾಟ್ಯ ಮಂದಿರ ಛಾತ್ರ ಸತ್ರವಲ್ಲ
ಜೀವ ಬಯಸುವ ಭೋಗದುಪಕರಣವಲ್ಲವಿದು
ಅವರ್ಥ, ಘಟಿಸಿತೀ ತೆರ ಮಲೆಯ ಕಲ್ಲ?
ಗೋಪುರದ ತುದಿಯಲ್ಲಿ ಬಾನನೆತ್ತುತ ನಿಂತು
ಇರುಳಿನೊಲು ಮಿರುತಾರಗೆಯ ಮಾಲೆಗೊಳುತ
ಮೋಡ ಸುತ್ತುವ ಜಡೆಗೆ ಜಾಹ್ನವಿಯೆ ಚಾರಿಬರೆ
ಪಕ್ಕಕೆಳವರೆ ಸೆಕ್ಕಿ ಕಣ್ ಸವಿಯ ಕೊಳುತ
ಮೆರೆವಿದರ ದರ್ಶನವೆ ದುಡುಕಿಸುವುದೆನ್ನೆದೆಯ ನಡೆಯ
ಮನುಜಗಿದು ನೆಲೆಯಾಸೆಯೋ ಕಟ್ಟ ಕಡೆಯ?[೧೬]

ನಕಾರದ ಪಲ್ಲವಿಯಾಗಿ ಅನುಕರಣಿಸುವ ಅಲ್ಲ. ಅಲ್ಲ ಎಂಬ ಶಬ್ದ ದಾಳವು ಉರುಳಿರುವ ಪರಿ ಕವಿತೆಯ ರಚನಾಶಿಲ್ಪದ ದೃಷ್ಟಿಯಿಂದ ಸಾರ್ಥಕವಾದದ್ದು. ಮಲೆದೇಗುಲದಲ್ಲಿ ಇರುವ ಆಕರ್ಷಣೆ ಏನು? ಉಳಿದೆಲ್ಲವುಗಳಿಗಿಂತ ಅದು ಹೇಗೆ ಭಿನ್ನ

ಎಂಬ ಪ್ರಶ್ನೆಯನ್ನು ಕವಿ ಇಲ್ಲಿ ಎತ್ತಿಕೊಂಡಿದ್ದಾನೆ. ಲೌಕಿಕ ವಸ್ತುಗಳು ನಮ್ಮ ಪಂಚೇಂದ್ರಿಯ ಬಯಕೆಗಳನ್ನು ತಣಿಸುವುದರಲ್ಲಿ ಸಹಾಯಕವಾಗಿರುವುದರಿಂದ ನಾವು ಅವಕ್ಕೆ ಮುಗಿಬೀಳುವುದು ಸಹಜ. ಮನೆ ಮಠ ನರ್ತನ ಗೃಹ ವಿದ್ಯಾಗೃಹ ಮೊದಲಾದವುಗಳು ಇಂಥ ಸಾಧನೆಯ ಕೇಂದ್ರಗಳು. ಆದರೆ ದೇಗುಲ? ಅದು ಮನೆಯಲ್ಲ. ಮನೆ, ನಮ್ಮ ನಿತ್ಯ ಚಟುವಟಿಕೆಗಳ ಕೇಂದ್ರ, ಕುಟುಂಬದ ವ್ಯಕ್ತಿಗಳಿರುವ ಮತ್ತು ಬಂಧುಮಿತ್ರರು ಬಂದು ಹೋಗುವ ಸ್ಥಳ. ನಮ್ಮ ಕನಸುಗಳನ್ನು ರೂಪಿಸುವ ಹಂದರ. ಆದರೆ ದೇವಾಲಯ ಇಂಥ ಮನೆಯಲ್ಲ. ಅದು 'ಮಠ'ವೂ ಅಲ್ಲ. ಮಠ ಎಂದರೆ ನಮಗೆ ಮತಧರ್ಮಗಳ ಶಿಷ್ಟಾಚಾರದ ನಡವಳಿಗಳನ್ನು ಹುಟ್ಟುಹಾಕುವ ವಲಯ, ದೇಗುಲ ತನ್ನ ವೈಭವೀಕೃತ ದೃಶ್ಯದಿಂದ ನಮ್ಮನ್ನು ಬೆರಗಾಗಿಸುವ ರಾಜನ ಅರಮನೆಯೂ ಅಲ್ಲ. ಅರಮನೆ ಎಂಬ ಶಬ್ಧ ಅಧಿಕಾರಶಾಹಿ ವ್ಯವಸ್ಥೆಯನ್ನು ರೂಪಿಸುವ ಕೇಂದ್ರವೂ ಹೌದಲ್ಲವೇ? ಅಥವಾ ಈ ದೇಗುಲವು ನಮ್ಮ ಕಲಾಭಿರುಚಿಯನ್ನು ತಣಿಸುವ ನಾಟ್ಯಮಂದಿರವೂ ಅಲ್ಲ. 'ಛಾತ್ರಸತ್ರ' ಎಂಬುದು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಶಾಲೆ, ವಸತಿ ಗೃಹಗಳನ್ನು ಚಿತ್ರಿಸುತ್ತದೆ. ದೇವಸ್ಥಾನ ಅಂಥದೊಂದು ಕೇಂದ್ರವೂ ಅಲ್ಲ. ಹಾಗೆ ನೋಡಿದರೆ ಅದೊಂದು ಮಲೆಯ ಕಲ್ಲು. ಯಾವ ಅರ್ಥ ಸೇರಿಕೊಂಡು ಈ ಕಲ್ಲನ್ನು ರೂಪಿಸಿದೆ? ಅಂದರೆ ಒಟ್ಟಿನಲ್ಲಿ ಜೀವಕ್ಕೆ ಹಿತಕಾರಿ ಎಂದು ನಾವು ಭಾವಿಸುವ ಯಾವ ಭೋಗದ ಸಾಮಗ್ರಿಯೂ ಅಲ್ಲದ ಈ ಕಲ್ಲಿನ ವೈಶಿಷ್ಟ್ಯವೇನು?

ಇದಕ್ಕೆ ಉತ್ತರವೂ ಐದನೇ ಸಾಲಿನ ಮುಂದಿನ ಭಾಗದಲ್ಲೇ ಇದೆ. ಈ ವಿವರ ಕೊಡುವಾಗ ಪು.ತಿ.ನ. ಅಪ್ಪಟ ಭಾವುಕನಾದ ಕವಿಯಾಗುತ್ತಾರೆ. ಅವರು ಕಾಣಿಸುವ ದೃಶ್ಯ ಇದು. ದೇಗುಲವು ಎತ್ತರದ ಬೆಟ್ಟದ ಮೇಲಿದೆ. ಆ ಎತ್ತರದಲ್ಲೂ ದೇಗುಲದ ಗೋಪುರ ಇನ್ನೂ ಮೇಲೇರಿ ನಿಂತಿದೆ. ಅದು ಆಕಾಶವನ್ನೇ ಎತ್ತುತ್ತ ನಿಂತಿದೆ. ರಾತ್ರಿಯ ವೇಳೆ ಮೋಡ ಜಡೆಗೆ ಮುತ್ತಿಕೊಂಡಿದೆ. ಅದರಲ್ಲಿ ಜಾಹ್ನವಿಯೇ ಇಳಿದು ಬಂದಂತೆ ಮಳೆಯ ಹನಿಗಳು ತೊಟ ತೊಟನೆ ಅಭಿಷೇಕ ಮಾಡುತ್ತಿವೆ. ಜಡೆಯ ಒಂದು ಪಕ್ಕಕ್ಕೆ ಎಳೆವೆರೆ (ಬಾಲಚಂದ್ರ) ಸಿಕ್ಕಕೊಂಡಿದೆ. ಅಂದರೆ ಕತ್ತಲಿನ ಆವರಣದಲ್ಲಿ ಕರಿಯ ಮೋಡದ ಜಡೆಯ ಹಿನ್ನೆಲೆಯಲ್ಲಿ ಅಚ್ಚ ಬೆಳುದಿಂಗಳಿನ ಮಂದಪ್ರಕಾಶ! ಕಪ್ಪು ಜಡೆ, ಮೋಡ, ಬೆಳುದಿಂಗಳು– ಈ ವರ್ಣ ಸಂಘರ್ಷದಿಂದ ದೇಗುಲಕ್ಕೆ ಹೊಸ ಮೆರುಗು ಬಂದಿದೆ! ಶಿವನಿರುವ ದೇಗುಲದ ಒಡ್ಡೋಲಗದ ದರ್ಶನ ಕವಿಯ ಎದೆಯ

ಬಡಿತವನ್ನು ಹೆಚ್ಚಿಸುತ್ತದೆ. ತಟಕ್ಕನೆ ಈಶ್ವರನ ಚಿತ್ರ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಇಂಥ ಸರ್ವಾಂಗೋನ್ನತವಾದ ದೇಗುಲ ಮನುಷ್ಯನ ಜೀವಿತದ ಪರಮಾರ್ಥವಾದ ಮುಕ್ತಿಯನ್ನು ಕರುಣಿಸುವ ಆಶ್ರಯಸ್ಥಾನ ಎಂದು ಕವಿ ಭಾವಿಸುತ್ತಾನೆ. ಇಂಥ ದೇಗುಲವು ಮನುಷ್ಯನ ಭೋಗಾಸಕ್ತಿಗಳನ್ನು ಕಡೆಗಣಿಸದೆ ಅದನ್ನು ಮೀರಿದ ದರ್ಶನಾಸಕ್ತಿಯನ್ನು ಹೇಗೆ ಉಕ್ಕಿಸುತ್ತದೆ ಎಂಬ ಭಾವ ಇಲ್ಲಿದೆ. ವಿಷ್ಣುವಿನ ಆಲಯದಲ್ಲಿ ಶಿವನನ್ನು ತಂದಿರುವುದು ಈ ಕವಿಯ ಸಾಮಾಜಿಕ ಪ್ರಜ್ಞೆಯ ವೈಶಿಷ್ಟ್ಯ.

ಹಣ್ಣಿನಿಂ ತರುನಮ್ರ ಮೋಡ ಹನಿಯಿಂ ನಮ್ರ
ನೆರೆದ ಜನರೊಳು ಪುಣ್ಯಪುರಷ ನಮ್ರ
ಜ್ಞಾನಿಯರಿವಿಂ ನಮ್ರ ಆರ್ತನಳಲಿಂ ನಮ್ರ
ನೆಲೆಯರ್ತಿಗಿಂಬಾಗಿ ಭಕನಮ್ರ
ಭಾವಂಗಳಿಡಿದಿರಲು ಸತ್ ಕವಿಯು ವಾಙ್ನಮ್ರ
ವಿಪುಲದರ್ಶನ ಶಕ್ತ ಧರ್ಮ ನಮ್ರ
ಎಲ್ಲರಹಮನು ಕಳೆದು ವೃದ್ಧಮಾದೀ ಗುಡಿಯು
ಸಕಲ ಜನಕಾಯಿತಾದಾನ ನಮ್ರ.
ಇಲ್ಲಿ ಮಣಿದವನೆಲ್ಲೆಡೆಯು ಸೆಟಿದು ನಿಲುವ
ಇಲ್ಲಿ ಮೈ ಕುಗ್ಗಿದವನೆಲ್ಲೆಲ್ಲು ನೇರ ನಡೆವ[೧೭]

ಮನುಷ್ಯನಿಗೆ ಅಗತ್ಯವಾಗಿ ಇರಬೇಕಾದ ವಿನಯಶಾಲೀನತೆ. ಈ ಪದ್ಯದ ವಸ್ತು. ವಿನಯ ಎಂದರೆ ಬರಿಯ ಸೌಜನ್ಯವಲ್ಲ. ಸಂಘ ಸಮಾಜಗಳಲ್ಲಿ ತೋರುವ ನಡವಳಿಕೆ ಮಾತ್ರವೇ ಅಲ್ಲ. ಅದು ವ್ಯಕ್ತಿಯನ್ನು ಕುಗ್ಗಿಸುವ ನೈಚ್ಯಾನುಸಂಧಾನವೂ ಅಲ್ಲ. ಅದು ನಮ್ಮ ಅಹಂಕಾರವನ್ನು ತಗ್ಗಿಸಿ ಉಳಿದವರೂ ತನ್ನಂತೆಯೇ ಯೋಗ್ಯರಾಗಿದ್ದಾರೆ ಎಂಬ ಸಮಭಾವವನ್ನು ತರುತ್ತದೆ. ಮರಗಿಡ ಮೋಡಗಳಲ್ಲಿ ಹಾಗೂ ಸಮಾಜದ ಎಲ್ಲ ಬಗೆಯ ಜನರಲ್ಲಿ ಈ ವಿನಯಗುಣ ಇರಬೇಕು ಎಂದು ಕವಿ ಪ್ರಾಕೃತಿಕ ಸಾಮಾಜಿಕತೆಯನ್ನು ನಿರೂಪಿಸಿದ್ದಾನೆ.

ಪ್ರಕೃತಿಯ ಎಲ್ಲ ಅಂಶಗಳೂ ನಮಗೆ ವಿನಯದ ಬಾಲಬೋಧೆಯನ್ನು ಪಾಠ ಮಾಡುತ್ತವೆ. ಹಣ್ಣು ತುಂಬಿದ ಮರ ವಿನಯದಿಂದಲೋ ಎಂಬಂತೆ ಬಾಗಿರುತ್ತದೆ. ಜಗತ್ತಿಗೇ ನೀರುಣಿಸುವ ಮಳೆಮೋಡ ತನ್ನಲ್ಲಿ ಜಲಕಣಗಳನ್ನು ತುಂಬಿಸಿಕೊಂಡು ನಮ್ರವಾಗಿರುತ್ತದೆ.

ಅಲ್ಲಿಂದ ಮನುಷ್ಯ ಸಮಾಜಕ್ಕೆ ಬಂದರೆ ಪುಣ್ಯಪುರುಷನು ಎಷ್ಟೆಷ್ಟು ಶ್ರೀಮಂತನಾಗಿರುತ್ತಾನೋ ಅಷ್ಟಷ್ಟು ನಮ್ರಗುಣದಿಂದಲೂ ಶೋಭಿಸುತ್ತಾನೆ. ತಿಳಿವಳಿಕೆಯ ಕಣಜವಾಗಿದ್ದರೂ ಜ್ಞಾನಿ ಅಹಂಕಾರದಿಂದ ಮೆರೆಯದೆ ನಮ್ರವಾಗಿ ಉಳಿಯುತ್ತಾನೆ. ಆರ್ತನಾದವನು ತನ್ನ ದುಃಖದ ತೀವ್ರತೆಯಿಂದಾಗಿ ಬದುಕಿನ ಸೂಕ್ಷ್ಮಗಳನ್ನು ತಿಳಿದು ನಮ್ರನಾಗುತ್ತಾನೆ. ಮುಕ್ತಿಯ ಆಸೆ ಭಕ್ತನನ್ನು ನಮ್ರನನ್ನಾಗಿ ಮಾಡುತ್ತದೆ. ಇನ್ನು ಕವಿಗಳ ವಿಷಯಕ್ಕೆ ಬಂದರೆ ಭಾವಕೋಶದಲ್ಲಿ ವಿಹರಿಸುವ ಸತ್ ಕವಿ ತನ್ನ ಭಾಷೆಗೂ ನಯ-ವಿನಯದ ಯೋಗಾಭ್ಯಾಸ ಮಾಡಿಸಿರುತ್ತಾನೆ. ಪ್ರತಿಭೆಯಿಂದ ವಿಪುಲ ದರ್ಶನ ಶಕ್ತಿ ಪಡೆದವನು ತನ್ನ ಧರ್ಮ ಪ್ರಜ್ಞೆಯಿಂದಾಗಿ ನಮ್ರನಾಗಿರುತ್ತಾನೆ.

ಈ ಸುಭಾಷಿತದ ಆಶಯವನ್ನು ಕವಿ ಮುಂದೆ ಬೆಳೆಸಿರುವ ರೀತಿ ಅನನ್ಯವಾದದ್ದು. ನಮ್ರತೆಯನ್ನು ಕಲಿಸುವುದರಲ್ಲಿ ದೇಗುಲವು ಅಗ್ರಗಣ್ಯ. ಉಳಿದವರಿಗೆ ನಮ್ರತೆ ತಮ್ಮ ಹಲವಾರು ಸ್ವಭಾವಗಳಲ್ಲಿ ಒಂದಾದರೆ ಉಳಿದೆಲ್ಲ ಜನಗಳ ಅಹಂಕಾರವನ್ನು ಕಿತ್ತು ಕಿತ್ತು ವೃದ್ಧರಾಗಿರುವ ಈ ಮಲೆದೇಗುಲವು ಎಲ್ಲರಿಗೆ ನಮ್ರತೆಯನ್ನು ಉಡುಗೊರೆಯಾಗಿ ದಾನಮಾಡುವ ಗುಣ ಹೊಂದಿರುವುದನ್ನು 'ಆದಾನ ನಮ್ರ' ಎಂಬ ಮಾತು ಧ್ವನಿಸುತ್ತದೆ. ಅನಾಸಕ್ತನು ವಿನಯಶೀಲನಾದರೆ ಮಾತ್ರ ಬ್ರಹ್ಮಯೋಗವನ್ನು ಪಡೆಯುತ್ತಾನೆ. ಅವನ ಪಾಲಿಗೆ ವಿನಯ ಎಂಬುದು ತಲೆ ಬಾಗಿಸುವ ಒಂದು ದಾಸ್ಯದ ಸಂಕೇತವಲ್ಲ. ಈ ಮಣಿತದಿಂದ ಭಕ್ತನ ತೇಜಸ್ಸು ವೃದ್ಧಿಸುತ್ತದೆ. ಲೋಕವರ್ತನ ಅರ್ಥಪೂರ್ಣವಾಗುತ್ತದೆ. ದೇವರ ಮುಂದೆ ಮಣಿದವನು ಮಹಾಧೀರನಂತೆ ಉಳಿದ ಕಡೆಗಳಲ್ಲೆಲ್ಲ ಸೆಟೆದು ನಿಲ್ಲುವ ಮನೋಸ್ಥೈರ್ಯವನ್ನು ಸಂಪಾದಿಸುತ್ತಾನೆ. ಇಲ್ಲಿ ಕುಗ್ಗಿ ನಡೆದವನು ಉಳಿದ ವ್ಯಾವಹಾರಿಕ ಕ್ಷೇತ್ರಗಳಲ್ಲಿ ನೇರವಾಗಿ ನಡೆಯಬಲ್ಲ ದಾರ್ಢ್ಯ ಹೊಂದಿರುತ್ತಾನೆ. ದೈವ ಪರವಾದ ಮನಸ್ಸು ಪ್ರಚಂಡ ಆತ್ಮಶಕ್ತಿಯನ್ನು ಪಡೆದಿರುತ್ತದೆ ಎಂಬ ಹೇಳಿಕೆ ಸುಳ್ಳಲ್ಲ.

ಹಸಿರೆಲೆಗಳಂಜಲಿಯೊಳಾಂತು ರವಿ ತೇಜಮಂ
ಜೀವಕರ್ಘ್ಯವನೆರವ ಬನದ ನಲವು
ಕೆರೆಕೆರೆಯ ಹರಹಿನೊಳು ಜಲಹಾಸವನು ಮೆರೆಸಿ
ತಿರೆಬಣ್ಣಗೊಳಿಸುವೀ ಬಿಸಿಲ ನಲವು
ಅಲೆ ಕೆದರೆ ತರು ಬೆದರೆ ನೀಲದಿಂ ಧುಮ್ಮಿಕ್ಕಿ
ಕೋಡಿಗೇರುತ ಗಾಳಿ ಮೊರೆವ ನಲವು

ಬೆಳಕೆಲರು ಹಸಿರುಗಳ ಪೌತ್ರನಾನೀ ನಲವ
ನನ್ನ ಕರಣದಿ ಕೊಂಡು ನಲಿವ ನಲವು– [೧೮]

ಈ ನಲವು ಬೆರಗುಗಳ ಕೊಳುವಂತೆ ತೋರುತಿಹುದೀಕೃತಿಯ ಚೆಲುವಿನೊಸಗೆ ಆದಿಯಿಂದಿಂದಿಂಗೆ ನಡೆದ ದಣಿವನು ಕಳೆವ ಗುಡಿಯಿದಿರು ಜನದ ಮಣಿಗೆ

ಆನಂದಾನುಭವ ವಿಮುಖನಾಗುವವನನ್ನು ಪು.ತಿ.ನ. ಅವರು 'ಸ್ವಕೇಂದ್ರ ಸ್ಥಿತ ಭವಿ' ಎಂದು ಕರೆಯುತ್ತಾರೆ. ಅಂಥವರಿಗೆ ಆನಂದ ಗ್ರಂಥಿಗಳು ಇರುವುದಿಲ್ಲ ಎಂಬುದು ಕವಿಯ ಆಕ್ಷೇಪ. ಈ ಲೋಕವೇ ಸಂತೋಷದ ಬುಗ್ಗೆಯಾಗಿದೆ ಎಂಬುದನ್ನು ಮರೆಯಬಾರದು. ಬೆಳಕು, ಗಾಳಿ ಹಸಿರು ಇವೆಲ್ಲವೂ ಈ ನಲವಿನ ವಿತರಕ ಶಕ್ತಿಗಳು, ಬನದ ಹಸಿರೆಲೆಗಳು ಏನು ಮಾಡುತ್ತಾವೆ? ಅವು ಸೂರ್ಯನ ಬೆಳಕನ್ನು ತಮ್ಮ ಬೊಗಸೆಗಳಲ್ಲಿ ಹಿಡಿದಿರಿಸಿ ಜೀವಿಗಳಿಗೆ ಅರ್ಘ್ಯವನ್ನು ಎರೆದು ಸಂಭ್ರಮಿಸುತ್ತವೆ.

ಕವಿ ಕೊಡುವ ಎರಡನೆಯ ಹೋಲಿಕೆ ಬಿಸಿಲಿನದು. ಅದು ಉಗ್ರವಾದ ಕಿರಣಗಳಿಂದ ನೀರನ್ನು ಬತ್ತಿಸಿದರೂ ಮಳೆಯಾಗಿ ಸುರಿದು ಕೆರೆಕೆರೆಗಳಲ್ಲಿ ಜಲಸಮೃದ್ಧಿಯನ್ನು ತಂದು 'ಜಲಹಾಸ'ಕ್ಕೆ ಕಾರಣವಾಗುತ್ತದೆ. ಈ ಜಲಹಾಸದಿಂದಾಗಿ ಭೂಮಿಯು ರಂಗೇರುತ್ತದಲ್ಲದೇ? ಆದುದರಿಂದ ನೆಲವನ್ನು ಹರಡುವ ಮಾಧ್ಯಮಗಳಲ್ಲಿ ಬಿಸಿಲಿಗೂ ಸ್ಥಾನವಿದೆ. ಮೂರನೆಯದೆಂದರೆ ಗಾಳಿ, ಮೊರೆಯುವ ಗಾಳಿಯ ಪ್ರತಾಪವನ್ನು ಓದಬೇಕು. ಈ ಗಾಳಿ ಕೆರೆಕೊಳ್ಳ ಸಮುದ್ರಗಳ ಅಲೆಗಳನ್ನು ಕೆದರಿ ಮರಗಿಡಗಳನ್ನು ಬೆದರಿಸಿ ಆಗಸದಿಂದ ಧುಮುಕಿ ಮತ್ತೆ ಬೆಟ್ಟದ ಶಿಖರಕ್ಕೇರಿ ಮೊರೆಯುತ್ತ ನಲಿಯುತ್ತದೆ. ಗಾಳಿ ಬೆಳಕು ಹಸಿರು ಈ ಪ್ರಕೃತಿಯ ಧಾತುಗಳಿಗೇ ಇಷ್ಟು ಶಕ್ತಿ ಮತ್ತು ಸಂಭ್ರಮಗಳಿರಬೇಕಾದರೆ ಇವೆಲ್ಲವುಗಳ ಮೊಮ್ಮಗನಾದ ಮನುಷ್ಯನಿಗೆ ಉತ್ಸಾಹ ಆನಂದ ಇರದಿದ್ದೀತೆ? ಮೇಲಿನ ಮೂರರ ನಲವನ್ನು ಅರೆದು ಕುಡಿದ ಮಾನವ ತಾನೂ ಸಂಭ್ರಮ ಪಡಬೇಕಾದದ್ದು ಸಹಜವಾದುದೇ ಆಗಿದೆ. ಪ್ರಕೃತಿದತ್ತವಾದ, ಮನುಷ್ಯನ ಮೂಲಕ ರವಾನೆಯಾದ ಈ ನೆಲವನ್ನು ದೇಗುಲದ ವಿಗ್ರಹವು ಸ್ವೀಕರಿಸುತ್ತದೆ. ಅಷ್ಟೇ ಅಲ್ಲ, ಆದಿಕಾಲದಿಂದಲೂ ಅದು ಅವನ ದಣಿವನ್ನು ಹೋಗಲಾಡಿಸುತ್ತ ಬಂದಿದೆ. ಅದಕ್ಕೇ ಜನ ಕೃತಜ್ಞತಾಪೂರ್ವಕವಾಗಿ ವಿಗ್ರಹಕ್ಕೆ ಮಣಿಯುತ್ತಾರೆ.

ಕವಿತೆಯಲ್ಲಿ ಬರುವ 'ಆನಂದಂ ಪ್ರಯಂತಿ, ಅಭಿಸಂವಿಶಂತಿ' ಎಂಬ ಋಷಿಮಂತ್ರವೇ ಪು.ತಿ.ನ. ಅವರಿಗೆ ತಾರಕ ಮಂತ್ರವಾಗಿದೆ. ಅವರ ಚೈತನ್ಯ ಸತ್ವವನ್ನು ಈ ನಾಮಸ್ಮರಣೆಯ ಮಹಾಮಂತ್ರ ಸೂತ್ರವು ಎತ್ತಿ ಹಿಡಿದಿದೆ.

ನೆನೆ ನೆನೆ ನೆನೆ ಮನವೇ ನಾರಾಯಣನ
ನಾರಾಯಣ ನಾರಾಯಣ ನಾರಾಯಣನ

ಎಂಬ ಪು.ತಿ.ನ. ಅವರ ಪದ್ಯದಲ್ಲಿ ಈ ನಾಮದ ಮಹತ್ವ ವಿಸ್ತಾರವಾಗಿ ಚಿತ್ರಣಗೊಂಡಿದೆ. ಎಲ್ಲ ಭಕ್ತ ಚೇತನಗಳಿಗೆ ಉಂಟಾದ ತೀವ್ರಾನಂದಾನುಭೂತಿಗಳನ್ನೆಲ್ಲ ಈ ನಾಮವು ತನ್ನಲ್ಲಿ ಮಡುಗಟ್ಟಿಸಿಕೊಂಡಿದೆ. ಇಂಥ ಮಹಾಭಕ್ತರಿಗೆ ಚೆಲುವ ನಾರಾಯಣಾ ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು ಮಳಮಳನೆ ಕಣ್ಣೀರು ಹರಿಯುವಷ್ಟು ಮನಸ್ಸು, ಆರ್ದ್ರವಾಗುತ್ತದೆಂದು ಒಬ್ಬ ಕವಿ ಹೇಳಿದ್ದಾನೆ. ಕವಿತೆಯಂತೇ ಭಕ್ತಿಯೂ ಒಂದು ಹುಚ್ಚುಮನಸ್ಸಿನ ಮಾಟ. ಸಹೃದಯರಲ್ಲೂ ಈ ಹುಚ್ಚಿನ ಅಂಶವಿರದಿದ್ದರೆ ಈ ಭಾವಗಳು ಅರ್ಥವಾಗುವುದು ಕಷ್ಟ ಎನ್ನುತ್ತಾರೆ. ಪು.ತಿ.ನ. ಸರ್ವಭೂತ ಹೃದಯರಾದ, ಆಧ್ಯಾತ್ಮಿಕ ಪರಿಸರಕ್ಕೆ ಹೊಂದಿಕೊಂಡು ರಸಲೋಕ ಸ್ಥಿತನಾಗಿರುವ ಮೌನಿ (ಋಷಿ) ರಸಕಾತರನಾಗಿಯೂ ಇರುತ್ತಾನೆ. ಅಂಥ ಋಷಿಗಳ ಚಿಂತನದೀಪ್ತಿ ಈ ಭಾವಗಳನ್ನು ತಿಳಿಸುವಂತೆ ಆ ಋಷಿಗಳು ನನ್ನನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಕವಿ ಭಾವಿಸುತ್ತಾನೆ. ಆದರೆ ಕವಿ ತನ್ನ ಅಂತಃಸತ್ವವನ್ನು ಶೋಧಿಸಿಕೊಂಡು ಕೊರಗುತ್ತಾನೆ. 'ಹರಿ' ಎಂಬ ನಾಮಸ್ಮರಣೆ ಮಾಡಿದಾಗ ಈ ಋಷಿಗಳ ಅಂತರಂಗದ ಪಕ್ಷಿ ಗರಿಗೆದರಿ ಹಾರಾಡಬಯಸುತ್ತದೆ. ಅದನ್ನು ಅನುಕರಿಸಬಯಸಿ ಆ ಹಂಸಗತಿ ತನಗೂ ಬರಲಿ ಎಂದು ಚಡಪಡಿಸುತ್ತಾನೆ ಕವಿ. ಆದರೆ ಅವನದು ದುರ್ಬಲ ಹೃದಯ. ಅದಕ್ಕೆ ಅಂಥ ಮಾಂತ್ರಿಕ ಹಾರಾಟ ಸಾಧ್ಯವಿಲ್ಲ. ಆದ್ದರಿಂದ ಸುಮ್ಮನೆ ದೇವಾಲಯದ ಗೂಡಿನಲ್ಲಿ ತನ್ನ ಮಿತಿಯನ್ನು ನೆನೆದು ಕೊರಗುತ್ತ ನಿಲ್ಲುತ್ತದೆ.

ಸಂತರಿಗೂ ಭಕ್ತರಾಗಬಯಸುವ ಭವಿಗಳಿಗೂ ಇರುವ ವ್ಯತ್ಯಾಸ ಇದೇ. ಅನೇಕ ಪ್ರಲೋಭನೆಗಳಿಂದ ನಮಗೆ ಮುಕ್ತಿಯಿಲ್ಲ. ಏಕೆಂದರೆ ಕಾಮ ಕ್ರೋಧ ಭಯ ಮೋಹ ಮೊದಲಾದ ಬೇಟೆಗಾರರು ನಮ್ಮ ಆತ್ಮದ ಆಮಿಷಕ್ಕೆ ಹೊಂಚುತ್ತ ನಿಂತಿದ್ದಾರೆ. ಇದು ಕವಿಯ, ಲೌಕಿಕನ ಸ್ಥಿತಿ. ಆದರೆ ಅವನ್ನೆಲ್ಲಾ ಲೀಲಾಜಾಲವಾಗಿ ಗೆದ್ದುನಿಂತ ಸಂತರು ನಿರ್ಭಯದಿಂದ ನಸುನಗುತ್ತ ಕರುಣೆ ತೋರದೆ ಅಂದರೆ ಸಹಾಯ ಹಸ್ತವನ್ನು ಚಾಚದೆ

ನಿಲ್ಲುತ್ತಾರೆ. ಅಂದರೆ ಭಕ್ತ ತನ್ನ ಸಾಧನೆಯಿಂದಲೇ ಮೇಲೆ ಬರಲಿ ಎಂಬ ಆಶಯ ಅವರದು. ಅದಕ್ಕೆಂದೇ ಅವರು ಕರುಣೆ ತೋರುವುದಿಲ್ಲ. ಹಾಗೆಂದು ಅವರು ನಿರಾಸಕ್ತರೂ ಅಲ್ಲ. ಮುಕ್ತಿ ಕಾಮಿಗಳ ಬಗೆಗೆ ಅವರಿಗೆ ವಿಶ್ವಾಸವಿದೆ. ಆದುದರಿಂದ ಅವರ ನಸುನಗೆಯ ನೋಟದಲ್ಲಿ ಭಕ್ತರ ಅಂತರಂಗಕ್ಕೆ ನಿರ್ಭಯದ ಮನೋಭಾವವನ್ನು ಕುದುರಿಸುವ ಪ್ರಯತ್ನವಿದೆ. ನಾಮಸ್ಮರಣೆಯಿಂದ ಆತ್ಮಕ್ಕೆ ಒದಗುವ ಭಾವಸಂಪತ್ತಿ ಹೆಚ್ಚಿನದು. ಅದರಲ್ಲಿ ಬಲವಿದೆಯೇ, ತನಗೆ ಆ ಆನಂದಾನುಭವ ಶಕ್ತಿಯಿದೆಯೇ ಎಂದು ಜೀವ ಅನುಮಾನಿಸಬೇಕಾಗಿಲ್ಲ ಎಂಬ ಭರವಸೆಯ ಬೆಳಕು ಸಾಧುಸಂತರ ನೋಟದಿಂದ ನೋಟದಿಂದ ಹರಿದುಬರುತ್ತದೆ. ಕೇವಲ ಅನುಕರಣಕಾರರಿಗೆ ಆತ್ಮಪುಷ್ಟಿ ಇರುವುದಿಲ್ಲ. ಸಾಧನೆಯ ಹಂತಗಳನ್ನು ದಾಟ ಬಯಸುವ ಭಗವದ್ ಭಕ್ತರಿಗೆ ಸಂತ, ಭಾಗವತರ ಕೃಪಾಹಸ್ತ ಚಾಚಿರುತ್ತದೆ ಎಂದು ಪು.ತಿ.ನ. ಹೇಳುತ್ತಾರೆ. "ಸಮರ್ಥರಾದ ಸಂತರಿಂದ ರಸಾಸ್ತಿಕ್ಯ ಒಂದು ಜನಪದದ ಸಂಪ್ರಜ್ಞೆಯಲ್ಲಿ ಜಾಗೃತವಾಗಿರುತ್ತದೆ".

ಹಾಗಾಗಿ ಅಹಂಕಾರ ನಿರಸನದಿಂದ ವ್ಯಕ್ತಿ ಮಾನಸಿಕ ಬಿಡುವನ್ನು ಪಡೆಯುವುದು ಸಾಧ್ಯ. ಈ ನಿರಸನ ದೈವಕ್ಕೆ ಶರಣಾಗುವುದರಿಂದ ಸಾಧ್ಯ. ದೇವಾಲಯದ ಅರ್ಚನೆ, ಉತ್ಸವ, ಕಲ್ಪನೆಗಳು, ಇಂಥ ದೈವ ಪ್ರತೀಕಗಳಾದರೂ ಸಾಮಾಜಿಕವಾಗಿ ವಿವಿಧ ಸ್ಥರಗಳನ್ನು ಪು.ತಿ.ನ ಅವರು ಚಿತ್ರಿಸಿರುವುದು ಸೂಚಿತವಾಗುತ್ತದೆ.

ಗುಡಿಯಿದರ ಮಣಿಗೆಯ ಭೂಮಾವಿನಮ್ರತೆಯ
ದುರ್ಭರಾಹಂಕಾರ ದಮನ ವಿದಿಯೇ ಎಂದು

ದೇವಾಲಯವನ್ನು ಗುರುತಿಸುವಲ್ಲಿ, ದೇವಾಲಯ ಈ ಕವಿ ಕಾವ್ಯದ ಅತ್ಯಂತ ಮುಖ್ಯ ಪ್ರತೀಕ ಎಂಬುದನ್ನು ಯಾರಾದರೂ ಗುರುತಿಸಬಹುದು.

ಒಂದು ಚೇತನದಲ್ಲಿ ಭವದ ಧರ್ಮಾರ್ಥ ಕಾಮ ಸಂಬಂಧವಾದ ಆಕರ್ಷಣೆಗೂ ಮುಕ್ತಿಯ ವಿಕರ್ಷಣೆಗೂ ಉಂಟಾಗುವ ಕರ್ಷಣೆಯಿಂದ ಕಾವು ಹುಟ್ಟುತ್ತದೆ. ಕಲೆ ಉದಯಿಸುತ್ತದೆ ಎಂಬ ಪು.ತಿ.ನ. ಅವರ ಬಹುಮುಖ್ಯ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ಈ ಜಿಜ್ಞಾಸೆಯನ್ನು ಮುಂದುವರೆಸುವುದಾದರೆ ದೇವಾಲಯ, ಕುಟುಂಬ ಸಂಬಂಧ ಈ ಎಲ್ಲಾ ವಿಚಾರಗಳನ್ನು ಚಿತ್ರಿಸಿರುವ ಬಗೆ ನಿಜಕ್ಕೂ ಪು.ತಿ.ನ. ಅವರ ಕಾವ್ಯ ಪ್ರಸ್ತುತ ಕಾಲಮಾನಕ್ಕೆ ಪ್ರಾಶಸ್ತ್ಯವನ್ನು ಪಡೆದಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ದೇಹ ಮತ್ತು ಮನಸ್ಸಿನ ತಿಕ್ಕಾಟವೇ ಕಾವ್ಯದ ಸೃಷ್ಟಿ ಎಂಬುದು ಪು.ತಿ.ನ ಅವರ ಕಾವ್ಯದ ಚಿಂತನೆಗೆ ಬಹುಮುಖ್ಯ ಕೀಲಿಕೈ ಎಂದು ನಾನು ಭಾವಿಸುವುದು ಉಚಿತವಾಗಿದೆ. ಅನುಭವಗಳನ್ನು ಸೋಸುವುದಕ್ಕಾಗಿಯೇ ಇಂದ್ರಿಯಗಳಿವೆ. ಆದರೆ ವಿಷಯಗಳಲ್ಲಿ ಈ ಇಂದ್ರಿಯಗಳು ವಿರಮಿಸುವಲ್ಲಿ ಸೊಗಸು ಇದೆಯಾದರೂ ರಸದ ಪರಿಪಾಕವಿಲ್ಲದೆ ಸಮಾಜದ ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವುದು ಕಾವ್ಯದ ಸೂಕ್ಷ್ಮತೆಯಲ್ಲಿ ಕಾಣಬಹುದಾಗಿದೆ.

ಬುವಿ ಬಾನಳೆದುರವಣಿಸಿದ
ಹರಿಪಾದಕೆ ತಲೆಯೊಡ್ಡುತ
ಕೆಳಲೋಕಕೆ ತೆರಳುತ್ತಿಹ
ಬಲಿದೊರೆಯಂದದೊಳು,
ಮಿಗುವಿರುಳಿನ ನಿಡುನೀಡಿದ
ದೆಸೆ ಮೆಟ್ಟಿದ ಮುಗಿಲಡಿಯಡಿ
ಮರೆಯಾದುದು ಪಗಲೈಸರಿ
ಪಡುವಣ ಕಮರಿಯೊಳು[೧೯]

ಈ ಮೊದಲಾದಂತಹ ಚಿತ್ರಣಗಳು ಕೇವಲ ಪ್ರಕೃತಿ ಚಿತ್ರಣಗಳಾಗಿ ನಿಲ್ಲದೇ ಪೌರಾಣಿಕ ಪ್ರತಿಮೆಗಳಾಗಿ ಮೂಡುವುದನ್ನು ಗಮನಿಸಬಹುದಾಗಿದೆ. ಹೀಗೆ ಪ್ರಕೃತಿಯನ್ನು ಪುರಾಣಕ್ಕೆ ಹೊರಳಿಸುವ ಮೂಲಕ ಅಲೌಕಿಕವಾದ ಒಂದು ಜಗತ್ತನ್ನು ಕವಿ ಕಾಣಿಸುತ್ತಾ ಹೋಗುತ್ತಾರೆ. ನಾವು ಬದುಕುತ್ತಿರುವ ಈ ಭೌತಿಕ ಜಗತ್ತಿನಂತೆ, ಚೇತನದ ನಿಜವಾದ ನೆಲೆಯಾದ ಅಲೌಕಿಕ ಜಗತ್ತು ಹೊಂದಿದೆ ಎಂಬುದು ಪು.ತಿ.ನ ಅವರ ದೃಢ ವಿಶ್ವಾಸ. ಈ ಎರಡೂ ಜಗತ್ತುಗಳು ಪರಸ್ಪರ ಸಂಪರ್ಕಿಸಲು ಅನೇಕ ಸಾಂಕೇತಿಕ ವಿಷಯಗಳನ್ನು ಕೊಡುತ್ತಾರೆ.

ಜನನ ಮರಣದೊಳಂತಃ ಕರಣ
ಪೊರೆಯ ಬಿಡುತ ಹೊಸದಾಗುತಿದೆ
ಪೊರೆಗಳಿವೆಸತವು ಸುಲುಭದೊಳಂಗದು
ಮುಳ್ಳು ಬೇಲಿಗದು ನುಗ್ಗದೆಯೆ[೨೦]

ಎಂಬಲ್ಲಿ ಮುಳ್ಳು ಮುಪ್ಪು, ಅಂತಃಕರಣ, ಪೊರೆಬಿಡುವ ಹಾವು, ಇವೆಲ್ಲಕ್ಕೆ ಕೊನೆಯಿಲ್ಲವೇ ಎಂದು ಪರಿಭಾವಿಸುತ್ತಾರೆ. ಹೀಗೆ ಪು.ತಿ.ನ ಅವರ ದೃಷ್ಟಿಕೋನ–

ದಿಂದಾಗಿ ಎರಡು ಬಗೆಯ ಕಾವ್ಯವನ್ನು ಇದುವರೆವಿಗೆ ಚರ್ಚಿಸಲಾಯಿತು. ಅವುಗಳಲ್ಲಿ ಒಂದು 'ಮಾರ್ಗ' ಇನ್ನೊಂದು 'ದೇಸಿ' ಎರಡೂ ಕ್ರಮಗಳ ಹಿಂದಿರುವ ಮನೋಧರ್ಮ ಒಂದೇ. ಆದರೆ ಮಾರ್ಗದಲ್ಲಿ ಸಂಸ್ಕೃತ ಪ್ರೀತಿ ಹೆಚ್ಚಾಗಿ ಕಂಡು ಬರುತ್ತದೆ. ಕನ್ನಡ ಜಾಯಮಾನಕ್ಕೆ ಕೆಲವೊಮ್ಮೆ ಭಾಷಾ ಶೈಲಿ ಕೃತಕವೆಂದು ಅನಿಸುತ್ತದೆ. ದೇಸಿಯಲ್ಲಿ ಜಾನಪದ ಲಯ ಮತ್ತು ಸರಳ ಕನ್ನಡ ಭಾಷಾ ರೂಪಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ರಂಗವಲ್ಲಿ ಮೊದಲಾದ ಕವಿತೆಗಳ ಪ್ರಾರಂಭದಲ್ಲಿ ಪ್ರಶ್ನಿಸಲಾದ ಕವಿತೆಗಳು ಮತ್ತು ಅಹಲ್ಯೆ ಮೊದಲಾದ ಗೀತರೂಪಕಗಳ ಬಹಳಷ್ಟು ಹಾಡುಗಳು. ಈ ಮಾದರಿಯವು. ಆದರೆ ಇಂಥ ಕವಿತೆಗಳ ಸಂಖ್ಯೆ ಕಡಿಮೆಯಾಗಿರುವುದು ಉಲ್ಲೇಖನೀಯ.

ಒಟ್ಟಾರೆಯಾಗಿ ಪು.ತಿ.ನ. ಅವರ ಕವಿತೆಗಳು ಮುಖ್ಯವಾಗಿ ಕೆಳವರ್ಗದವರ ಮತ್ತು ಜೀವನದಲ್ಲಿ ಸಾಕಷ್ಟು ನೋವನ್ನು ಅನುಭವಿಸಿ ವಾಸ್ತವ ನೆಲೆಗಟ್ಟಿಗೆ ಹೊಂದಿಕೊಳ್ಳಲಾಗದೆ ಪರಿತಪಿಸುತ್ತಾ, ತಮ್ಮ ಸುತ್ತಮುತ್ತಲಿನ ಸಾಮಾನ್ಯ ಜನ ಜೀವನದ ಬಗ್ಗೆ ಕುರಿತದ್ದಾಗಿದೆ. ಹಾಗಾಗಿ ತಮ್ಮ ಕಾವ್ಯ ಶಕ್ತಿಯ ಮೂಲಕ ಸಾಮಾಜಿಕ ಪ್ರಜ್ಞೆಯ ಚಿತ್ರಣವನ್ನು ಮೂಡಿಸಿರುವುದಲ್ಲದೇ ಸಾಮಾಜಿಕತೆಯ ಮಜಲುಗಳನ್ನು ಇವರ ಕಾವ್ಯದ ಮೂಲಕ ವಿವಿಧ ನೆಲೆಗಟ್ಟಿನಲ್ಲಿ ಚರ್ಚಿಸಲಾಗಿದೆ.

ಅಡಿಟಿಪ್ಪಣಿಗಳು

೧. ಪು.ತಿ.ನ. ಸಮಗ್ರ ಕಾವ್ಯ, ಪು. ೩೭

೨. ಅದೇ, ಪು. ೩೦೦

೩. ಅದೇ, ಪು. ೭೫

೪. ಅದೇ, ಪು. ೬೧

೫. ಅದೇ, ಪು. ೬೧

೬. ಅದೇ, ಪು. ೬೧

೭. ಅದೇ, ಪು. ೬೨

೮. ಅದೇ, ಪು. ೬೩

೯. ಅದೇ, ಪು. ೬೪

೧೦. ಅದೇ, ಪು. ೬೬

೧೧. ಅದೇ, ಪು. ೨೨೭

೧೨. ಅದೇ, ಪು. ೨೨೮

೧೩. ಅದೇ, ಪು. ೫೩

೧೪. ಅದೇ, ಪು. ೮೫

೧೫. ಅದೇ, ಪು. ೩೨೫

೧೬. ಅದೇ, ಪು. ೨೨೬

೧೭. ಅದೇ, ಪು. ೩೩೦

೧೮. ಅದೇ, ಪು. ೩೨೯

೧೯. ಅದೇ, ಪು. ೧೧೬

೨೦. ಅದೇ, ಪು. ೫೩೮

ಅಧ್ಯಾಯ ನಾಲ್ಕು

ಪು.ತಿ.ನ ಅವರ ಗೀತ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ

ಪು.ತಿ.ನ ಅವರ ಗೀತ ನಾಟಕಗಳ ರಚನೆಯ ಚಿಂತನೆಯು ಬಹಳ ವಿಸ್ತಾರವಾದುದು. ೧೯೪೦ (ಅಹಲ್ಯೆ) ರಿಂದ ೧೯೯೭ (ಕುಚೇಲ, ಕೃಷ್ಣ)ರ ತನಕ ಸುಮಾರು ೫೭ ವರ್ಷಗಳ ಧೀರ್ಘ ಕಾಲಾವಧಿಯಲ್ಲಿ ೧೮ ಕೃತಿಗಳನ್ನು ರಚಿಸಿದ್ದಾರೆ. ಹೆಚ್ಚಿನ ಕೃತಿಗಳು ರಾಮಾಯಣ, ಮಹಾಭಾರತದ, ಭಾಗವತ ಕೃತಿಗಳ ಮೂಲವಸ್ತುವನ್ನು ಆಶ್ರಯಿಸಿವೆ. ಇವುಗಳಲ್ಲಿ ರಾಮಾಯಣವನ್ನು ಆಶ್ರಯಿಸಿದ ಕೃತಿಗಳೇ ಹೆಚ್ಚು, 'ರಾಮೋದಯ' 'ಅಹಲ್ಯೆ' 'ಸೀತಾಪರಿಣಯ' 'ಹರಿಣಾಭಿಸರಣ' 'ಶಬರಿ' ' ಶ್ರೀರಾಮಪಟ್ಟಾಭಿಷೇಕ' ಈ ಕೃತಿಗಳು ರಾಮಾಯಣಾಧಾರಿತ ನಾಟಕ ಕೃತಿಗಳ ಒಂದು ಚಕ್ರವನ್ನೇ ನಿರ್ಮಿಸಿದೆ. ಇವನ್ನು ಭಾಸನ ನಾಟಕ ಚಕ್ರದಂತೆ ವಿವೇಚಿಸುವ ಅವಕಾಶವಿದೆ. ಶ್ರೀರಾಮನ ಹುಟ್ಟಿನಿಂದ ಹಿಡಿದು ಪಟ್ಟಾಭಿಷೇಕದವರೆಗಿನ ಕಥಾಸರಣಿ-ಯಲ್ಲಿ ಈ ನಾಟಕಗಳು ತಮ್ಮನ್ನು ಗುರುತಿಸಿಕೊಳ್ಳುತ್ತವೆ.

'ಭಾಸ' ಕವಿಯಂತೆ ಪು.ತಿ.ನರವರು ಮೂಲವಸ್ತುವನ್ನು ಬೆಚ್ಚಿಬೀಳಿಸುವಂಥ ಪರಿವರ್ತನೆಗೆ ಎಂದಿಗೂ ಒಳಪಡಸುವುದಿಲ್ಲ. ಮೂಲ ರೇಖೆಗಳನ್ನು ಗೆರೆ ಮಾಸದಂತೆ ಉಳಿಸಿಕೊಂಡು ಅನುಕ್ರಮವಾದ ಕಣ್ಮರೆಯ ಕ್ಷಣಗಳನ್ನು ಹುಡುಕುವುದು ಅವರಿಗೆ ಪ್ರಿಯವಾದ ಕ್ರಮ. (ಇವರ ಮಹಾಕಾವ್ಯ ಶ್ರೀ ಹರಿಚರಿತೆಯಲ್ಲಿ ಇದೇ ಕಥನದ ಒಂದು ಮಹತ್ವದ ತಂತ್ರವಾಗಿ ಪರಿಣಮಿಸಿದೆ) ರಾಮಾಯಣ ಸರಣಿಯ ನಾಟಕಗಳಲ್ಲಿ ರಾಮನನ್ನು ಕೇಂದ್ರ ಪಾತ್ರವಾಗಿ ಹೊಂದಿರುವ ನಾಟಕಗಳಿಗಿಂತ ಅನ್ಯಪಾತ್ರ ಕೇಂದ್ರಿತವಾದ 'ಅಹಲ್ಯೆ' ಮತ್ತು 'ಶಬರಿ'ಗಳೇ ಅವರ ಗಹನವಾದ ಕೃತಿಗಳಾಗಿರುವುದು ಗಮನಿಸಬೇಕಾದ ಅಂಶ. ಹಾಗಾಗಿ ಪು.ತಿ.ನರವರ ಗೀತ ನಾಟಕಗಳಲ್ಲಿ ವಿಶೇಷ ಚರ್ಚೆಗೆ ಒಳಪಡುವ ಕೃತಿಗಳೆಂದರೆ ಅಹಲ್ಯೆ, ಗೋಕುಲ ನಿರ್ಗಮನ, ಸತ್ಯಾಯನ ಹರಿಶ್ಚಂದ್ರ, ವಿಕಟಕವಿವಿಜಯ, ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆಯು ಪು.ತಿ.ನರವರ ದೃಷ್ಟಿಕೋನದಲ್ಲಿ ಎಷ್ಟರ ಮಟ್ಟಿಗೆ ಹೊರ ಹೊಮ್ಮಿವೆ ಎಂಬುದನ್ನು ಈ ಮೂಲಕ ನಾವು ತಿಳಿಯಬಹುದಾಗಿದೆ.

ಗೀತ ನಾಟಕಗಳ ಉಗಮ ಮತ್ತು ಬೆಳವಣಿಗೆ

ಕನ್ನಡದಲ್ಲಿ ಪ್ರಚಾರದಲ್ಲಿರುವ ಗೀತರೂಪಕಗಳು ಅಥವಾ ಗೀತ ನಾಟಕಗಳು ಎಂಬ ಸಾಹಿತ್ಯ ಪ್ರಕಾರಕ್ಕೆ ಹತ್ತಿರವಾಗುವಂತಹ ಸಾಹಿತ್ಯ ಪ್ರಕಾರವನ್ನು ಪಾಶ್ಚಾತ್ಯರಲ್ಲಿ 'ಅಪೆರಾ' ಎಂದು ಕರೆಯುತ್ತಾರೆ. ನಾಗರೀಕ ಪ್ರಪಂಚದಲ್ಲಿ ಸಿನಿಮಾ, ಟೆಲಿವಿಷನ್‌ಗಳು, ಜನಸಾಮಾನ್ಯರ ಕುತೂಹಲ, ಆಸಕ್ತಿಗಳನ್ನು ಕೆರಳಿಸಿ ಅತ್ಯಧಿಕವಾಗಿ ಪ್ರಸಾರಗೊಂಡಿದ್ದರೂ ಅಪೆರಾಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಳ್ಳದೆ ಹಿಂದಿನ ತಮ್ಮ ಆಕರ್ಷಣೆಯನ್ನು ಉಳಿಸಿಕೊಂಡು ಪಾಶ್ಚಾತ್ಯ ನಾಗರೀಕರ ಮನೋರಂಜನೆಯ ಸಾಧನಗಳಲ್ಲಿ ಹಿರಿಯ ಸ್ಥಾನವನ್ನು ಪಡೆದಿವೆ.

ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ನಾಟಕದ ಇತಿಹಾಸವನ್ನು ಗಮನಿಸುವಾಗ ಈ ಪ್ರಕಾರಕ್ಕೆ ವಯಸ್ಸು ಕಡಿಮೆ ಎನ್ನುವುದು ಸುವ್ಯಕ್ತ. ಅದರಲ್ಲೂ ನಾಟಕಗಳಲ್ಲಿಯೇ ಒಂದು ವಿಶಿಷ್ಟ ಗುಂಪಿಗೆ ಸೇರುವ ಗೀತನಾಟಕಗಳಂತೂ ತೀರ ಇತ್ತೀಚಿನವು. ನಮ್ಮ ನಾಟಕಗಳಲ್ಲಿ ಹಿಂದೆ ಸಂಗೀತ ಇತ್ತು. ಆದರೂ ಗೀತನಾಟಕಗಳು ಎಂಬ ಈ ಪ್ರಕಾರ ಪಾಶ್ಚಾತ್ಯರ ಪ್ರಭಾವದಿಂದ ಬೆಳೆದು ಬಂದದ್ದು. ನಮ್ಮ ಗೀತ ನಾಟಕಗಳಿಗೆ ಒಂದು ರಿತಿಯ ಪ್ರೇರಣೆಯನ್ನು ಒದಗಿಸಿದ್ದು ಅಪೆರಾಗಳು.

ಅಪೆರಾ ಸಂಗೀತಕ್ಕೆ ಒಂದು ಘನತೆಯನ್ನು ಗುರಿಯನ್ನು ಒದಗಿಸಿದಂತಹ ಸಾಹಿತ್ಯಪ್ರಕಾರ ಮೊಟ್ಟಮೊದಲ ಬಾರಿಗೆ ಇದರ ರೂಪ ಸಂಸ್ಕಾರ ಪಡೆದದ್ದು ಮತ್ತು ಇದಕ್ಕೆ ಮಾನ್ಯತೆ ದೊರಕಿದ್ದು 'ಇಟಲಿ'ಯಲ್ಲಿ ಇಟಾಲಿಯನ್ ಭಾಷೆಯಲ್ಲಿ ಅಪೆರಾ ಎಂದರೆ 'ಕೆಲಸ' ಎಂದರ್ಥ. ವಿಶಿಷ್ಟವಾದ ಅರ್ಥದಲ್ಲಿ ಸಂಗೀತದ ಕೆಲಸ, ಅಪೆರಾ ಎನ್ನುವ ಹೆಸರು ಬರುವುದಕ್ಕೆ ಮೊದಲು ಈ ಪ್ರಕಾರಕ್ಕೆ ಸಂಗೀತನಾಟಕ, ಸಂಗೀತಕ್ಕಾಗಿ ನಾಟಕ, ಫೆವೊಲಾ, ಫೆಬಲ್, ಮೆಲೋಡ್ರಾಮಾ ಮುಂತಾದ ಹೆಸರುಗಳು ಇದ್ದವು. ಕ್ರಿ.ಶ. ೧೬೪೪ರ ಹೊತ್ತಿಗೆ ಅಪೆರಾ ಎನ್ನುವ ಹೆಸರನ್ನು ಜನಸಾಮಾನ್ಯರು ಈ ರೀತಿಯ ಸಂಗೀತ ನಾಟಕಗಳಿಗೆ ಬಳಸುತ್ತಿದ್ದರೂ ೧೮೦೦ರ ತನಕ ಯಾವ ಅಪೆರಾ ಕೃತಿಯೂ 'ಅಪೆರಾ' ಎನ್ನುವ ಹೆಸರಿನಿಂದ ಪ್ರಕಟಗೊಳ್ಳಲಿಲ್ಲ. 'ಎಡ್ವರ್ಡ್-ಜೆ-ಡೆಂಟರು ತಮ್ಮ 'ಅಪೆರಾ' ಎನ್ನುವ ಪುಸ್ತಕದಲ್ಲಿ ಈಪದದ ಬಳಕೆಯ ಬಗೆಗೆ ಪ್ರಸ್ತಾಪಿಸುತ್ತಾ ೧೮೦೦ಕ್ಕಿಂತ ಮುಂಚೆ ಇಟಾಲಿಯನ್ ನಾಟಕಗಳ ಈ ಪ್ರಕಾರಕ್ಕೆ ಅಪೆರಾ ಹೆಸರು ಇತ್ತೆಂಬುದು ಅನುಮಾನ. ಆದರೆ ೧೬೫೬ರ ಹೊತ್ತಿಗೆ ಇಂಗ್ಲೇಂಡಿನಲ್ಲಿ ಸಂಗೀತ

ನಾಟಕಗಳನ್ನು ಈ ಹೆಸರಿನಿಂದ ಕರೆಯುತ್ತಿದ್ದರು ಎಂಬುದರಲ್ಲಿ ನನಗೆ ಅನುಮಾನವಿಲ್ಲ ಎಂದಿದ್ದಾರೆ.[7]

ಅಪೆರಾ ಉಳಿದ ನಾಟಕಗಳಿಗಿಂತ ಭಿನ್ನವಾದುದು. ಉಳಿದ ನಾಟಕಗಳಂತೆ ಇದು ನಮ್ಮ ಯಥಾವತ್ತಾದ ಜೀವನ ಚಿತ್ರಗಳನ್ನು, ಘಟನೆಗಳನ್ನು ಚಿತ್ರಿಸುವುದರಲ್ಲಿ ತೃಪ್ತಿಹೊಂದುವುದಿಲ್ಲ. ಅಲೌಕಿಕ ವಾತಾವರಣದ ಸೃಷ್ಠಿಗೋಸ್ಕರ ಅಪೆರಾಗಳಲ್ಲಿ ಪ್ರಸ್ತುತ ಜೀವನಕ್ಕೆ ಹೊರತಾದ ಚರಿತ್ರೆ ಮತ್ತು ಪುರಾಣಗಳಿಂದ ಕಥೆಗಳನ್ನು ಆರಿಸಿಕೊಳ್ಳುವುದೇ ಹೆಚ್ಚು. ಮಾನವ ಕಲ್ಪನಾ ಸಾಮರ್ಥ್ಯವನ್ನು ಉನ್ನತಗೊಳಿಸುವ ಉದ್ದೇಶದಿಂದಲೇ ಈ ಅಪೆರಾಗಳು ಸಂಗೀತ ಪ್ರಧಾನವಾಗಿರುತ್ತವೆ. ಸಂಗೀತ ಮಾನವನ ಕಲ್ಪನೆಯ ಉತ್ಕೃಷ್ಟ ರೂಪ. ಅಪೆರಾಗಳಲ್ಲಿನ ಪಾತ್ರಗಳು ತಮ್ಮ ಚಲನೆಗಿಂತಲೂ ಸಂಭಾಷಣೆಗಿಂತಲೂ ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಬೇಕಾಗಿರುವುದರಿಂದ ಪ್ರೇಕ್ಷನನ್ನು ಆತನ ದೈನಂದಿನ ಪ್ರಪಂಚದಿಂದ ಬೇರೊಂದು ಕಲ್ಪನಾ ಜಗತ್ತಿಗೆ ಕರೆದೊಯ್ಯಲು ಸಾಧ್ಯವಾಗುತ್ತದೆ. ಅಪೆರಾಗಳ ಮುಖ್ಯ ಉದ್ದೇಶವೇ ಅಲೌಕಿಕ ಸೃಷ್ಠಿ. ಆದುದರಿಂದಲೇ ಅವು ವಾಸ್ತವಿಕವಾಗಲು ಸಾಧ್ಯವಿಲ್ಲ. ಅಪೆರಾ ಎಂದರೆ ನಾಟಕಾಂಶ ಮತ್ತು ಸಂಗೀತಾಂಶಗಳ ಸಮ್ಮೇಳನ ಎಂದು ಸಾಮಾನ್ಯವಾಗಿ ಅಂದುಕೊಂಡರೂ, ಅನೇಕ ವೇಳೆ ಹೆಚ್ಚಿನ ಅಪೆರಾಗಳಲ್ಲಿ ಸಾಹಿತ್ಯ ಭಾಗ ಯಾವ ಮಹತ್ವವನ್ನೂ ಪಡೆಯದೆ ಸಂಗೀತವೊಂದೇ ವಿಜೃಂಭಿಸುತ್ತದೆ.

ಅಪೆರಾ ಎನ್ನುವುದು ಒಂದು ಸಂಯೋಜಕ ಕಲೆ ಅಪೆರಾ ರಂಗ ಸ್ಥಳದಲ್ಲಿ ಸಾರ್ಥಕಗೊಳ್ಳಬೇಕಾದರೆ ಒಂದು ಹೊಂದಾಣಿಕೆ ಅನಿವಾರ್ಯ ಸಂಗೀತ, ಸಾಹಿತ್ಯ, ರಂಗಸಜ್ಜಿಕೆ, ನಟನಟಿಯರ ಅಭಿನಯ ಇತ್ಯಾದಿ, ಪ್ರತಿಯೊಂದು ಒಂದು ಮತ್ತೊಂದಕ್ಕೆ ಪೂರಕವಾಗಿರಬೇಕು. ಹಾಗಲ್ಲದೆ ಸಾಹಿತ್ಯ, ಸಂಗೀತಗಳ ಸಾಮರಸ್ಯ ಏರುಪೇರಾದಾಗ ಒಂದು ಮತ್ತೊಂದನ್ನು ಹಿಂದಕ್ಕೆ ತಳ್ಳಲು ಯತ್ನಿಸಿದಾಗ ಒಟ್ಟು ಸೌಂದರ್ಯಕ್ಕೆ ಭಂಗವೊದಗುತ್ತದೆ.

ಭಾರತೀಯ ಭಾಷೆಗಳಲ್ಲಿ ಗೀತ ರೂಪಕಗಳು

ಇಲ್ಲಿಯವರೆಗೆ ಪಾಶ್ಚಾತ್ಯ ಭಾಷೆಗಳಲ್ಲಿ ಅಪೆರಾದ ಉಗಮ ಹಾಗೂ ವಿಕಾಸವನ್ನು ಗಮನಿಸಲಾಯಿತು. ಭಾರತೀಯ ಸಾಹಿತ್ಯದಲ್ಲಿ ಅಪೆರಾ ಎನ್ನುವ ಹೆಸರು ಇಲ್ಲದಿದ್ದರೂ ಅದನ್ನು ಸ್ಥೂಲವಾಗಿ ಹೋಲುವಂತಹ ನಾಟಕ ಪ್ರಕಾರ ನಮ್ಮಲ್ಲಿ ಇಲ್ಲದೆ ಇಲ್ಲ. ಎಷ್ಟೋ ವೇಳೆ ಪಾಶ್ಚಾತ್ಯ ಅಪೆರಾಗಳಿಗೆ ಅತ್ಯಂತ ಹತ್ತಿರದಿಂದ ಹೋಲುವಂತಹ

ಅಥವಾ ಅಪೆರಾಗಳ ಅನುಕರಣೆಯಿಂದ ರಚಿಸಲ್ಪಟ್ಟ ನಾಟಕಗಳು ಭಾರತೀಯ ಭಾಷೆಗಳಲ್ಲಿ ಸಿಗುತ್ತವೆ. ಭಾರತೀಯ ಭಾಷೆಗಳಲ್ಲಿ ಕೆಲವಕ್ಕೆ ಮೂಲವಾಗಿಯೂ ಮತ್ತೆ ಕೆಲವಕ್ಕೆ ಸ್ಫೂರ್ತಿದಾಯಿಯೂ ಆಗಿರುವ ಅತ್ಯಂತ ಪ್ರಾಚೀನವಾದ ಸಂಸ್ಕೃತ ಭಾಷೆಯಲ್ಲಿ ಅಪೆರಾಗಳಿಗೆ ಸ್ಥೂಲವಾಗಿ ಹೋಲಿಸಬಹುದಾದ ನಾಟಕ ಪ್ರಕಾರ ಬೆಳೆದು ಬಂದಿದೆ. ಜೊತೆಗೆ ಆಧುನಿಕ ಭಾರತದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೆ ಮೊದಲು ಒಳಗಾಗಿ, ಆ ಮೂಲಕ ಹೊಸ ಹೊಸ ಸಾಹಿತ್ಯ ಪ್ರಕಾರಗಳನ್ನು ಸೃಷ್ಟಿಸಿದ ಬಂಗಾಳಿ ಮತ್ತು ಹಿಂದಿ ಭಾಷೆಗಳಲ್ಲಿ ಈ ನಾಟಕ ಪ್ರಕಾರ ಕಾಣುತ್ತದೆ.[೨] ಈ ನಾಟಕಗಳನ್ನು ಗೀತರೂಪಕಗಳು ಅಥವಾ ಗೀತ ನಾಟಕಗಳು ಎಂದು ಕರೆಯಬಹುದು. ಗೀತನಾಟಕಗಳು ಅಥವಾ ಗೀತರೂಪಕಗಳು ಎಂಬ ಪದಗಳು 'ಅಪೆರಾ' ಎಂಬುದರ ನೇರ ಅನುವಾದವಲ್ಲ. ಅಪೆರಾಗಳನ್ನು ಬಹಳಷ್ಟು ಹೋಲಬಲ್ಲ ನಾಟಕ ಪ್ರಕಾರ ಎಂದಷ್ಟೇ ಅದರ ಅರ್ಥ. ಸಂಸ್ಕೃತ ಸಾಹಿತ್ಯದ ಇತಿಹಾಸ ಕ್ರಿಸ್ತಪೂರ್ವ ೫೦೦೦ದಷ್ಟು ಪ್ರಾಚೀನವಾದರೂ ಸಾಹಿತ್ಯದ ಒಂದು ಪ್ರಮುಖ ಪ್ರಕಾರ ನಾಟಕದ ಇತಿಹಾಸ ಕ್ರಿ.ಶ. ದಿಂದ ಈಚೆಗೆ ಮಾತ್ರ ಗೋಚರವಾಗುತ್ತದೆ.

ನಾಟಕ ಎಂಬುದೊಂದು ಸಂಕೀರ್ಣ ಕಲೆ ಇದರಲ್ಲಿ ನೃತ್ಯಕಲೆ ಸಂಗೀತಗಳು ಮಿಲನಗೊಂಡಿವೆ. ನಾಟಕವು ಪ್ರಯೋಗದಲ್ಲಿ ಸಫಲವಾಗಬೇಕಾದರೆ ಚಿತ್ರಕಲೆ, ಶಿಲ್ಪಕಲೆ, ವರ್ಣಕಲೆ, ಅಭಿನಯ, ರಂಗಸಜ್ಜಿಕೆ, ಮುಂತಾದ ಎಲ್ಲಾ ಕಲೆಗಳ ಸಾಮರಸ್ಯ ಅತ್ಯಗತ್ಯ. ಆದುದರಿಂದಲೇ "ಅತ್ರಲೋಕ ಚರಿತಂ ನಾನಾರಸಂ ದೃಶ್ಯತೇ ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್" ಎಂಬ ಕಾಳಿದಾಸನ ಅರ್ಥಪೂರ್ಣವಾದ ಸೂತ್ರವಾಗಿದೆ.

ಕನ್ನಡದಲ್ಲಿ ಗೀತನಾಟಕಗಳು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊಟ್ಟಮೊದಲು ಅಧಿಕೃತವಾಗಿ ನಾಟಕವೆಂದು ೧೭ನೇ ಶತಮಾನದಲ್ಲಿ ಬೆಳಕಿಗೆ ಬಂದಂತಹ ಸಾಹಿತ್ಯ ಕೃತಿಯೆಂದರೆ 'ಸಿಂಗರಾರ್ಯನ ಮಿತ್ರವಿಂದ ಗೋವಿಂದ' (ಶ್ರೀಹರ್ಷನ ರತ್ನಾವಳಿಯ ಒಂದು ಅನುವಾದ) ತದ ನಂತರ ಇದೇ ಕಾಲದಲ್ಲಿ ಪ್ರಕಟಗೊಂಡ ಕೃತಿಯೆಂದರೆ ಚಿಕ್ಕದೇವರಾಜನ ಗೀತ ಗೋಪಾಲ, ಜಯದೇವ ಕವಿಯ ಗೀತಗೋವಿಂದದ ಮಾದರಿಯಲ್ಲಿ ರಚನೆಗೊಂಡ ಮಧುರಭಕ್ತಿಯ ಸಂಗೀತ ಕೃತಿ ಇದು. ಪು.ತಿ.ನ ಅವರು "ನಾನು ಶ್ರೀ ವರದಾಚಾರ್ ಅವರ ನಾಟಕಗಳನ್ನು ಅರಮನೆ ಸಂಗೀತಗಾರರ ಸಂಗೀತ ನಾಟಕಗಳನ್ನು, ತಮಿಳಿನ

'ವಲ್ಲಿಪರಿಣಯ' ಎಂಬ ಪೂರ್ಣ ಸಂಗೀತ ನಾಟಕವನ್ನು ಇಂಗ್ಲೀಷಿನ Spring time in Parise ಎಂಬ ಮಾರೀಷ್‌ಷವಲಿಯರಿನ ಅಪೆರಾವನ್ನು ನೋಡದೆ ಇದ್ದಿದ್ದರೆ ಗೀತನಾಟಕಗಳನ್ನು ರಚಿಸುವ ಸಾಧ್ಯತೆ ಬಹಳ ಮಟ್ಟಿಗೆ ಇರುತ್ತಿರಲಿಲ್ಲವೆಂದು ಹೇಳಿದ್ದಾರೆ.[೩]

ಇದರಿಂದ ಕನ್ನಡ ಗೀತರೂಪಕಗಳಿಗೆ ಪರಂಪರೆ ಯಕ್ಷಗಾನ, ಬಯಲಾಟಗಳಲ್ಲಿ ದೊರೆಯುವಂತೆಯೇ ಅವುಗಳಿಗೆ ಪಾಶ್ಚಾತ್ಯ ಅಪೆರಾಗಳಿಂದ ಸಾಕಷ್ಟು ಮಾರ್ಗದರ್ಶನವೂ ದೊರೆತಿದೆ ಎಂಬುದು ಸ್ಪಷ್ಟವಾಗುತ್ತದೆ. ಗಿತರೂಪಕ ಎನ್ನುವ ಪದವನ್ನು ಬಹಳ ಮಟ್ಟಿಗೆ ಪಾಶ್ಚಾತ್ಯರ ಅಪೆರಾಕ್ಕೆ ಸಂವಾದಿ ಪದವನ್ನಾಗಿ ಬಳಸುತ್ತಿದ್ದರೂ. ಈ ರಿತಿಯ ಕಲಾಪ್ರಕಾರ ಯಕ್ಷಗಾನ ರೂಪಕಗಳಿಗೂ, ಅಪೆರಾಗಳಿಗೂ ಋಣಿಯಾಗಿದ್ದರೂ ಅವೆರಡರಿಂದಲೂ ವಿಶಿಷ್ಟವಾದ ಕಲಾ ಪ್ರಕಾರತೆ ಕಂಡು ಬರುತ್ತದೆ.

ಪು.ತಿ.ನ. ಅವರು ಮುಖ್ಯವಾಗಿ ಸಾಂಪ್ರದಾಯಿಕ ಕವಿ. ಇಂಗ್ಲೀಷ್ ಸಾಹಿತ್ಯದ ಪರಿಚಯ ಅವರಿಗಿದ್ದರೂ ಅದರಿಂದ ಅವರು ಅಷ್ಟಾಗಿ ಪ್ರಭಾವಿತರಾಗಿಲ್ಲ. ಪರಂಪರಾಗತವಾದರೂ, ನವನವೀನವಾದ ಭಾವನೆಗಳನ್ನು ಉದ್ದೀಪಿಸುವ ಭಾರತೀಯ ಕಾವ್ಯಗಳೇ ಅವರ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿವೆ. ಆದುದರಿಂದಲೇ ಅವರ ಒಟ್ಟು ಕೃತಿಗಳನ್ನು ಗಮನಿಸಿದಾಗ ಸಾಮಾಜಿಕ ಸಮಸ್ಯೆಗಳಿಗಿಂತ ಪೌರಾಣಿಕ ಘಟನೆಗಳೇ ಅವರ ಗಮನವನ್ನು ಸೆಳೆದಿರುವುದು ಗೋಚರವಾಗುತ್ತದೆ. ಅಷ್ಟೇ ಅಲ್ಲ ಅಂದಿನ ಸಾಮಾಜಿಕ ಪ್ರಜ್ಞೆಯ ಚಿಂತನೆಗಳಿಗೆ ಪೌರಾಣಿಕ ಘಟನೆಗಳಲ್ಲಿ ಉತ್ತರವನ್ನು ಹುಡುಕುವ ತಮ್ಮ ಅನುಭವದ ಹಿನ್ನೆಲೆಯಲ್ಲಿ ಆ ಘಟನೆಗಳಿಗೆ ಹೊಸ ಬಣ್ಣ ಹೊಸ ರೂಪ ಕೊಡುವಂತಹ ಚಿತ್ರಣವನ್ನು ಇವರ ಕೃತಿಗಳಲ್ಲಿ ಕಾಣಬಹುದಾಗಿದೆ.

ಪು.ತಿ.ನ. ಅವರ ಕೃತಿಗಳ ಪೈಕಿ 'ಹಂಸದಮಯಂತಿ ಮತ್ತು ಇತರ ರೂಪಕಗಳು' ಎಂಬುದಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ೧೯೬೬ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳಿಸಿದ ಈ ಗ್ರಂಥದಲ್ಲಿ ಹಂಸದಮಯಂತಿ, ಹರಿಣಾಭಿಸರಣ, ವಸಂತಚಂದನ, ವರ್ಷ, ವರ್ಷ, ಶರದ್ವಿಲಾಸ, ದೀಪಲಕ್ಷ್ಮಿ, ರಾಮೋದಯ ಮತ್ತು ಸೀತಾಪರಿಣಯಂ ಎಂಬ ಎಂಟು ರೂಪಕಗಳಿವೆ. ಈ ರೂಪಕಗಳಿಗೆ ಗೀತರೂಪಕದ ಜೀವಾಳವಾದ ಸ್ವರ ರಚನೆಯ ಸೌಂದರ್ಯದ ಹುರುಳನ್ನು ಜೋಡಿಸಲಾಗಿದೆ.

ಹಾಗಾಗಿ ಪು.ತಿ.ನ. ಅವರು ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಕಥಾವಸ್ತುಗಳನ್ನು ಆಯ್ದುಕೊಂಡರೂ, ಇವರ ಕೃತಿಗಳಲ್ಲಿ ಹೊಸತನವಿದೆ.

ಹಂಸದಮಯಂತಿ, ಸತ್ಯಾಯನ ಹರಿಶ್ಚಂದ್ರ ನಾಟಕಗಳು ಮಹಾಭಾರತಕ್ಕೂ, ಹರಿಣಾಭಿಸರಣ, ಅಹಲ್ಯೆ, ರಾಮೋದಯಂ ಮತ್ತು ಸೀತಾಪರಿಣಯಂ ನಾಟಕಗಳು ರಾಮಾಯಣಕ್ಕೆ ಸಂಬಂಧಪಟ್ಟಿವೆ. ವಸಂತ ಚಂದನ, ವರ್ಷ, ವರ್ಷ, ಶರದ್ವಿಲಾಸ, ಸಂಪೂರ್ಣ ಸ್ವತಂತ್ರ್ಯಕಲ್ಪನೆಗಳು, ದೀಪಲಕ್ಷ್ಮಿ ಕಿಂಚಿತ್ ಪೌರಾಣಿಕ ಅಂಶವನ್ನು ಒಳಗೊಂಡ ಸಮ್ಮಿಶ್ರ ಸ್ವರೂಪದ್ದು, ಹಾಗಾಗಿ ಈ ಲೇಖನದಲ್ಲಿ ಹಂಸದಮಯಂತಿ, ಹರಿಣಾಭಿಸರಣ ಮತ್ತು ಅಹಲ್ಯೆ ಎಂಬ ಮೂರು ಗೀತರೂಪಕಗಳಲ್ಲಿ ಮುಖ್ಯವಾಗಿ ಸಾಮಾಜಿಕ ಅಂಶಗಳನ್ನು ಹುಡುಕುವುದಾದರೆ,

ಹಂಸದಮಯಂತಿ

ಈ ಕಥೆಯು ನಳ ಚರಿತ್ರೆಗೆ ಸಂಬಂಧಿಸಿದ್ದು, ನಳಚರಿತ್ರೆ ವೇದಗಳಷ್ಟು ಪ್ರಾಚೀನವಾದದು ಮತ್ತು ವಾಜಸನೇಯ ಸಂಹಿತೆಯಲ್ಲಿ ಮಹಾಭಾರತ ಅರಣ್ಯ ಪರ್ವದಲ್ಲಿ ಕಥಾಸರಿತ್ಸಾಗರದಲ್ಲಿ ಷಟ್ಚಕ್ರವರ್ತಿಗಳಲ್ಲಿ ಒಬ್ಬನಾದ ನಳಮಹಾರಾಜನ ಚರಿತ್ರೆಯಿದೆ. ಈ ಗೀತ ನಾಟಕವು ಭಾರತದ ಅನೇಕ ಭಾಷೆಗಳಲ್ಲಿ ಬಹು ಮುಖ್ಯವಾದಂತಹ ಸ್ಥಳ ಪಡೆದಿದೆ ಎನ್ನಬಹುದು. ಮಹಾಭಾರತದಲ್ಲಿ ಬರುವ ನಲೋಪಖ್ಯಾನದ ವಿವರಣೆಯನ್ನು ಹೀಗೆ ಸಂಗ್ರಹಿಸಬಹುದು. ದ್ವೈತವನ ಪಾಂಡವರು ಅರ್ಜುನನು ಅಸ್ತ್ರಸಂಪಾದನೆಗೆ ಇಂದ್ರಕಾಲ ಪರ್ವತಕ್ಕೆ ಹೋದ ಮೇಲೆ ಚಿಂತಾಕ್ರಾಂತರಾಗಿ ಕುಳಿತಿದ್ದಾರೆ. ಭೀಮಸೇನ ಧರ್ಮರಾಜನಿಗೆ ಕ್ಷತ್ರಿಯಧರ್ಮ ಹೇಡಿಗಳ ಹಾಗೆ ಸುಮ್ಮನೆ ಕೂಡುವುದಲ್ಲ. ಯುದ್ಧವನ್ನು ಮಾಡಿ ಕೌರವರನ್ನು ಹನ್ನೆರಡು ವರುಷಗಳ ವನವಾಸ ಮುಗಿಸುವುದಕ್ಕಿಂತ ಮುಂಚೆಯೇ ಕೊಂದು ಬಿಡೋಣ. ಪಾಪದ ಪ್ರಾಯಶ್ಚಿತ್ತಕ್ಕಾಗಿ ಯಜ್ಞಯಾಗಾದಿಗಳನ್ನು ಮಾಡೋಣ. ವನವಾಸವು ಖಂಡಿತವಾಗಿಯೂ ಕ್ಷತ್ರಿಯನಿಗೆ ಧರ್ಮವಲ್ಲ? ಎಂದನು. ಅದಕ್ಕೆ ಧರ್ಮ ರಾಜನು ಒಪ್ಪದೆ 'ಹದಿಮೂರು ವರ್ಷ ಕಳೆಯಲಿ ಭೀಮ ಆಮೇಲೆ ನೀನು, ಅರ್ಜುನನು ಸೇರಿ ಧುರ್ಯೋಧನನ್ನು ಕೊನೆಗಾಣಿಸುವಿರಂತೆ ಈಗ ಅದಕ್ಕೆ ಕಾಲವಲ್ಲ. ನಾನು ಸತ್ಯವನ್ನು ಮೀರಲಾರೆ ಎಂದನು ಹೀಗೆ ಅವರು ಮಾತನಾಡುತ್ತಿರುವಾಗ ಅಲ್ಲಿಗೆ ಬೃಹದಶ್ಯನೆಂಬ ಋಷಿ ಬರುತ್ತಾರೆ. ಧರ್ಮರಾಜ ಅವರನ್ನು ಸತ್ಕರಿಸಿ ಹಲವು ವಿಚಾರವಾಗಿ ಮಾತನಾಡುತ್ತ.

"ನನ್ನ ದೇಶ ಕೋಶಗಳೆಲ್ಲಾ ಹೋದವು: ಪಗಡೆಯಾಟದಲ್ಲಿ ನಿಪುಣರಾದವರು ಮೋಸ ಮಾಡಿ ಅವುಗಳನ್ನು ಕಿತ್ತುಕೊಂಡರು, ಪ್ರಾಣಕ್ಕಿಂತಲೂ ಹೆಚ್ಚಿನ ನನ್ನ

ಹೆಂಡತಿಯನ್ನು ಸಭೆಗೆ ಎಳೆತಂದರು, ನನ್ನಂಥ ಹತಭಾಗ್ಯನಾದ ರಾಜನು ಮತ್ತಾರಾದರೂ ಪ್ರಪಂಚದಲ್ಲಿ ಉಂಟೇ? ನನ್ನ ಕಷ್ಟ ಯಾರಿಗೂ ಬರಲಿಲ್ಲ ಎಂದು ವ್ಯಥೆಪಟ್ಟಾಗ, ಅದಕ್ಕೆ ಬೃಹದಶ್ಯ ಹಿಂದೆ ನಳನೆಂಬ ರಾಜನಿದ್ದ. ಅವನು ನಿನಗಿಂತಲೂ ಕಷ್ಟಪಟ್ಟ, ಅವನನ್ನು ಪುಷ್ಕರನೆಂಬವ ಮೋಸಮಾಡಿದ ಜೂಜಿನಲ್ಲಿ ಗೆಲ್ಲಲಾಗದೆ ಅವನು ಹೆಂಡತಿಯೊಡನೆ ಕಾಡಿಗೆ ಹೋದ". ನಿನ್ನ ಜೊತೆಯಲ್ಲಿ ದೇವತೆಗಳಂತೆ ಶೋಭಿಸುತ್ತಿರುವ ವೀರ ಸಹೋದರರಾದರೂ ಇದ್ದಾರೆ. ಅವನಿಗೆ ಯಾರು ಇರಲಿಲ್ಲ. ಆದ್ದರಿಂದ ನೀನು ಶೋಕಿಸಬೇಡ ಎಂದು ಆ ವೃತ್ತವನ್ನು ವಿವರವಾಗಿ ಕಥೆಯ ರೂಪದಲ್ಲಿ ಸಾದರಪಡಿಸಿದನು. ನಿಷದ ದೇಶದಲ್ಲಿ ನಳನೆಂಬ ರಾಜನಿದ್ದನು. ಅವನು ಬಲಿಶಾಲಿಯೂ ಗುಣವಂತನೂ, ರುಪವಂತನೂ ಆಗಿ ರಾಜರಲ್ಲೆಲಾ ಅಗ್ರಗಣ್ಯನಾಗಿದ್ದವನು. ಹಾಗೆಯೇ ವಿದರ್ಭದೇಶದಲ್ಲಿ ಭಿಮನೆಂಬ ರಾಜನಿದ್ದ, ಅವನಿಗೆ ದಮಯಂತಿಯೆಂಬ ಮಗಳೂ ದಮ, ದಮನ ಎಂಬ ಗಂಡು ಮಕ್ಕಳು ಇದ್ದರು. ದಮಯಂತಿಯು ರೂಪ ಲಾವಣ್ಯ ತೇಜಸ್ಸು ಸೌಭಾಗ್ಯಾದಿ ಗುಣಗಳಿಂದ ತುಂಬ ಪ್ರಸಿದ್ಧಳಾಗಿ ದೇವತೆಗಳಲ್ಲಾಗಲಿ, ಮನುಷ್ಯರಲ್ಲಾಗಲಿ ಇಂಥ ಸುಂದರಿಯನ್ನು ಹಿಂದೆ ಯಾರು ಕೇಳಿರಲಿಲ್ಲ. ನೋಡಿರಲಿಲ್ಲ. ಎನಿಸಿಕೊಂಡವಳು, ಅವಳ ಮುಂದೆ ನಳನನ್ನು, ನಳನ ಮುಂದೆ ದಮಯಂತಿಯನ್ನು ಎಲ್ಲರೂ ಮೇಲಿಂದ ಮೇಲೆ ಪ್ರಶಂಸೆ ಮಾಡುತ್ತಿದ್ದರು. ಆದುದರಿಂದ ಅವರು ಒಬ್ಬರನೊಬ್ಬರನ್ನು ನೋಡದೆಯಿದ್ದರೂ ಇಬ್ಬರಲ್ಲಿಯೂ ಪರಸ್ಪರವಾಗಿ ಪ್ರೇಮ ಹುಟ್ಟಿ ಬೆಳೆಯಿತು.

ಹೀಗಿರಲು ಒಂದು ದಿನ ದಮಯಂತಿಯ ಯೋಚನೆಯಲ್ಲಿಯೇ ಅಂತಃಪುರದ ಹತ್ತಿರದಲ್ಲಿದ್ದ ಉದ್ಯಾನದಲ್ಲಿ ತಿರುಗಾಡುತ್ತಿದ್ದಾಗ ಅಲ್ಲಿ ಹೊಂಬಣ್ಣದ ಹಂಸಗಳನ್ನು ಕಂಡು ಅವುಗಳಲ್ಲಿ ಒಂದನ್ನು ಹಿಡಿದುಕೊಂಡ ತಕ್ಷಣ ಅದು ಮಹರಾಜ ನನ್ನನ್ನು ಕೊಲ್ಲಬೇಡ ನಾನು ನಿನಗೆ ಉಪಕಾರ ಮಾಡುತ್ತೇನೆ. ದಮಯಂತಿಯ ಹತ್ತಿರಕ್ಕೆ ಹೋಗಿ ನಿನಗೆ ಸಮಾನರಾದವರು ಮತ್ತೊಬ್ಬರಿಲ್ಲವಂತೆ ಎಂದು ಅವಳ ಹತ್ತಿರಕ್ಕೆ ಹೋಗಿ ನಿನ್ನನ್ನು ವರ್ಣಿಸುತ್ತೇನೆ ಎಂದಿತು. ನಳ ಅದನ್ನು ಬಿಟ್ಟು ಬಿಟ್ಟ, ಅನಂತರ ಆ ಹಂಸಗಳು ವಿಧರ್ಭ ದೇಶಕ್ಕೆ ಹೋದವು. ಅಂದರೆ ಸಮಾಜದಲ್ಲಿ ಯಾವ ಕಾಲದಲ್ಲಿಯೇ ಅಂದರೆ ಕಲಿಯುಗವಾಗಲಿ, ದ್ವಾಪರಯುಗದಲ್ಲಾಗಲೀ ಅಲ್ಲಿ ಪ್ರೀತಿಸುವ ಹೃದಯಗಳ ಮಧ್ಯೆ ಯಾವುದಾದರೂ ಒಂದು ಪೂರಕ ಹೃದಯ ಸಹಾಯ ಮಾಡಬೇಕು. ಕಷ್ಟನಷ್ಟಗಳನ್ನು ಎಲ್ಲರು ಅನುಭವಿಸುವುದು ಈ ಸಮಾಜದಲ್ಲಿ ಸಹಜ. ಆ ಸಂದರ್ಭದಲ್ಲಿ ಇಂತಹ ಕಷ್ಟ

ನನಗೆ ಮಾತ್ರ ಬಂದಿರುವುದು ಎಂದು ನೊಂದುಕೊಳ್ಳುವುದು. ಇಂತಹ ಕಷ್ಟ ಜಗತ್ತಿನಲ್ಲಿ ಹಿಂದೆ ಯಾರಿಗೂ ಬಂದಿರುವುದಿಲ್ಲ ಎಂದು ಅಂದುಕೊಂಡು ಕೊರಗುವುದು. ಅಂತಹ ಕೊರಗುಗಳ ಕೊನೆಯಲ್ಲಿ ಮತ್ತು ನಮಗಿಂತ ಹಿಂದೆ ಇತರರೂ ನಮಗಿಂತ ಹೆಚ್ಚಿನ ಕಷ್ಟವನ್ನು ಪಟ್ಟಿರುತ್ತಾರೆ. ಎಂದರೆ ನಮಗಾಗ ಕೊಂಚ ಮನ ತಣಿಯುವುದು ಸಹಜವಾಗಿರುತ್ತದೆ. ಅದೇ ರೀತಿ ಧರ್ಮರಾಯನು ತನಗೆ ಬಂದ ಸಂಕಷ್ಟಗಳು ದೊಡ್ಡದೆಂದು ಕೊಂಡಿರುತ್ತಾನೆ. ಆ ಬೃಹದಶ್ವ ಋಷಿ ಬಂದು ನಿನ್ನ ಕಷ್ಟವೇ ದೊಡ್ಡದಲ್ಲ, ನಿನಗಿಂತ ಹೆಚ್ಚಿನ ಕಷ್ಟವನ್ನು ಹಿಂದೆ ಒಬ್ಬ ರಾಜ ಅನುಭವಿಸಿದ್ದಾನೆ ಎಂದು ನಳನ ವೃತ್ತಾಂತವನ್ನು ವಿವರಿಸುವುದು. ಧೃತಿಗೆಡುವುದನ್ನು ಬಿಟ್ಟು ಕಷ್ಟಗಳನ್ನು ಎದುರಿಸಿ ಸುಖವನ್ನು ಪಡೆಯುವ ನಿಟ್ಟಿನಲ್ಲಿ ಜಾಗೃತರಾಗಬೇಕೆ ವಿನಹ ಆ ಕಷ್ಟದ ಸರಮಾಲೆಯಲ್ಲೇ ಸಿಕ್ಕಿಕೊಂಡು ಜೀವನ ಅಂತ್ಯವನ್ನು ಕಾಣವುದು ಸರಿಯಲ್ಲ.

ಜೀವನದ ಸುದೀರ್ಘ ಯಾತ್ರೆಯಲ್ಲಿ ಎಲ್ಲಾ ಆಗು ಹೋಗುಗಳು ನಡೆಯುವುದು ನಿಜವೇ. ಆದರೆ ಅದನ್ನೇ ಜೀವನ ಅಂತ್ಯವೆಂದು ಭಾವಿಸುವುದು ತಪ್ಪು. ಪ್ರೇಮ ಕಾಮಗಳನ್ನು ಬಯಸುವ ಜೀವಕ್ಕೆ ಜಂಜಾಟಗಳನ್ನು ಅನುಭವಿಸುವುದು ಉಚಿತವೆಂದು ಹಾಗೆಯೇ ನಮ್ಮ ನಿರ್ಧಾರಗಳು ಕಾಲಮಾನಕ್ಕೆ ತಕ್ಕನಾಗಿ ಆರೋಗ್ಯ ಪೂರ್ಣವಾಗಿ ಇರಬೇಕು. ಎನ್ನುವ ಸಾರ್ವತ್ರಿಕ ಸತ್ಯವನ್ನು ಪು.ತಿ.ನ. ಅವರು ಸಮಾಜಕ್ಕೆ ಹಂಸದಮಯಂತಿ ಗೀತನಾಟಕದ ಮೂಲಕ ಸಂದೇಶ ನೀಡುತ್ತಿದ್ದಾರೆ. ಸೌಂದರ್ಯವಿದ್ದರೆ, ಹಣವಿದ್ದರೆ, ಅಂತಸ್ತು ಇದ್ದರೆ, ಅಧಿಕಾರವಿದ್ದರೆ ಕಷ್ಟಗಳು ಬರುವುದಿಲ್ಲ ಎಂದರ್ಥವಲ್ಲ, ಬಂದೋಗುವ ಕಷ್ಟಗಳನ್ನು ಹೇಗೆ ಪರಿಹಾರ ಮಾಡಿಕೊಳ್ಳುತ್ತೇವೆ ಎನ್ನುವುದು ಮುಖ್ಯ. ಹಿಂದಿನವರ ಕಷ್ಟಗಳನ್ನು ನೆನೆದು ಅವರು ಪರಿಹರಿಸಿಕೊಂಡ ಪರಿಯನ್ನು ತಿಳಿದುಕೊಂಡು, ಸುಸೂತ್ರವಾಗಿ ನಾವು ಕೂಡ ಸಂಕೋಲೆಯನ್ನು ಬಿಡಿಸಿಕೊಳ್ಳಬೇಕು. ಈ ಸಮಾಜದಲ್ಲಿ ಸಂತಸ ಇರುವಾಗೆಯೇ ಸಂಕಟವು ಇರುತ್ತದೆ. ಯಾವುದು ಅಂತ್ಯವಲ್ಲ. ಹಾಗೂ ಯಾವುದು ಶಾಶ್ವತವಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಪು.ತಿ.ನ. ಅವರು ಪುನರುಚ್ಚರಿಸಿದ್ದಾರೆ.

ಸಮಾಜದಲ್ಲಿ ನಮ್ಮ ಕೊಡುಗೆಯನ್ನು ಯಾವುದೇ ರೂಪದಲ್ಲಿ ಪಡೆಯಲು ಈ ಜಗತ್ತು ತವಕಿಸುತ್ತಿರುತ್ತಿದೆ. ಅದನ್ನು ಈ ಜನತೆಯು ಅರಿತುಕೊಳ್ಳಬೇಕು ಎನ್ನುವುದು ಮುಖ್ಯವಾದುದು. ಅದು ಕಷ್ಟ ಸುಃಖ ಎನ್ನುವುದು ನಂತರದ ಮಾತು.

ಹರಿಣಾಭಿಸರಣ

ಈ ಕಥಾವಸ್ತುವು 'ರಾಮಾಯಣದ ಅರಣ್ಯ ಕಾಂಡಕ್ಕೆ' ಸಂಬಂಧಪಟ್ಟಿದೆ. ರಾಮಾಯಣ, ಮಹಾಭಾರತಗಳು, ಕಾವ್ಯ ವಸ್ತುವನ್ನು ಹುಡುಕುವವರಿಗೆ ಅಕ್ಷಯ ಪಾತ್ರಗಳಂತೆ ಗೋಚರಿಸುತ್ತದೆ.ರಾವಣನ ಒತ್ತಾಯಕ್ಕೆ ಚಿನ್ನದ ಜಿಂಕೆಯ ರೂಪವನ್ನು ಮಾಯೆಯಿಂದ ಧರಿಸಿ ಪಂಚವಟಿಯಲ್ಲಿದ್ದ ಸೀತಾ ರಾಮಲಕ್ಷ್ಮಣರ ಕುಟೀರದ ಬಳಿಯಲ್ಲಿ ಸುಳಿದು ರಾಮನನ್ನು ಸೀತೆಯ ಆಸೆಯನ್ನು ಈಡೇರಿಸುವ ನೆಪದಿಂದ ದೂರ ದೂರ ಬಹುದೂರ ವನಾಂತರಕ್ಕೆ ಎಳೆದು ಮಾಯಾಮೃಗವೆಂಬ ವಿಷಯ ಸ್ಪಷ್ಟಪಡಿಸಿ ರಾಮಬಾಣದಿಂದ ಮರೀಚಮೃತನಾಗುತ್ತಾನೆ. ಸಾಯುವ ಮೊದಲು ಹಾ ಸೀತೆ ಹಾ ಲಕ್ಷ್ಮಣ ಎಂದು ರಾಮಧ್ವನಿಯಲ್ಲಿ ಕೂಗುತ್ತಾನೆ. ಸೀತೆ ಅದು ರಾಮನ ಧ್ವನಿಯೆಂದು ಬಗೆಯುತ್ತಾಳೆ. ಲಕ್ಷ್ಮಣ ರಾಮನ ಧ್ವನಿ ಇದಲ್ಲವೆಂದರೆ, ಸೀತೆ ಲಕ್ಷ್ಮಣನ ಮೇಲೆ ಸಲ್ಲದ ಆರೋಪ ಮಾಡುತ್ತಾಳೆ. ಅಣ್ಣನ ಸಾವಿನಿಂದ ವಿಧವೆಯಾದ ಅತ್ತಿಗೆಯನ್ನು ಬಯಸುವವಳೆನ್ನುತ್ತಾಳೆ. ಕರ್ಣ ಕಠೋರವಾದ ಮಾತುಗಳನ್ನು ಕೇಳಲಾರದೆ ಇಗೋ ಹೊರಟೆ ನಿಲ್ಲೆ ನಾನಿನ್ನ ಮುಂದೆ ಎಂದು ಅತ್ತಿಗೆಗೆ ನಮಿಸಿ ಗುಡಿಸಲಲ್ಲೇ ಇರು ಎಂದು ಹೇಳಿ ಚೀತ್ಕಾರದ ಧ್ವನಿ ಬಂದಂತಹ ಸ್ಥಳಕ್ಕೆ ಹೋಗುತ್ತಾನೆ. ಕಪಟವೇಷದ ಮುನಿಯಾಗಿ ರಾವಣ ಬಂದು ಆಕೆಯ ಅತಿಥಿಯಾಗುತ್ತಾನೆ. ಪ್ರೇಮ ಬಿಕ್ಷೆಯನ್ನು ಬೇಡುತ್ತಾನೆ. ಒಲ್ಲದ ಸೀತೆಯನ್ನು ಅಪಹರಿಸುತ್ತಾನೆ. ಆ ಸಂದರ್ಭದಲ್ಲೇ ಜಾಟಾಯು ಪಕ್ಷಿ ಬಂದು ರಕ್ಷಿಸಲು ಪ್ರಯತ್ನಿಸುತ್ತದೆ.

ಇಲ್ಲಿ ಪು.ತಿ.ನ. ಅವರು ಸಮಾಜದಲ್ಲಿ ನಡೆಯುವ ದುರ್ನಡೆತೆಗಳ ಬಗ್ಗೆ ಹಾಗೂ ಅನುಭವಗಳಿಗೆ ಬೆಲೆಯನ್ನು ನೀಡದ ಪಕ್ಷಗಳಲ್ಲಿ ಅವಾಂತರಗಳನ್ನು ಎದುರಿಸಬೇಕಾಗುತ್ತದೆ. ಅನುಮಾನಗಳು ಸಹಜವೇ ಆದರೂ ಆ ಮಾನ-ಅನುಮಾನಗಳನ್ನು ಸ್ವೀಕರಿಸುವ ಸ್ವೀಕೃತಿಯಲ್ಲಿರುತ್ತವೆ. ವಿನಾಕಾರಣ ಶಂಕಿಸಿ ಸಂಕಷ್ಟಗಳಿಗೆ ನಿಲುಕುವುದು ಸರಿಯಲ್ಲ ಎನ್ನುತ್ತಾರೆ.

ಅಹಲ್ಯೆ

ಅಹಲ್ಯೆ ಕನ್ನಡ ಸಾಹಿತ್ಯದ ಗೀತ ನಾಟಕ ರೂಪಗಳಲ್ಲಿ ಬಹು ಮುಖ್ಯ ಕೃತಿಯಾಗಿ ನಿಂತಿದೆ ಎಂದರೆ ತಪ್ಪಾಗಲಾರದು, ಧೀರ್ಘವಾದ ರಾಮಾಯಣ ಕಥಾಸಾಗರದಲ್ಲಿ ಸಣ್ಣ ಚಿತ್ರಕಥೆಯಾಗಿ ಬರುವ 'ಅಹಲ್ಯೆ' ಪಾತ್ರವನ್ನು ತೆಗೆದುಕೊಂಡು

ಅದಕ್ಕೆ ನವರಂಗುಗಳನ್ನು ನೀಡಿ ಜೀವದ ಭಾವದ ಬೆಲೆಕೊಟ್ಟಂತಹ ಪು.ತಿ.ನ. ಅವರ ಪ್ರಮುಖ ಪ್ರಬುದ್ಧತೆಗೆ ಒಂದು ಕೈಗನ್ನಡಿ ಎಂಬುದಾಗಿ ವಿವೇಚಿಸಬಹುದಾಗಿದೆ.

ಗೌತಮ ಸತಿಯಾದ ಅಹಲ್ಯೆ ಪತಿ ತಪೋನಿರತನಾಗಿರುವ ಸಮಯದಲ್ಲಿ ದೇವರಾಜನಾದ ಇಂದ್ರನಲ್ಲಿ ಕಾಮಪರವಶವಾಗುತ್ತಾಳೆ. ಆತ ಮಾರುವೇಷದಲ್ಲಿದ್ದುದ್ದನ್ನು ತಿಳಿದೂ ಆತನನ್ನು ಕೂಡುತ್ತಾಳೆ. ತನ್ನಾಸೆ ತೀರಿದೊಡನೆಯೇ ಮುನಿ ಬರುವ ಮುನ್ನವೇ ಹೊರಟು ಹೋಗೆಂದು ಇಂದ್ರನಿಗೆ ಎಚ್ಚರ ಕೊಡುತ್ತಾಳೆ. ಇಂದ್ರ ಅವಳ ಮಾತಿನಂತೆ ಹೊರಡಲು ಅನುವಾಗುತ್ತಿರುವಾಗಲೇ ಎದುರಿನಿಂದ ಗೌತಮನ ಆಗಮನವಾಗುತ್ತದೆ. ತಪೋನಿಧಿಯಾದ ಗೌತಮ ಇಂದ್ರನ ವಂಚಕ ತನವನ್ನು ತಿಳಿದು ರೋಷದಿಂದ ವಿಫಲನಾಗುವಂತೆ ಶಪಿಸುತ್ತಾನೆ. ಇತ್ತ ಅಹಲ್ಯೆಯತ್ತ ತಿರುಗಿ 'ಅದೃಶ್ಯಗಳಾಗಿದ್ದು, ಗಾಳಿಯನ್ನೇ ಆಹಾರವಾಗಿ ಪಡೆಯುತ್ತಾ ಸಾವಿರಾರು ವರ್ಷಗಳ ಕಾಲ ಜೀವಿಸಿದ್ದು, ರಾಮನ ದರ್ಶನದಿಂದ ಸ್ವ ಸ್ವರೂಪವನ್ನು ಪಡೆದು ಪರಿಶುದ್ಧಳಾಗಿ ಮತ್ತೆ ತನ್ನನ್ನು ಸೇರುವಂತೆ ತಿಳಿಸಿ ಹಿಮವತ್ಪರ್ವದಲ್ಲಿ ತಪ್ಪಸ್ಸು ಮಾಡುತ್ತಾ ನಿಲ್ಲುತ್ತಾನೆ. ರಾಮನು ವಿಶ್ವಮಿತ್ರನೊಂದಿಗೆ ಬಂದು ಅಹಲ್ಯೋದ್ಧಾರ ಮಾಡುತ್ತಾನೆ.

ಕೊನೆಗೆ ಇಂತೆಮ್ಮ ಬಾಳ ಬಿನ್ನಹವ ದೂರ ಮನ್ನಹಲಿ ಆಮೋದಕವನ್ನು ಬಾಳನಾಗಿಸಲಿ ಎಂದು ಗೌತಮ ಕಂಡ ಬಾಳಿನ ಆಮೋದಕವನ್ನು ಹೇಳುವುದರ ಜೊತೆಗೆ ಇಡೀ ನಾಟಕದ ಶ್ರೇಯ ಮತ್ತು ವಸ್ತುಗಳಿಗೆ 'ಮಾರ' ಕೇಂದ್ರ ವ್ಯಕ್ತಿಯಾಗಿರುವುದನ್ನು ಹೇಳಿ ಆತನನ್ನು ಪ್ರಾರ್ಥಿಸುವುದು ಅರ್ಥಪೂರ್ಣವಾಗಿದೆ ಮತ್ತು ನಾಟಕಕ್ಕೆ ಸಾಂಕೇತಿಕವಾಗಿ ನಿಂತು ಕವಿಯ ಧೋರಣೆಯನ್ನು ವ್ಯಕ್ತಪಡಿಸುತ್ತದೆ.

ಪು.ತಿ.ನ. ಅವರು ಪ್ರಕೃತಿ ಗೀತರೂಪಕದಲ್ಲಿ ಮೂರು ಅಂಕಗಳನ್ನು ತಂದಿದ್ದಾರೆ. ಪೂರ್ವಾಂಕ, ಮಧ್ಯಮಾಂಕ, ಉತ್ತರಾಂಕಗಳು, ಪೂರ್ವಾಂಕದಲ್ಲಿ ಎಂಟು ದೃಶ್ಯಗಳು, ಮಧ್ಯಮಾಂಕದಲ್ಲಿ ಮೂರು ದೃಶ್ಯಗಳು, ಉತ್ತರಾಂಕದಲ್ಲಿ ಐದು ದೃಶ್ಯಗಳನ್ನು ತಂದಿದ್ದಾರೆ. ಪೂರ್ವಾಂಕ ಬಯಕೆ ಹುಲುಬಯಕೆಯಾಗಿ ವಾತಾಪಿಯಾಗಿ ಬಾಳನ್ನೊಡದ ಕತೆಗೆ ಮೀಸಲಾಗಿದ್ದರೆ ಮಧ್ಯಮಾಂಕ, ಉತ್ತರಾಂಕಗಳಲ್ಲಿ ಸಮಯವರಿತು ಅರಳಿ ಬರುವ ಒಲವಿನ ಸಾಕ್ಷಾತ್ಕಾರ ಅದರಿಂದ ಒಡೆದು ಬಾಳು ಒಂದಾಗುವುದು ಇವುಗಳ ಚಿತ್ರಣವಿದೆ.

ಪೂರ್ವಾಂಕ ದೃಶ್ಯ ೧: ಈ ಅಂಕದ ಪ್ರಾರಂಭದಲ್ಲಿ ಇಂದ್ರನ ನಂದನಾವನದಲ್ಲಿ ಸುರರು ಮತ್ತು ಸುರಸುಂದರಿಯರು ನರ್ತಿಸುತ್ತಿರುತ್ತಾರೆ. ತಾವು ಯಾರಿಗೂ ತಲೆಬಾಗಬೇಕಿಲ್ಲ, ತಮ್ಮ ಸಂತೋಷವೇ ಅನಂತವಾದದ್ದೆಂದು ಸೊಕ್ಕಿನಿಂದ ಬೀಗುತ್ತಾರೆ.

ಈ ತಿರೆ ನಮಗಿರೆ ಶಕ್ಯನಾಳುತಿರೆ
ನಿರ್ಭಯರಾವೆಮಗೇತರ ಭೀತಿ
ಸತತ ಬನದಮ ನಮ್ಮ ರೀತಿ

ಇಂದ್ರನ ಭೋಗ ಜೀವನವನ್ನು ಇವರು ಈ ರೀತಿ ಪ್ರತಿನಿಧಿಸುತ್ತಾರೆ.

ಇಂದ್ರ ಅಹಲ್ಯೆಯರ ಸಂಗತಿ ಭಾರತೀಯ ಸಾಹಿತ್ಯಕ್ಕೆ ಚಿರಪರಿಚಿತವಾದುದ್ದು ಇಂದ್ರನಿಗೆ 'ಅಹಲ್ಯಾಜಾರ' ಎಂಬ ವಿಶೇಷಣ ವೈದಿಕವಾಙ್ಮಯದಲ್ಲಿಯೇ ದೊರೆತಿದೆ. ಇವರ ಕಥೆ ರಚಿತವಾದ ಆಕಾರವನ್ನು ತಾಳಿ ಮೊದಲು ಕಾಣಿಸಿಕೊಳ್ಳುವುದು ವಾಲ್ಮೀಕಿ ರಾಮಾಯಣದಲ್ಲಿ ಇಲ್ಲಿ ಅದು ಕೇವಲ ವ್ಯಾಮೋಹದ ವೃತ್ತಾಂತವಾಗಿ ಮುಗಿದಿಲ್ಲ. ಅಲ್ಲಿಗೆ ನಿಲ್ಲುವುದಾಗಿದ್ದರೆ ಅದಕ್ಕೆ ರಾಮಾಯಣದಲ್ಲಿ ಬಹುಶಃ ಸ್ಥಾನವೇ ಇರುತ್ತಿರಲಿಲ್ಲ. ಶ್ರೀರಾಮನ ದರ್ಶನದಿಂದ ಅಹಲ್ಯೆ ಪರಿಶುದ್ಧಳಾದಳೆಂಬುದೇ ವಾಲ್ಮೀಕಿಗೆ ಮುಖ್ಯವಾದ ವಿಷಯ ಅದರ ನಿರೂಪಣೆಗೆ ಪೂರ್ವಭಾವಿಯಾಗಿ ಈ ಕಾಮ ಕಥೆಯನ್ನು ಅದರ ಫಲವಾಗಿ ಒದಗಿದ ಶಾಪವಿಚಾರವನ್ನು ಅವನು ಹೇಳಬೇಕಾಯಿತು. ಅಹಲ್ಯೋಪಾಖ್ಯಾನವು ನಮ್ಮ ಪೌರಾಣಿಕ ಕಥೆಗಳ ರಾಶಿಯಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಮರೆಯಾಗದೆ ವಿಶೇಷ ಪ್ರಸಿದ್ಧಿ ಹೊಂದಿದೆ ಎನ್ನಬಹುದು. ವಾಲ್ಮೀಕಿ ಅಹಲ್ಯೆಯನ್ನು ದುಷ್ಟೇ ಎಂದು ಕರೆಯಬಹುದು. ಇಂದ್ರನನ್ನು 'ಸುರಪತಿ' ಎಂದು ಕರೆಯುವುದು ಅವನ ಧೋರಣೆಯನ್ನು ಸ್ಪಷ್ಟವಾಗಿ ಪ್ರಕಾಶಿಸುತ್ತದೆ. ಅಂತಹ ದುಷ್ಟೆಯಾದವಳಿಗೆ ರಾಮನಂತಹ ಪರಪುರುಷನ ಪಾದಸ್ಪರ್ಶ ಸಂಜೀವಿನಿಯಾಯಿತು. ಇಂದ್ರ ಸುರಪತಿಯಾದರೂ ವೈಭವಕ್ಕೆ ಅಧಿಪತಿಯಾದರೂ ತಾನು ಮಾಡಿದ ಅವ್ಯವಹಾರದಿಂದ ತನ್ನ ಪೂಜ್ಯ ಸ್ಥಾನಮಾನಗಳನ್ನು ಕಳೆದುಕೊಂಡು ಅಹಲ್ಯೆಯಾದರೂ ಋಷಿ ಪತ್ನಿಯೆಂದು ಪೂಜಿಸಲ್ಪಡುತ್ತಿದ್ದಳು ತನ್ನ ಆಮಿಷದ ಫಲವಾಗಿ ಅಶರೀರಯಾಗಿದ್ದು ಯಾತನೆಪಟ್ಟಳು ದೈಹಿಕ ಬಯಕೆಗಳಾಗಿ ತಪ್ಪಿಸ್ಥಳಾದ ಅವಳನ್ನು ಗೌತಮ ದೇಹರಹಿತಾಳುವಂತೆ ಶಪಿಸುವುದು ಅವಳ ಪಾತ್ರದ ಪೂರ್ಣತೆಗೆ ಸಿದ್ಧತೆ-ಕೊಟ್ಟಿತೆನ್ನಬಹುದು.

ವಾಲ್ಮೀಕಿ ಕವಿಯ ಸೃಷ್ಟಿಯಲ್ಲಿ ಇದ್ದ ಏಕಪಾತ್ರ ಮುಖ್ಯತೆ ಇಲ್ಲಿ ವಿಕಾಸ ಪಡೆದಿದೆ. ಪು.ತಿ.ನ ಅವರು ವಾಲ್ಮೀಕಿ ಕವಿ ಸೃಷ್ಟಿಸಿರುವ ಮೌಲ್ಯಗಳನ್ನು ತಮ್ಮ ಭಂಡಾರಕ್ಕೆ ತುಂಬಿಕೊಂಡು ಅದಕ್ಕೆ ಮತ್ತಷ್ಟು ಸಹಜತೆಗಳನ್ನು ನೀಡಿದ್ದಾರೆ. ವಾಲ್ಮೀಕಿ ಕಾವ್ಯದಲ್ಲಿ ದೊರೆಯುವ ಪರಿಮಿತವಾದ ಸೂಚನೆಗಳನ್ನು ಎಚ್ಚರಿಕೆಯಿಂದ ಅನುಸರಿಸಿದ್ದಾರೆ. ಅಲ್ಲಿ ನಿಗೂಢವಾಗಿದ್ದ ಭಾವಗಳು ಪರಿಸ್ಫುಟವಾಗುವಂತೆ ಉಜ್ವಲವಾಗುವಂತೆ ನೋಡಿಕೊಂಡಿದ್ದಾರೆ. ಇದನ್ನು ಅವರ ಗೀತರೂಪಕದ ಅಧ್ಯಯನದಲ್ಲಿ ಮನಗಾಣಬಹುದು.

ರೂಪಕ ನಾಂದಿಶ್ಲೋಕದಿಂದ ಆರಂಭವಾಗುತ್ತದೆ, ಸಂಸ್ಕೃತದ ಪ್ರಭಾವದಿಂದ ಪು.ತಿ.ನ. ಅವರು ಇದನ್ನು ತಮ್ಮ ರೂಪಕಗಳಲ್ಲಿ ಬೆಳೆಸಿಕೊಂಡರೂ ಅಲ್ಲಿಯ ಹೊಸತನವನ್ನು ತೋರಿಸುತ್ತಾರೆ. ನಾಂದಿಶ್ಲೋಕ ರೂಪಕದ ಇಡೀ ವಸ್ತುವನ್ನು ಸೂಚ್ಯವಾಗಿ ಹಾಗೂ ಸಾಂಕೇತಿಕವಾಗಿ ತರುತ್ತದೆ ಮತ್ತು ರೂಪಕದ ಕೇಂದ್ರ ವ್ಯಕ್ತಿಯ ಇರುವನ್ನು ಸ್ಪಷ್ಟಪಡಿಸುತ್ತದೆ.

ಹುಲುಬಯಕೆ ಬಾ ಎನಲು ಓ ಎಂದು ಬಾರದಿರು
ವಾತಾಪಿಯಂದದೊಳು ಬಾಳನೊಡೆದು
ಮೊಗ್ಗಿನೊಳು ಕಂಪಂತೆ ಚೇತದೊಳು ಬೆಳೆಯುತ್ತ

ಸಮಯವರಿತರಳ ಬಾ ಒಲವೆ ನಲಿದು
ಇಂತೆಮ್ಮ ಬಿನ್ನಹವ ಮಾರ ಮನ್ನಿಸಲಿ

ಕವಿ ಇಲ್ಲಿ ಅಹಲ್ಯೆಯ ಬಾಳನ್ನು ಹುಲು ಬಯಕೆಗೆ ಹಿನ್ನೆಲೆಯಾಗಿಟ್ಟು ಕೊಳ್ಳುವುದು. ಅವಳ ಬಾಳಿನ ದುರಂತವನ್ನು ವಾತಾಪಿಗೆ ಹೋಲಿಸುವುದು. ಗೌತಮನಲ್ಲಿನ ಕಾಮ, ಪ್ರೇಮವಾಗಿ ಅರಳಿದ್ದನ್ನು ಮೊಗ್ಗಿನೊಳು ಕಂಪಂತೆ ಎಂದು ವರ್ಣಿಸುವುದು. ಇಲ್ಲಿ ಗೌತಮಾಶ್ರಯಕ್ಕೆ ಸ್ವಲ್ಪ ದೂರದಲ್ಲಿರುವ ವನ ಪ್ರದೇಶದಲ್ಲಿ ಛಲಾಮುವಾಸಿಯಾದ ಇಂದ್ರನು ಮೇಘನಿರ್ವಾಹಕನಾದ ಪುಷ್ಕರನೊಡನೆ ಅಲ್ಲಿಗೆ ತೆರಳಿ ಅಲ್ಲಿಯ ಚೆಲುವಿಗೆ ಮನಕೊಟ್ಟು ಆಸೀನನಾಗಿರುತ್ತಾನೆ. ಪುಷ್ಕರನನ್ನು ಅದು ಯಾರ ಆಶ್ರಮವೆಂದು ಪ್ರಶ್ನಿಸಿದಾಗ ಆತ

ಗೌತಮ ವನವಿದು ಜೀಯಾ ಖ್ಯಾತನು ಈ ಯೋಗಿ
ಜಿತಕಾಮ, ದೇವಪಿಯನೀ ಸರಸತ್ಯಾಗಿ

ಎಂದು ಗೌತಮನ ವಿಶೇಷ ಗುಣವನ್ನು ವರ್ಣಿಸಿ ಹೇಳುತ್ತಾನೆ. ಗೌತಮನ ಈ ಮೂರು ವಿಶಿಷ್ಟವಾದ ಗುಣಗಳೇ ಅವನ ಬದುಕಿನ ಬಯಕೆಗೆ ಆಧಾರವಾಗುತ್ತದೆ. ಆತ ಗುಣಗಳೇ ಅವನ ಬದುಕಿನ ಬಯಕೆಗೆ ಆಧಾರವಾಗುತ್ತದೆ. ಆತ ಜಿತಕಾಮ ದೈಹಿಕ ಕಾಮನೆಗಳನ್ನು ಜಯಿಸ ಹೊರಟವನು. ಹಾಗೆಯೇ ದೇವಪ್ರಿಯ ಸುರಲೋಕವನ್ನು ಗೆಲ್ಲುವ ಸಾಹಸ ಹೊತ್ತವನು ಸರಸತ್ಯಾಗಿ ತನ್ನ ಮೇಲಿನ ಎರಡು ಕೋರಿಕೆಗಳ ಪ್ರತಿಫಲವಾಗಿ ಸರಸವನ್ನು ತ್ಯಾಗಮಾಡಿ ನಿಷ್ಠೆಯಿಂದ ತಪೋನ್ಮತ್ತನಾದವನು. ಆದರೆ ಈ ಮೂರು ನಿಷ್ಠೆಗಳೇ ಅವನ ಬದುಕಿನ ಸುಖಕ್ಕೆ ಉರುಳಾಗುತ್ತವೆ ಎನ್ನುವುದನ್ನು ಕವಿ ಸೂಚ್ಯವಾಗಿ ತರುತ್ತಾರೆ. ಹೀಗೆ ಪುಷ್ಕರ ಗೌತಮನ ಮಹಾಶಕ್ತಿಗಳನ್ನು ವರ್ಣಿಸುತ್ತಿರುವಾಗಲೇ ರಂಭೆಯ ಚೀತ್ಕಾರ ಮತ್ತು ಅವಳ ನುಡಿಗಳ ಅವನ ಮಹಾಶಕ್ತಿಯನ್ನು ಸಾಬೀತು ಮಾಡುತ್ತದೆ. ಆಕೆ ಗೌತಮನ ತಪಃಶಕ್ತಿ ಮತ್ತು ಸಂಕಲ್ಪಗಳನ್ನು ತಿಳಿಸುತ್ತಾಳೆ. ತಾನು ಗೈದ ಕೆಲಸವನ್ನು ತಿಳಿಸಿ ಆತನ ಕೋಪವನ್ನು ಕುರಿತು ಅಂದು ಮುಕ್ಕಣ್ಣನೆದರು ಭೀತ ಕಾಮನಂತೆ ಎಂದು ಆತನನ್ನು ಈಶ್ವರ ಸಮಾನವೆಂದು ಹೇಳುತ್ತಾಳೆ. ಆತನ ತಪೋ ನಿಷ್ಠೆಯನ್ನು ಅಲುಗಾಡದ ಸೊಡರ ಕುಡಿಯ ತೆರದೊಳದ್ದನಿಂದು ಎಂದು ಆತನ ಒಳಗು-ಹೊರಗುಗಳನ್ನು ಮೆಚ್ಚಿ ನುಡಿಯುತ್ತಾಳೆ. ಆತ ಶಪಿಸಲು ಕೈ ಎತ್ತಿದಾಗ ಬಂದು ತಡೆದ ಅಹಲ್ಯೆಯನ್ನು ಕಾಣುತ್ತೇವೆ.

ಈ ರೀತಿಯಾಗಿ ಪಾತ್ರಗಳನ್ನು ಸೃಷ್ಟಿಸಿ ಅವುಗಳ ಮೂಲಕ ಸಮಾಜದ ಸ್ವಾಸ್ಥ್ಯಕ್ಕೆ ಉತ್ತರವನ್ನು ನೀಡುವ ಶಕ್ತಿ ಪು.ತಿ.ನ.ರವರಿಗೆ ಸಿದ್ಧಿಸಿದೆ ಎಂದರೆ ತಪ್ಪಾಗಲಾರದು. ಹಾಗೂ ಅದರಂತೆಯೇ ಪು.ತಿ.ನ. ಅವರು ಅಹಲ್ಯೆ ಪಾತ್ರವನ್ನು ನಿರ್ಮಿಸಿ ಅದರ ಸುತ್ತ ಇರುವ ಕಂದಕಗಳನ್ನು ತೊರೆದು ಗೌತಮನಿಗೆ ವಿವಾಹವಾಗಿದ್ದರೂ ಸತಿ ಇಚ್ಛೆಯನ್ನು ಅರಿಯದೆ ತನ್ನ ವಯಕ್ತಿಕ ಸಾಧನೆಗಳೇ ಮೇಲು ಎಂದು ತಿಳಿದು ಜಿತಕಾಮನಾಗಲು ಹೋಗುವುದು. ತನ್ನ ತನವನ್ನು ತಾನು ಪರೀಕ್ಷೆ ಮಾಡಿಕೊಳ್ಳಲು ಹೋಗಿ ತನ್ನ ನಂಬಿದ ಇತರ ವ್ಯಕ್ತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಅವಂತಾರಕ್ಕೆ ಒಳಗಾಗುವುದು.

ಉದಾ: ನಾಗಮಂಡಲದ ಕಥೆ ತನ್ನ ನಿಷ್ಠೆಗಳೇ ಮುಖ್ಯವೆಂದು ತಿಳಿದಿರುವವರಿಗೆ ಇನ್ನೊಬ್ಬರು ಮಧ್ಯಪ್ರವೇಶವಾಗಿ ಹೇಗೆ ತಪ್ಪುಗಳನ್ನು ಎತ್ತಿ ತೋರಿಸುತ್ತಾರೆ ತಾವು ಸರಿಹೋಗಲು ಅವರು ತಮಗೆ ಮಾರ್ಗದರ್ಶನ ನೀಡುತ್ತಾರೆ ಎಂದು ತಿಳಿಯುವುದು. ನಾಗಮಂಡಲದಲ್ಲಿ ಹಾವಿನ ವೇಷ ಧರಿಸಿದ ಮನುಷ್ಯ ಅಹಲ್ಯೆಯಲ್ಲಿ ಮಾರುವೇಷ

ಧರಿಸಿದ ಇಂದ್ರ ಗೌತಮನ ಪಾಲಿಗೆ ಒಬ್ಬ ಗುರುವೆಂದು ತಿಳಿಯಬೇಕು. ತನಗೆ ಅಂಟಿದ್ದ ಅತ್ಯುಗ್ರ ಸನ್ಯಾಸವನ್ನು ಶಮನಗೊಳಿಸಿ ಸತಿಪತಿಯರಿಬ್ಬರು ಒಂದಾಗುವಂತೆ ಮಾಡಿದ್ದಾನೆ. ಇದು ತಪ್ಪಾದರೂ ಸಮಾಜದ ಸ್ವಾಸ್ತ್ಯಕ್ಕೆ ಅವಶ್ಯವೆನಿಸುವುದು ತುಂಬಾ ಅರ್ಥಗರ್ಭಿತವಾಗಿ ಕಂಡು ಬರುತ್ತದೆ.

ಹೀಗೆ ಪು.ತಿ.ನ. ರವರು ತಮ್ಮ ಗೀತ ನಾಟಕಗಳ ರಚನೆಯಿಂದ ಸಮಾಜದಲ್ಲಿ ಸಾಮಾಜಿಕ ಪ್ರಜ್ಞೆಯು ಎಷ್ಟರ ಮಟ್ಟಿಗೆ ಬಿಂಬಿತವಾಗುತ್ತಿದೆ ಎಂಬುದನ್ನು ಕೂಲಂಕಷವಾಗಿ ಚಿತ್ರಿಸಿದ್ದಾರೆ. ಹಾಗಾಗಿ ಇವರ ಪ್ರತಿಯೊಂದು ನಾಟಕಗಳಲ್ಲಿಯೂ ಸಾಮಾಜಿಕ ಪ್ರಜ್ಞೆಯ ರೀತಿ ರಿವಾಜುಗಳನ್ನು ತಿಳಿಯಬಹುದಾಗಿದೆ.

ಅಡಿಟಿಪ್ಪಣಿಗಳು

೧. ಪು.ತಿ.ನ. ಅವರ ನಾಟಕಗಳು, ಪು. ೧

೨. ಅದೇ, ಪು. ೧೦.

೩. ಅದೇ, ಪು. ೨೭.

ಅಧ್ಯಾಯ ಐದು

ಪು.ತಿ.ನ. ಅವರ ಪ್ರಬಂಧಗಳಲ್ಲಿ ಸಾಮಾಜಿಕ ಪ್ರಜ್ಞೆ

ಕನ್ನಡ ನವೋದಯ ಸಾಹಿತ್ಯದಲ್ಲಿ ಪು.ತಿ.ನ. ಎಂಬ ಕಾವ್ಯನಾಮದಿಂದ ಪ್ರಖ್ಯಾತವಾಗಿರುವ ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹ ಚಾರ್ಯರು ಮೇಲುಕೋಟೆಯಲ್ಲಿ ಜನಿಸಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಹಲವಾರು ಹುದ್ದೆಗಳನ್ನು ಅನುಭವಿಸಿದ ಇವರು ತಾವು ಹೋದೆಡೆಯಲ್ಲಿ ಪಡೆದ ಅನುಭವಗಳು ತನ್ನ ಸಮಾಜ, ಪರಿಸರ, ಪ್ರಕೃತಿ ಪ್ರೇಮಗಳನ್ನು ಸಾಹಿತ್ಯದಲ್ಲಿ ಪಡಿ ಮೂಡಿಸಿದ್ದಾರೆ. ತನ್ನ ವಾಸಸ್ಥಳವಾದ ಮೇಲುಕೋಟೆಯ ಸುತ್ತ-ಮುತ್ತಲಿನ ಸಮಾಜದ ವಸ್ತುಗಳು, ಜೀವನದ ಅನುಭವಗಳು ಸ್ನೇಹ, ಸಂಬಂಧ, ಕೌಟುಂಬಿಕ ಸಮಾಜ, ಧಾರ್ಮಿಕ ಜೀವನ ಪದ್ಧತಿ, ದೈವಿಕ ಆಚರಣೆಗಳು, ಸಂಪ್ರದಾಯಗಳು ಇವರ ಪ್ರಬಂಧಗಳಲ್ಲಿ ಕಾಣಬಹುದು. ಕಾವ್ಯದಂತೆ ಪ್ರಕೃತಿ ವರ್ಣನೆಗಳಿಗಿಂತ ಜೀವನದ ವಾಸ್ತವಗಳು ಪ್ರಬಂಧಗಳಲ್ಲಿ ವ್ಯಕ್ತವಾಗುತ್ತಿವೆ.

ಪು.ತಿ.ನ. ಅವರು 'ಈಚಲುಮರದ ಕೆಳಗೆ, ಧೇನುಕಪುರಾಣ, ರಾಮಾಚಾರಿಯ ನೆನಪು, ರಥಸಪ್ತಮಿ ಮತ್ತು ಇತರ ಚಿತ್ರಗಳು, ಧ್ವಜರಕ್ಷಣೆ ಎಂಬ ಪ್ರಬಂಧಗಳನ್ನು ಬರೆದಿದ್ದಾರೆ. ಪು.ತಿ.ನ ಅವರ ಚಿಂತನೆ ಪ್ರಧಾನವಾಗಿ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕ ಸ್ವರೂಪದ್ದಾಗಿದೆ. ಆಧುನಿಕ ಭಾರತದ ಜನ ಜೀವನ ತನ್ನ ಸ್ವರೂಪ ನಾಶಮಾಡಿಕೊಳ್ಳುತ್ತಿರುವ ವೇಗದ ತೀವ್ರತೆ ಅವರನ್ನು ಖಿನ್ನಗೊಳಿಸಿದೆ. ಈ ಸಾಂಸ್ಕೃತಿಕ ಸಂಕ್ರಮಣಾವಸ್ಥೆಯಿಂದ ಭಾರತ ಹೇಗೆ ಚೇತರಿಸಿಕೊಳ್ಳಬಲ್ಲದು? ಮತ್ತೆ ಸ್ವ-ಸ್ವರೂಪ-ವನ್ನು ಹೇಗೆ ಸಾಧಿಸಬಲ್ಲುದು?ಎಂಬುದನ್ನು ಅವರ ಪ್ರಬಂಧಗಳು ಚಿಂತಿಸುತ್ತವೆ.

ಸಾಮಾಜಿಕ ಶ್ರೇಣಿಕರಣದ ತಾರತಮ್ಯಗಳು, ಸಮಾಜದ ದಾಷ್ಟ್ಯ ದರಿದ್ರಗಳು ತಳಸಮುದಾಯದ ನೋವಿನ ನೆಲೆಗಳ ಅಭಿವ್ಯಕ್ತಿಗಿಂತ ವೈಧಿಕ ಬ್ರಾಹಣ ಸಮಾಜದ ಜೀವನ ಪದ್ಧತಿ, ಧಾರ್ಮಿಕ ನೆಲೆಗಟ್ಟಿನ ಪರಿಭಾಷೆಗಳು, ಸಾಮಾಜಿಕ ನಂಬಿಕೆ, ದೈವಿಕ ವೈಭವೀಕರಣಗಳನ್ನು ಪ್ರಶ್ನೆ ಮಾಡುವುದರ ಮೂಲಕ ತನ್ನ ಸ್ನೇಹಿತರ ಸಂಬಂಧಿಗಳ ಒಡನಾಟದಲ್ಲಿ ವ್ಯಕ್ತವಾಗುವ ಹೇಳಿಕೆಗಳು ಒಪ್ಪಬೇಕಾದಂತಹವೇ ಎನಿಸುತ್ತದೆ.

ಮೇಲುಕೋಟೆಯಲ್ಲಿ ಜನಿಸಿದ ಇವರು ಅವರ ಬೆಳವಣಿಗೆಯೊಂದಿಗೆ ಗಳಿಸಿದ ಜೀವನಾನುಭವಗಳನ್ನು, ಬಾಲ್ಯದ ನೆನಪುಗಳನ್ನು ತನ್ನ ಸಮಾಜ ನಂಬಿರುವ

ನಂಬಿಕೆಗಳನ್ನು ತಮ್ಮ ಪ್ರಬಂಧಗಳಲ್ಲಿ ನಿರೂಪಿಸಿದ್ದಾರೆ. 'ಯದುಗಿರಿಯಲ್ಲಿ ಗೆಳೆಯರು' ಎಂಬ ಪ್ರಬಂಧ ಸಂಕಲನವು ಎಂಟು ಪ್ರಬಂಧಗಳನ್ನೊಳಗೊಂಡಿದ್ದು ತನ್ನ ಗೆಳೆಯರ ನಡುವಿನ ಗೆಳತನದ ಸವಿ ನೆನಪುಗಳನ್ನು ಕಟ್ಟಿಕೊಡುತ್ತಾರೆ. ಶ್ರೀಮತೇ ರಾಮಾನುಜಾಯ ನಮಃ, ನಾರಾಯಣನ ಗುಡಿ ಎಂಬ ನನ್ನ ಪ್ರಬಂಧ, ಕಪ್ಪೆ, ಶ್ಯಾಮನಘಟ್ಟ ಬೆಟ್ಟದಮೇಲೆ, ಒಲೆಯ ಮುಂದೆ, ತೊರೆಯದಾರಿಯಲ್ಲಿ, ಜಾತಣ ಬಿಳ್ಕೋಡಿಗೆ ಎಂಬ ಪ್ರಬಂಧಗಳನ್ನು ಒಳಗೊಂಡಿದೆ. ಜೊತೆಗೆ ರಥಸಪ್ತಮಿ, ಈಚಲು ಮರದ ಕೆಳಗೆ, ಭೀತಿಮೀಮಾಂಸೆ, ರಾಮಾಚಾರಿಯ ನೆನಪು, ನನಸಿಗಿಂತ ನಿಜವಾದ ಒಂದು ಕನಸು ಮೇಲುಕೋಟೆ ಎಂಬ ಧೀರ್ಘವಾದ ಪ್ರಬಂಧಗಳು ಮೇಲುಕೋಟೆಯ ಇತಿಹಾಸವನ್ನು ಆ ಸಮಾಜದ ವಿವರವನ್ನು ನಿರೂಪಿಸುತ್ತದೆ.

ಅವರೇ ಗುರ್ತಿಸುವಂತೆ ಶ್ರೀ ವೈಷ್ಣವ ಕ್ಷೇತ್ರಗಳ ಪೈಕಿ ಭಗವದ್ರಾಮಾನುಜರು ನಾಲ್ಕು ಮುಖ್ಯ ಕ್ಷೇತ್ರಗಳನ್ನು ಸ್ಮರಣೆಗೆ ಬಿಟ್ಟು ಹೋಗಿದ್ದಾರೆ. ಎನ್ನುತ ಮೇಲುಕೋಟೆಯ ವೈಭವ ಲೀಲೆ, ಇತಿಹಾಸ ಸ್ಥಳದ ಪರಿಚಯ, ಆಯಾಯ ಸಂದರ್ಭದಲ್ಲಿ ನೀಡಿದ ಪ್ರಭುತ್ವಶಾಹಿಯ ಕೊಡುಗೆಗಳನ್ನು ತಿಳಿಸುತ್ತಾರೆ.

ಶ್ರೀ ರಂಗಮಂಗಳಮಣಿಂ ಕರುಣಾನಿವಾಸಂ
ಶ್ರೀ ವೆಂಕಟಾದ್ರಿ ಶಿಖರಾಲಯ ಕಾಳಮೇಷಂ
ಶ್ರೀ ಹಸ್ತಿ ಶೈಲ ಶಿಖರೋಜ್ವಲ ಪಾರಿಜಾತಂ
ಶ್ರೀ ಶಂ ನಮಾಮಿ ಶಿರಸಾ ಯದುಶೈಲ ದೀಪಂ ಎಂದು

ಶ್ರೀ ವೈಷ್ಣವ ಬ್ರಾಹ್ಮಣರು ಜಪಿಸುವ ಕ್ಷೇತ್ರಗಳಾದ ಶ್ರೀರಂಗಂ, ತಿರುಪತಿ, ಕಂಚಿಯಂತೆ, ಮೇಲುಕೋಟೆಯ ಯದುಶೈಲವು ಒಂದಾಗಿದೆ ಎನ್ನುತ್ತಾರೆ. ಇದರ ಇತಿಹಾಸವನ್ನು ಹೇಳುತ್ತಾ, ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನಗುಡಿ-ಗೋಪುರಗಳ ರಚನೆ, ಅಲ್ಲಿನ ಪ್ರಾಕೃತಿಕ ವರ್ಣನೆ ವೈಭವಗಳು ಯದುಗಿರಿ ರಾಜಆಸ್ಥಾನದ ನೆರವಿನ ಬಗ್ಗೆ ಹೇಳುತ್ತಾರೆ.

ರಾಮಾನುಜರ ಪ್ರೇರಣೆಯಿಂದ ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದ ಜೈನದೊರೆ ಬಿಟ್ಟಿದೇವ ಎಂಬ ಹೊಯ್ಸಳ ಚಕ್ರವರ್ತಿಯ ರಾಜಪ್ರಭುತ್ವವು ಕೈಗೊಂಡು. ಸಾಮಾಜಿಕ ಅಥವಾ ಸಮಾಜೋದ್ಧಾರದ ಬಗ್ಗೆ ವರ್ಣಿಸಿದ್ದಾನೆ. ವೈಷ್ಣವ ಧರ್ಮದ ಬೆಳವಣಿಗೆಗೆ ಮುಸಲ್ಮಾನ ದೊರೆಗಳು, ಹೈದರಾಲಿ, ಇತ್ಯಾದಿ ಪರಧರ್ಮ ಸಹಿಷ್ಣುತೆ ಹೊಂದಿದ ರಾಜರುಗಳು ರಾಮಾನುಜರ ಕಾರ್ಯಚಟುವಟಿಕೆಗಳಿಗೆ ನೆರವನ್ನು

ನೀಡುತ್ತಿದ್ದರು. ಹಾಗೂ ಯದುಗಿರಿಯ ಬೆಟ್ಟದ ಮೇಲಿನ ದೇವಾಲಯಗಳಿಗೆ ದೇಣಿಗೆಯನ್ನು ನೀಡುತ್ತಿದ್ದರು ಎಂಬುದು ಅಂದಿನ ಕಾಲದ ಸಮಾಜದ ಧರ್ಮಾತೀತವಾದ, ಮತೀಯತೆಯನ್ನು ಮೀರಿದ ಸಮಾಜದ ಚಲನೆಗೆ ಜೀವಂತ ಸಾಕ್ಷಿಯಾಗಿದೆ.

ಬಿಟ್ಟಿದೇವ, ಮಮ್ಮಡಿ ಕೃಷ್ಣರಾಜ ಒಡೆಯರ್, ರಾಜ ಒಡೆಯರ್, ಪ್ರೌಢದೇವರಾಯನ ಮಂತ್ರಿಯಾದ ತಿಮ್ಮಣ್ಣನಾಯಕ, ದೊಡ್ಡ ದೇವರಾಯ, ಚಿಕ್ಕದೇವರಾಯ ಅನೇಕ ರಾಜಾಧಿರಾಜರುಗಳು ದಾನ ದತ್ತಿ ದೇಣಿಗೆಗಳನ್ನು ನೀಡಿ ಅವನತಿ ಹಿಡಿದಿದ್ದ ವೈಷ್ಣವ ಧರ್ಮದ ಪುನಃ ಸ್ಥಾಪನೆಗೆ ನೆರವು ನೀಡಿರುವುದನ್ನು ಅಲ್ಲಿನ ಪ್ರತಿಯೊಂದು ದೇವ-ದೇವತೆಗಳ ಆಚರಣೆಗಳು ಆ ಸುತ್ತಲಿನ ಸಮಾಜದ ಆಚರಣೆಯ ಅಂಗವಾಗಿ ಇಂದಿಗೂ ಪ್ರಚಲಿತವಾಗಿರುವ ವೈರಮುಡಿ ವಿಶೇಷತೆಯನ್ನು ಮೇಲುಕೋಟೆಯ ಯದುಗಿರಿಯ ಇಂಚಿಂಚನ್ನು ಬಿಡದೆ ವರ್ಣಿಸಿದ್ದಾರೆ.

ಆ ಊರಿನ ಜನರ ಬಗ್ಗೆ ಹೇಳುತ್ತಾ "ಈ ಊರಿನಲ್ಲಿ ಎಲ್ಲಾ ಕೋಮು ಜನರೂ ಇದ್ದಾರೆ ಎಂದು ಅಲ್ಲಿ ಎಲ್ಲ ಜಾತಿಯ ಜನರು ವಾಸವಾಗಿದ್ದಾರಾದರೂ ಪ್ರತ್ಯೇಕ ಕೇರಿಗಳಲ್ಲಿ ವಾಸವಾಗಿದ್ದು, ತಮ್ಮ ಮನೆತನಗಳ ಅಥವಾ ಕುಟುಂಬದ ಪದ್ಧತಿ ಆಚರಣೆಗಳನ್ನು ವೈಧಿಕ ವರ್ಗದವರ ಪರಂಪರಾಗತವಾಗಿ ಆಚರಿಸುತ್ತಾ ಬಂದು ಸಮಾಜದ ಮೇಲಸ್ತರದ ಜನಾಂಗವಾಗಿ ನಿಲ್ಲುತ್ತಾರೆ ಎಂದು ಹೇಳುತ್ತಾ ಆ ಊರಿನಲ್ಲಿ ನಡೆಯುತ್ತಿದ್ದಂತಹ ಕಲಾ ಪ್ರದರ್ಶನಗಳ ಸಾಂಸ್ಕೃತಿಕ ಬದುಕನ್ನು ನಿರೂಪಿಸುತ್ತಾರೆ.

ಚಿತ್ರಗಾರರು, ಯಕ್ಷಗಾನ ಮೇಳಗಳು ನಡೆಸುತ್ತಿದ್ದ ಕಾಲವೊಂದಿತ್ತು. ವೈಧಿಕ ಗೋಷ್ಠಿಯೂ ಸಮೃದ್ಧವಾಗಿತ್ತು ಎಂಬುದರಲ್ಲಿ ಆ ಸಮಾಜದ ಪ್ರಧಾನ ವ್ಯವಸ್ಥೆಯಾಗಿ ಬ್ರಾಹ್ಮಣ ಸಮಾಜ ಕಾಣುತ್ತದೆ. ಹಿಂದೆ ಮೇಲುಕೋಟೆಯ ಒಳರಚನೆಗಳ ಬಗ್ಗೆ ಪರಿಚಯಿಸುತ್ತಾ ಪುಟ್ಟನರಸಿಕೊಳ ಎಂಬ ದೊಡ್ಡ ಕೊಳವನ್ನು ಒಬ್ಬಳು ದೇವದಾಸಿ ಕಟ್ಟಿಸಿದಳು ಎಂಬುದನ್ನು ಹೇಳುತ್ತಾ ಹಿಂದೆ ದೇವದಾಸಿ ಪದ್ಧತಿಯು ಚಾಲ್ತಿಯಲ್ಲಿತ್ತು ಎಂಬುದನ್ನು ಕೊಳ, ದೇವಾಲಯ, ಕೋಟೆ, ಅಲ್ಲಿನ ವರಾಹಕ್ಷೇತ್ರ, ನರಸಿಂಹಕ್ಷೇತ್ರ ಎಂದು 'ಆಳ್ವಾರ್'ರ ಬದುಕಿನ ರೀತಿಗಳನ್ನು ಈ ಪ್ರಬಂಧದಲ್ಲಿ ನಿರೂಪಿಸಿದ್ದಾರೆ.

ಮೇಲುಕೋಟೆಯ ಸಾಂಸ್ಕೃತಿಕ ಬದುಕನ್ನು ಇಂಚಿಂಚಾಗಿ ತೆರೆದು ತೋರಿಸುತ್ತಾ ಆ ಸ್ಥಳದ ವೈಭವೋ ಇತಿಹಾಸವನ್ನು ಹೊಸ ತಲೆಮಾರಿಗೆ ದರ್ಶನ ಮಾಡಿಸಿರುವುದು ವಿಶೇಷವಾಗಿದೆ. ಕಾರ್ತಿಕ ಮಾಸದಲ್ಲಿ ದೀಪಾವಳಿ ಹಬ್ಬದ ಉತ್ಸವ, ಕಾರ್ತಿಕ

ಹುಣ್ಣಿಮೆಯಲ್ಲಿ ಕೃತ್ತಿಕೋತ್ಸವ, ಡಿಸೆಂಬರ್ ತಿಂಗಳಿನಲ್ಲಿ ಧನುರ್ಮಾಸದ ಪೂಜೆ ವರ್ಷ ವರ್ಷವೂ ಇಂದಿಗೂ ನಡೆಯುವ 'ಮೈರಮುಡಿ ಬ್ರಹ್ಮರಥೋತ್ಸವ' ಆ ಕ್ಷೇತ್ರದ ಸಮಾಜ ನಂಬಿಕೊಂಡು ನಡೆಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಗೆ ಸಾಕ್ಷಿಯಾಗಿದೆ.

'ಈಚಲು ಮರದ ಕೆಳಗೆ' ಎಂಬ ಪ್ರಬಂಧವು ಪ್ರಬಂಧಕಾರ ಮತ್ತು ಪ್ರಕೃತಿ ನಡುವಿನ ಅಂತರ ಸಂಬಂಧವನ್ನು ಹೇಳುತ್ತದೆ. ಕೆಲವರು ಈಚಲು ಮರವನ್ನು ಕೆಟ್ಟದು, ಅಪಶಕುನವೆಂದು ಕಂಡರೆ ಇಲ್ಲಿ ಪು.ತಿ.ನ ಅವರಿಗೆ ಜ್ಞಾನೋದಯದ ಪ್ರೇರಣೆಯಾಗಿ ಕಾಣುತ್ತದೆ. ಅಂದರೆ ಸಮಾಜದಲ್ಲಿನ ವೈಪರಿತ್ಯ ವಿಭಿನ್ನತೆಗಳನ್ನು ಸಮಾಜದಲ್ಲಿ ಸಾಮಾನ್ಯವಾದುದು ವಿಶೇಷವಾಗಿಯೂ ವಿಶೇಷವಾದದ್ದು ಸಾಮಾನ್ಯವಾಗಿಯು ಕಾಣುವಂತೆ ಅಂತವರ ಸ್ವೀಕಾರ ಯೋಗ್ಯವಾಗುವಂತೆ ಪ್ರಕೃತಿಯೊಳಗಿರುವ ಸಂಬಂಧವು ಅಭಿವ್ಯಕ್ತವಾಗಿದೆ.

ಪ್ರಾರಂಭದಲ್ಲಿ ನನಗೆ ತೆಂಗಿನ ಮರ ಕಂಡರೆ ಹೇಗೆ ಹೇಗೋ ಆಗುತ್ತದೆ. ನಮ್ಮ ತೋಟ ಜ್ಞಾಪಕಕ್ಕೆ ಬರುತ್ತದೆ. ರೈತ ಜ್ಞಾಪಕಕ್ಕೆ ಬರುತ್ತಾನೆ. ಮನಸ್ಸಿಗೆ ಸಂಕಟ ತರುವ ನೆನಪು. ಆ ತೋಟದ ಕಾಯನ್ನೂ ನಾನು ತಿನ್ನುವಂತಿಲ್ಲ. ಎಳನೀರು ಕುಡಿಯುವಂತಿಲ್ಲ, ಕೊಬ್ಬರಿಯ ಸುದ್ದಿಯೇ ಕಾಣೆ ಎಂಬುದು. ಈ ಸಮಾಜವು ರೈತನನ್ನು ಹೇಗೆ ನೋಡುತ್ತದೆ ಸಮಾಜದಲ್ಲಿ ಶ್ರಮ ಪಡುವ ರೈತನ ಪಾತ್ರವೇನು ಎಂಬುದನ್ನು ಸಮಾಜದ ಏಳಿಗೆಗೆ ದುಡಿಯುವವರು ಅದರ ಫಲವನ್ನು ಉಣ್ಣದೆ ನಿರಾಸೆಗೊಂಡ ಅಥವಾ ಕೈಗೆಟುಕದ ಪೂರ್ಣಗೊಳಿಸಲಾಗದ ನಂಬಿಕೆ ಇಚ್ಚೆಗಳು ಪ್ರಶ್ನೆಗಾಗಿ ಕಾಡುತ್ತವೆ ಎಂಬುದನ್ನು ವ್ಯಕ್ತಗೊಳಿಸಿದ್ದಾರೆ.

ಸಮಾಜ ಮಾನ್ಯತೆಯಿಲ್ಲದ ಸ್ಥಳಗಳಲ್ಲಿ ಅವಕಾಶವಿಲ್ಲ ಎಂದು ಹೇಳುತ್ತಾ ಪುರಾಣ ಪ್ರವಚನಗಳು ನಡೆಯುವ ಸ್ಥಳದಲ್ಲಿ ಇದಕ್ಕೆ ಇರುವುದಕ್ಕೆ ಅವಕಾಶವಿಲ್ಲ ಅಥವಾ ಇದು ಇರುವೆಡೆಯಲ್ಲಿ ಪುರಾಣ ಶ್ರವಣ ನಡೆಯುವುದಿಲ್ಲ. ನಾರಿಕೇಳಕ್ಕೆ ಈ ಆರ್ಯ ಸಂಸ್ಕೃತಿಯು ಸಹಜವಾಗಿಯೇ ಉಂಟು. ಅದರ ಸಂತಾನವಿಲ್ಲದ ಪೂಜೆ ಎಲ್ಲಿ, ಪುರಸ್ಕಾರವೆಲ್ಲಿ, ವೈಧಿಕ ಕರ್ಮವೆಲ್ಲಿ ಫಲದಾನವೆಲ್ಲಿ? ಎಂಬುದು ಬ್ರಾಹ್ಮಣಶಾಹಿ ಸ್ಥಾಪಿತ ನಂಬಿಕೆಗಳೇ ಸಮಾಜದ ನಂಬಿಕೆಗಳಾಗಿ ಕಾಣುತ್ತವೆ. ಅದು ನಂಬುವಂತೆ ಹೇರಿ ಸಮಾಜ ಮಾನ್ಯಗೊಳಿಸಲು ಪುರೋಹಿತಶಾಹಿ ಪ್ರಭುತ್ವ ಪ್ರಾಚೀನ ಕಾಲದಿಂದಲೂ ನಡೆಸಲ್ಪಡುತ್ತಿದೆ.

ಪ್ರಾಚೀನ ಇತಿಹಾಸವನ್ನು ಗಮನಿಸುತ್ತಾ ಹೋದರೆ ಜನಸಾಮಾನ್ಯರು ಧಾರ್ಮಿಕ ನಂಬಿಕೆ ಆಚರಣೆ ದೈವದ ಹೆಸರಿನಲ್ಲಿ ಹೇರಲ್ಪಟ್ಟವುಗಳಾಗಿವೆಯೇ ವಿನಃ ಪ್ರೀತಿಯಿಂದ ಅಪ್ಪಿಕೊಂಡವಲ್ಲ. ಅನಿವಾರ್ಯವಾಗಿ ತಲೆತಲಾಂತರದಿಂದ ನಡೆಸಿಕೊಂಡು ಬಂದುದನ್ನು ಬಿಡಲಾರದೆ ಬಲವಂತವಾಗಿ ಆಚರಿಸಲ್ಪಡುತ್ತವೆ. ಅಂತೆಯೇ ಇಲ್ಲಿ ಈಚಲು ಮರದ ಪ್ರತೀಕವಾಗಿದೆ. ಆರ್ಯ ಸಂಸ್ಕೃತಿಯಿಂದ ಮಾನ್ಯಗೊಳಿಸಿಲ್ಲದ ಹೊರತು ಅದು ಸಮಾಜದ ಅಂಗೀಕೃತವಾಗದು. ಅಂತೆಯೇ ಭಾಷೆಯ ಸಂಸ್ಕೃತ ಜನ್ಯವಾದದ್ದು ಮಾತ್ರ ಮೇಲ್ ಸ್ಥಾನದಲ್ಲಿದ್ದು ಪ್ರಾದೇಶಿಕ ಭಾಷೆಗಳು ಅಸ್ತಿತ್ವವಿಲ್ಲದೇ ಅಸ್ಮಿತೆಯನ್ನು ಕಳೆದುಕೊಳ್ಳುತ್ತಿರುವುದರ ಸೂಚನೆಯಾಗಿ ಕಾಣುತ್ತದೆ.

ಈಚಲು ಮರದ ಕೆಳಗೆ

ನಿನ್ನನ್ನು ಅರಸಿಕೊಂಡು ನಾನು ಬರಲಿಲ್ಲ. ನನ್ನನ್ನು ಅರಸಿಕೊಂಡು ನೀನು ಬಂದಿದೀಯೆ. ಆದರೆ ನನಗೆ ಕೆಡುಕನ್ನು ಯೋಚಿಸುತ್ತಿದ್ದೀಯ ನನಗೆ ಯಾರ ಆಶ್ರಯವು ಬೇಕಿಲ್ಲ. ನನಗೆ ಇಷ್ಟ ಬಂದ ಕಡೆ ನಾನು ಬೆಳೆಯುತ್ತೇನೆ ಎನ್ನುತ್ತಾ ನಿಮ್ಮ ಜ್ಞಾನವೇ ಲೇಸೋ ಅವರ ಅಜ್ಞಾನವೇ ಲೇಸೋ ಯಾರು ಹೇಳಬಲ್ಲರು. ಎರಡೂ ಒಂದೇ ನಾಣ್ಯದ ಎರಡು ಮುಖಗಳ ತಲೆ ನೀವು, ತಳ ಅವರು ನಮ್ಮಿಬ್ಬರ ಬುದ್ದಿಯ ಟಂಕಸಾಲಿಗ ನಾನು ಎನ್ನುತ್ತಾ ವರ್ಗ ವರ್ಣಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ. ತಳಮೂಲ ಸಂಸ್ಕೃತಿ ಹಾಗೂ ಪೌರೋಹಿತ ಸಂಸ್ಕೃತಿಯ ನಡುವೆ ವ್ಯತ್ಯಾಸವಿದ್ದರೂ ಅದನ್ನು ಸಮಾಜದಲ್ಲಿ ರೂಪಿಸುವ ಅಂಶವಾಗಿ ಗ್ರಹಿಸಲು ಸಾಧ್ಯ.

ಪ್ರಕೃತಿ ಪರಿಸರದ ಪ್ರಭಾವದಿಂದ ಮಾನವನ ವಿಕಾಸ ಸಾಧ್ಯವಾಗಿದೆ. ಬುದ್ಧ ದೇವನಿಗೆ ಪ್ರಜ್ಞೆ ಬಂದದ್ದು ಸುಜಾತೆಯು ತಂದಿದ್ದ ಹಾಲನ್ನೂ ಕುಡಿದ ಮೇಲೆ ತಾನೆ. ನನಗೆ ಬರುವ ಬುತ್ತಿ ಇನ್ನೂ ಬಂದಿಲ್ಲ. ಗೆಳೆಯರು ಮರೆತರೋ ಇಲ್ಲಿ ಹಾದಿ ತಪ್ಪಿದರೋ ಕಾಣೆ ಈ ಈಚಲು ಮರ ಜಾಣಮರ ಮಾನವೋಪಯೋಗಿ ಕಡಿಮೆ ಇರುವ ಮರ ಇಲ್ಲಿ ಪು.ತಿ.ನ. ಅವರಿಗೆ ಜ್ಞಾನೋದಯ ಸಂಕೇತವಾಗಿದೆ. ಸ್ನೇಹಿತರ ಸಂಬಂಧ ಅವರು ತರುವ ಬುತ್ತಿ, ಮಾನಸಿಕ ದೈಹಿಕ ಸ್ವಾಸ್ಥ್ಯವನ್ನು ಕಾಪಾಡುವ ಚೈತನ್ಯ ತುಂಬುವವರು ಆಗಿರುತ್ತಾರೆ.

ಧಾರ್ಮಿಕ ಅಥವಾ ಆಧ್ಯಾತ್ಮ ಬದುಕಿನ ಸಾಧನೆಗೈದ ರಾಮಕೃಷ್ಣ ಪರಮಹಂಸರೆಂಬ ಮಹಾಯೋಗಿಗಳಿಂದ ಸಾಧ್ಯವಾಗುವ ನಿದ್ರಾ, ಸ್ವಪ್ನಾ, ಜಾಗೃತಿ, ಈ

ಮೂರು ಸ್ಥಾಯಿಗಳನ್ನು ತನ್ನೊಳಗೆ ಆತ್ಮದರ್ಶನ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಜಗತ್ತಿನ ಮಿತ್ಯ-ಸತ್ಯಗಳನ್ನು ಪ್ರಶ್ನಿಸುತ್ತಾ ಸಮಾಜದ ವಾಸ್ತವಾಂಶಗಳನ್ನು ಈಚಲು ಮರ ತನ್ನ ಆತ್ಮ ನಿವೇದನೆಯ ಸಂವೇದನೆಯಲ್ಲಿ ಪ್ರಶ್ನಿಸುತ್ತಾ ಸಂಭಾಷಣೆಗೊಳಿಸಿದ್ದಾರೆ. ನೀನು ನನ್ನಿಕಾರನೋ?ನಾನೆಲ್ಲವೋ? ಈ ಒಂದೇ ಉದಾಹರಣೆ ತೆಗೆದುಕೊ, ಭೂಮಿ ಸುತ್ತುತ್ತದೆಯೋ.......ಸೂರ್ಯನೋ ? ಭೂಮಿಯೇ-ಸೂರ್ಯನಲ್ಲಿ ಎಂಬ ತತ್ವ ನಿಮ್ಮ ಜಾಗೃತ ವ್ಯವಸ್ಥೆಯಲ್ಲಿ ನೆಲೆಗೊಳ್ಳುವುದಕ್ಕೆ ಎಷ್ಟೊಂದು ವರ್ಷಗಳ ಕಾಲ ಹಿಡಿಯಿತು. ಲೆಕ್ಕಮಾಡು ಇದು ನಿಮಗಿನ್ನು ಅನುಮಿತ ಸತ್ಯ. ನಾನೋ ಒಂದೇ ನಿಮಿಷದಲ್ಲಿ ಇದನ್ನು ಅನುಭೂತ ಸತ್ಯವನ್ನಾಗಿ ಮಾಡಬಲ್ಲೆ. ಈ ನೆಲ ಅಸ್ಥಿರ ಏಕೆ, ಎಲ್ಲವು ಒಂದು ಕ್ಷಣದಲ್ಲಿದ್ದು ಮತ್ತೊಂದು ಕ್ಷಣದಲ್ಲಿ ಇಲ್ಲಿ. ಜಗತ್ತೇ ಬರಿ ಭ್ರಮೆ ಅದರ ಭ್ರಮಣ ಮಾತ್ರ ಸತ್ಯ, ನೀವು ಜಾಗೃತಾವಸ್ಥೆಯಲ್ಲಿ ಯಾವುದನ್ನು ಋತು ಎನ್ನುತ್ತಿರೋ ಅದೇ ಮಾಯೆ.

ಇಲ್ಲಿ ಪ್ರಬಂಧಕಾರ ಜಗತ್ತಿನ ಮಿತ್ಯ-ಸತ್ಯಗಳನ್ನು ಪ್ರಶ್ನಿಸುತ್ತಾ ಮಾಯೆ ಮಾಯಾವಿ ಎನ್ನುತ್ತಿದ್ದಾರೆ. ಪರಿಸರ ಬದಲಾವಣೆಯಾದಂತೆ ಸಮಾಜವು ಬದಲಾವಣೆಗೆ ಒಳಪಡುತ್ತದೆ. ಸಮಾಜದ ವಿಭಿನ್ನತೆಗಳು ತೆರೆದುಕೊಳ್ಳುತ್ತವೆ. ಅಸ್ಥಿರ ಜೀವನ, ಮಾನವ ಮಾನವ ಸಮಾಜ, ಇಹದ ಬದುಕು ಎಲ್ಲವೂ ಅಸ್ಥಿರವಾದದ್ದು ಸಮಾಜ ಸ್ಥಿರತೆಯನ್ನು ಪಡೆಯಲು ಆಧ್ಯಾತ್ಮದ ಮೋಕ್ಷ ಬೇಕು ಎನ್ನುವುದನ್ನು ಪ್ರಬಂಧಕಾರರ ಆಂತರ್ಯದಿಂದ ಅರಿಯಬಹುದು.

ಇರುವುದನ್ನು ಬಿಟ್ಟು ಇರದುದರೆಡೆಗೆ ಚಲಿಸುವ ಹಾಗೂ ಇಹವನ್ನು ಪರವನ್ನಾಶ್ರಯಿಸುವುದನ್ನು ಪ್ರಶ್ನಿಸುವುದು ಬರಿ ನೆಪದಂತೆ ಕಾಣುತ್ತದೆ. ಆದರೂ ಮಾನವ ಸಮಾಜ ಜೀವಿ ತನ್ನೊಳಗೆ ಪ್ರಶ್ನಿಸಿಕೊಂಡರು ಲೋಕರೂಢಿಗೆ ಒಪ್ಪುವಂತೆ ಕ್ರಿಯೆ ಕೈಗೊಳ್ಳಬೇಕು. "ತೆಪ್ಪವಿರುವಾಗ ಈಜುವ ಸಾಹಸವೇಕೆ? ಪ್ರತ್ಯಕ್ಷ ಬಹು ಅಸಮರ್ಪಕವಾದ ಸ್ಥಿತಿ ಎಂಬ 'ಈಚಲು ಮರ' ಪ್ರಬಂಧಕಾರರ ವಾದಗಳಿಂದ ತಿಳಿಯಬಹುದು.

ಹೀಗೆ ಪ್ರಕೃತಿಯನ್ನು ಮಾತನಾಡಿಸುವ ಅನುಭವಿಸುವ ಪ್ರಕೃತಿ ಮತ್ತು ಮನುಷ್ಯನ ನಿರಂತರ ಸಂಬಂಧವನ್ನು ಈ ಪ್ರಬಂಧ ವಿವರಿಸುತ್ತದೆ. ಇನ್ನೂ ಕನ್ನಡದ ವಿಷಯದ ಬಗ್ಗೆ ಕನ್ನಡ ಸಮಾಜದ ಬಗ್ಗೆ ಕನ್ನಡದ ಬಗ್ಗೆ ಮಾತನಾಡಬೇಕೆನ್ನುತ್ತಾ

ಮಾನವನೊಳಗಿನ ಸಾಮಾಜಿಕ ತಲ್ಲಣಗಳನ್ನು ಮೂಲಗಳನ್ನು ಚಿಕ್ಕ ಪ್ರಬಂಧವಾದ ಭೀತಿ ಮೀಮಾಂಸೆಯಲ್ಲಿ ಹೇಳಿದ್ದಾರೆ.

ಸಮಾಜದೊಳಗಿನ ವಿವಿಧ ಪಾತ್ರ ವರ್ಗ ಪ್ರಜ್ಞೆಯಲ್ಲಿ ಪರಿಗ್ರಹಿಸುವ ಬಡವ-ಶ್ರೀಮಂತರು ಭೀತಿ ಮಾರ್ಗದಲ್ಲಿ ನಡೆಯುವ ಮೇಲ್ಜಾತಿ, ಕೆಳಜಾತಿಗಳ ಬದುಕಿನ ವ್ಯತ್ಯಾಸವನ್ನು ಸಮಾಜ ರೂಪಿಸಿದೆ. ಸಾಮಾಜಿಕ ಶೋಷಣೆ ತೊಂದರೆಯನ್ನು ಒಬ್ಬರಿಗೊಬ್ಬರು ಪರಸ್ಪರವಾಗಿ ಉಂಟುಮಾಡಿಕೊಂಡಿರುವಂತೆ ಪರಿಭಾವಿಸಿದ್ದಾರೆ.

ಐಶ್ವರ್ಯವಂತರಿಂದ ಬಡವರಿಗೆ ತೊಂದರೆಯೇ ಬಡವರಿಂದಲೇ ಬಡವರಿಗೆ ತೊಂದರೆಯೇ ಎಂಬ ಆಲೋಚನೆಯಲ್ಲಿ ಸಾಮಾಜಿಕ ಸ್ವಾಸ್ಥ್ಯದ ಅವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ. ಉಳ್ಳವರಿಂದಲೇ ಬಡವರ ಶೋಷಣೆ ಹೆಚ್ಚಾಗಿದೆ. ಸಾಮಾಜಿಕ ಅಂತಸ್ಥನ್ನೂ ಅನುಭವಿಸದ ಹುಟ್ಟಿನಿಂದಲೇ ಬಡತನವನ್ನು ಅನುಭವಿಸುವ ಸಾಮಾನ್ಯ ಜನರು ಆಸೆ ಪಡುವುದು ಉನ್ನತ ಅಂತಸ್ತಿನ ಕಡೆ ಮುಖ ಮಾಡುವುದು ಸಹಜವಾಗಿದೆ. ಆದರೆ ಬಡವರಿಂದ ಬಡವರಿಗೆ ತೊಂದರೆ ಎಂಬ ಮಾತನ್ನು ಅವಲೋಕಿಸಿದರೆ ತನ್ನಂತೆ ಇರುವ ಇತರರಿಗೆ ಸಿಕ್ಕುವ ಅವಕಾಶಗಳು ತನಗೆ ಸಿಗಲಿಲ್ಲ ಎಂಬ ಅಸೂಯೆಯೇ ವಿನಃ ಅದು ತೊಂದರೆ ಅಥವಾ ಶೋಷಣೆ ಎನ್ನಲಾಗುವುದಿಲ್ಲ.

ಮಾನವ ಸಮಾಜದ ಉದ್ಧಾರಕ್ಕಾಗಿ ಮನುಷ್ಯನಲ್ಲಿ ತಾಳ್ಮೆ ಸಹನೆಗಳಿರಬೇಕು. ಜೊತೆಗೆ ಭಯ, ಭೀತಿಯೂ ಇರಬೇಕು. ಭೀತಿ ಇಲ್ಲದಿದ್ದರೆ ಯಾವ ಕಾರ್ಯಗಳು ಸುಗಮವಾಗಿ ಸಾಗಲಾರವು ಎಂಬುದನ್ನು ಜೀವನ ಮೀಮಾಂಸೆಯ ಮೂಲಕ ಕಟ್ಟಿಕೊಡುತ್ತಾರೆ. ಭಯ-ಧೈರ್ಯಗಳು ಒಂದು ನಾಣ್ಯದ ಎರಡು ಮುಖಗಳಂತೆ ಬಾಳಬೇಕೆಂಬ ಆಸೆಯು ಜೀವನಕ್ಕೆ ತಳಹನಿಯಾಗಿದೆ. ತಾಳಿ ಬಾಳಬೇಕು. ಸಾಮಾಜಿಕ ಸಂಘರ್ಷ ತಾರತಮ್ಯಗಳು ಕಂಡು ಬಂದಾಗ ತಾಳ್ಮೆಯಿಂದ ಸಮಾಲೋಚನೆ ಮಾಡಿ ಉತ್ತಮ ಸಮಾಜ ನಿರ್ಮಿಸಬೇಕು. 'ವಾಹಮಸ್ಮೀತಿ ಸಾಹಸಂ' ಎಂದು ಭೀತಿ ಮೀಮಾಂಸೆಯನ್ನು ಹೇಳಿದ್ದಾರೆ.

ತನ್ನ ಗೆಳೆಯನ ಮತ್ತು ತನ್ನ ಬಾಲ್ಯದ ನೆನಪುಗಳ ಸಮ್ಮಿಲನದಿಂದ ಸಮಾಜದಲ್ಲಿ ಬಡವರು ಅನುಭವಿಸುವ ಯಾತನೆ ಅವರ ಬದುಕಿನ ತಳಮಳ ಆಹಾರಕ್ಕಾಗಿ ಪರಿತಪಿಸಿ ಹಿಂದಿನಿಂದ ಬಂದ ಗೊಡ್ಡು ಸಂಪ್ರದಾಯಗಳನ್ನು ಸಾಮಾಜಿಕ ಮೌಲ್ಯವೆಂದು ಪರಿಭಾವಿಸಿ ಮೂಕ ವಿಸ್ಮಿತರಾಗಿ ಸಾಗುವ ಅದರ ಫಲ ವಿಫಲಗಳನ್ನು

ಅರಿಯದೇ ಅವುಗಳಿಂದ ಅವನತಿಯನ್ನು ತಂದು ಕೊಳ್ಳುವ ಅವಸ್ಥೆಯನ್ನು ಪು.ತಿ.ನ. ಅವರು **'ರಾಮಾಚಾರಿಯ ನೆನಪು'** ಎಂಬ ಪ್ರಬಂಧದಲ್ಲಿ ನಿರೂಪಿಸುತ್ತಾ ಸಾಗುತ್ತಾರೆ.

ಎಳೆತನದಲ್ಲಿ ಗೆಳೆಯರೊಡನೆ ಆಡಿ ಬೆಳೆಯುತ್ತಿದ್ದ ರಾಮಾಚಾರಿಯು ಬಡವನಾದರು ಬಾಲ್ಯದಲ್ಲಿ ಅದರ ಅನುಭವವಾಗದಂತೆ, ವರ್ಣೋದ್ಧಾರದ ವಾರಸುದಾರನಾದ ರಾಮಾಚಾರಿಯನ್ನು ತನ್ನ ತಾಯಿ ಪ್ರೀತಿಯಿಂದ ಸಾಕಿ ಅವನಿಗೆ ಯಾವಾಗಲೂ ತಿಂಡಿಯನ್ನು ನೀಡುತ್ತಿರುತ್ತಾಳೆ. ಬಾಲ್ಯದಲ್ಲಿ ಹೆಗ್ಗಡತನದ ಪಾತ್ರಕ್ಕಾಗಿ ತನ್ನಲ್ಲಿನ ತಿಂಡಿಯನ್ನು ಹಂಚಿ, ತಿನ್ನುವುದನ್ನು ಕಾಣಬಹುದು.

ಮಾನವನಿಗೆ ಹಂಚಿ ತಿನ್ನುವ ಬುದ್ಧಿ ಬಂದದ್ದೆ ಸರ್ವಸಿದ್ಧಿ ಎಂಬ ಲೋಕೋಕ್ತಿಯಂತೆ ಸಮಾಜದಲ್ಲಿ ಕೂಡಿ ಬಾಳುವ ಹಂಚಿ ತಿನ್ನುವ ಗುಣ ಸಮಾಜದ ಪರಸ್ಪರ ಹೊಂದಾಣಿಕೆಯನ್ನು ಹೇಳುತ್ತಾರೆ.

ಬಡವರಲ್ಲಿ ಹೆಚ್ಚಾಗಿ ಇರುವ ಹಂಚಿ ತಿನ್ನುವ ಗುಣ ಧನಿಕರಲ್ಲಿ ಕಾಣುವುದು ಅಪರೂಪವೇ ಹಿಂದಿನಿಂದಲೂ ಬಡವರನ್ನು ಬಡವರೆಂತೆಯೇ ನೋಡುವ ಶ್ರೀಮಂತರು ಬಡವರ ಏಳಿಗೆಗೆ ಕಾರ್ಯ ಕೈಗೊಂಡದ್ದು ಕಡಿಮೆಯೋ ಅಥವಾ ಬೆರಳೆಣಿಕೆಯಷ್ಟನ್ನಬಹುದು. ಪರಕೀಯರು ಬಂದು ಲಾಭಿ ಹೊಡೆದರೂ ತನ್ನೊಳಗಿನ ಜನಕ್ಕೆ ಬಡವರಿಗೆ, ನಿರ್ಗತಿಕರಿಗೆ ನೀಡದೆ ಸಂಪತ್ತು ಕೆಲವರಲ್ಲಿಯೇ ಕ್ರೋಢಿಕೃತವಾಗಿರುವ ದುರಂತ ಸಮಾಜದ ಬದುಕಿಗೆ ಸಾಕ್ಷಿಯಾಗಿದೆ. ತನ್ನ ತಾಯಿಯು ಯಾರಿಗೂ ಕೊಡಬೇಡ ನೀನೆ ತಿನ್ನು ಎಂದರೂ ರಾಮಾಚಾರಿ ಮಾತ್ರ ಯಾರಿಗೂ ಕೊಡದೆ ಬದುಕಿನ ಸ್ವಾರ್ಥಿಯಲ್ಲ.

ರಾಮಚಾರಿಯು ಹುಟ್ಟುವುದಕ್ಕೆ ಮುಂಚೆ ಪಿತೃವಿಹೀನ ಮತ್ತು ಕಡು ಬಡವನಾಗಿದ್ದನು. ಆದರೆ ತನ್ನ ಬಡತನದ ಅರಿವು ಅವನಿಗಿರಲಿಲ್ಲ. ಮಕ್ಕಳಿರುವುದಿಲ್ಲ. ಆದರೂ ಅವನ ಜೇಬೊಳಗೆ ತಿಂಡಿ ತುಂಬಿದ್ದರಿಂದ ಜೊತೆಗಾರ ಮಕ್ಕಳ ಪಾಲಿಗೆ ಪುಣ್ಯವಂತನು ಕುಬೇರನು ಆಗಿದ್ದನು ಎನ್ನಿಸುತ್ತದೆ. ಅವನ ಜೇಬು ಅವಲಕ್ಕಿ, ಹುರಿಗಡೆಲೆ, ನೆಲೆಗಡಲೆ, ಕೊಬ್ಬರಿ ಬೆಲ್ಲ, ಇವು ಯಾವಾಗಲೂ ತುಂಬಿರುತ್ತಿದ್ದವು. ಅವನ ತಾಯಿ ಆತನನ್ನು ಪ್ರೇಮದಿಂದ ನೋಡುತ್ತಿದ್ದಳು ಎಂಬುದು ತಾಯಿ-ಮಕ್ಕಳನ್ನು ಸಾಕುವ ಸಲಹುವ ಸಾಮಾಜಿಕ ಮೌಲ್ಯಗಳಲ್ಲೊಂದು ಅವರು ಬಡವರಾದರೂ ರಾಮಚಾರಿಯ ತಾಯಿ ಕಷ್ಟ ಪಟ್ಟು ತನ್ನ ಮಗುವನ್ನು ಸಾಕುತ್ತಾಳೆ. ತಾನೂ

ಹಸಿದಿದ್ದರೂ ತನ್ನ ಮಗನಿಗೆ ಕೊರತೆಯಾಗದಂತೆ ಕಾಯುವ ಮಾನವೀಯ ಕಳಕಳಿ ಎದ್ದು ಕಾಣುತ್ತದೆ.

ರಾಮುವೋ ಕರ್ಣನಂತೆ ತನ್ನ ನಾಶವನ್ನು ತಾನೇ ಕಾಣದಷ್ಟರ ಮಟ್ಟಿಗೆ ಉದಾರಿಯು ಎಂಬುದನ್ನು ಮಹಾಭಾರತದ ಕರ್ಣನಿಗೆ ಹೋಲಿಸಿದ್ದಾರೆ. ಇಲ್ಲಿ ರಾಮಾಚಾರಿಯು ದಾನಶೀಲನೂ, ಮಾನವೀಯ ಕಳಕಳಿಯುಳ್ಳವನು ಆಗಿ ತೋರುತ್ತಾನೆ. ತನ್ನ ಸ್ಥಿತಿಯನ್ನು ನೆನೆದುಕೊಂಡರೆ ಅವನು ಏನೂ ಕೊಡಲು ಶಕ್ತನಲ್ಲ. ಆದರೂ ತನ್ನಲ್ಲಿರುವುದನ್ನು ಹಂಚಿ ತಿನ್ನುವ ಗುಣ, ಇದ್ದುದ್ದನ್ನು ಇತರರಿಗೆ ನೀಡುವ ಗುಣ ಅವನಲ್ಲಿನ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ರಾಮುವಿಗೆ ಹದಿನಾರು ವರ್ಷ ತುಂಬಿದಾಗ ಬಡತನದ ಅರಿವು ಸ್ವಲ್ಪ ಹುಟ್ಟಿತು. ಬಾಲ್ಯದ ಯಾವುದೇ ನೋವನ್ನು ಅನುಭವಿಸದ ರಾಮುವಿಗೆ ನಂತರ ಅವನು ಬೆಳೆದಂತೆ ತನ್ನ ಸುತ್ತಲಿನ ಸಾಮಾಜಿಕ ಬದುಕು ಅರಿವಿಗೆ ಬರುತ್ತದೆ. ತನ್ನ ಮನೆಯ ಸ್ಥಿತಿಗತಿಯನ್ನು ತಿಳಿಯುವ ಬದುಕಿನ ವಾಸ್ತವಾಂಶಗಳನ್ನು ಅರ್ಥಮಾಡಿಕೊಳ್ಳುವ ಮನಸ್ಸಿನ ಪಕ್ವತೆಯನ್ನು ಪಡೆದಿದ್ದಾನೆ. ಆದರೂ ಬಾಲ್ಯದಿಂದಲೂ ಆಡಿ ಬೆಳೆದ ಇವನು ಕ್ರಮೇಣ ಸ್ನೇಹಿತರೊಡನೆ ಆಡುತ್ತಾ ಕುಣಿಯುವ ಆಸೆಗೆ ದಕ್ಕೆಯುಂಟಾಗುತ್ತಿತ್ತು. ತಾಯಿಯ ಮೇಲಿನ ಪ್ರೀತಿ ಹೇಗಿದೆಯೋ ಅಂತೆಯೇ ಭಯವು ಇದ್ದು ತನ್ನ ತಾಯಿ ಹೇಳಿದ ಕಾರ್ಯಗಳನ್ನು ಚಾಚೂ ತಪ್ಪದೇ ಮಾಡುತ್ತಿದ್ದನು.

ಆಹಾರಕ್ಕಾಗಿ ಧಾನ್ಯವನ್ನೋ, ಹಣವನ್ನೋ ತರಲು ಕಣದಿಂದ ಕಣಕ್ಕೆ ಅಲೆಯುತ್ತಿದ್ದುದು ಸುಗ್ಗಿಯ ಕಾಲದಲ್ಲಿ ಆತ ಹಳ್ಳಿಯಿಂದ ಹಳ್ಳಿಗೆ ತಿರುಗಾಡಿದ್ದುದು ಉತ್ಸಾಹಿ ಯುವಕನ ಮನಸ್ಸಿನ ಮೇಲೆ ಗೆಳೆಯರೊಳಗೆ ಕೂಡಿ ಬೆಳೆಯದೆ ಆಡಲು ಹಂಬಲಿಸುವ ಮನಸ್ಸಿಗೆ ದಕ್ಕೆಯೊಡ್ಡುತ್ತಿತ್ತು. ಆದರೂ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದನು.

ತನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ರಾಮು ತನ್ನ ತಾಯಿಯು ನೆರೆಮನೆಗೆ ಬೀಸುವುದಕ್ಕೆ ಹೋಗುವಾಗ ರಾಮುವಿನ ಕಂಗಳು ಕಂಬನಿ ತೋಯ್ಯುತ್ತಿದ್ದವು ಎಂಬ ಮಾನವೀಯ ಅಂತಃಕರಣದ ಪ್ರಜ್ಞೆ ಎಚ್ಚರಿಸುತ್ತದೆ. ತಾವು ಕೂಡ ಸಮಾಜದ ಇತರ ಜನರಂತೆ ಬದುಕಬೇಕು. ಬಾಳಬೇಕು. ಸಮಾಜಮನ್ನಣೆ ಪಡೆದು ಗೌರವದಿಂದ ಬದುಕಬೇಕು ಎಂಬ ಜೀವನದ ಬವಣೆಯನ್ನು ರಾಮಾಚಾರಿಯ ಮೂಲಕ ಪ್ರಬಂಧಕಾರರು ಸಮಾಜಕ್ಕೆ ತೆರೆದು ತೋರಿಸುತ್ತಾರೆ. ರಾಮುವಿಗೆ ೧೮ವರ್ಷ

ತುಂಬಿದಾಗ ತಾಯಿಯು ಸಂಸಾರಿಕ ಬದುಕಿನ ಅಥವಾ ಕೌಟುಂಬಿಕ ಬದುಕಿನ ಹೊರೆಯನ್ನು ಕಾರ್ಯಗಳನ್ನು ನೆರವೇರಿಸಲು ಆತನಿಗೆ ಕುಟುಂಬದ ಜವಾಬ್ದಾರಿಯನ್ನು ಹೊರಿಸುವ ಪ್ರಯತ್ನದಲ್ಲಿದ್ದಾಳೆ. ಆದ್ದರಿಂದಲೇ ಆತನ ತಂದೆಯ ಶ್ರದ್ಧಾಕಾರ್ಯಕ್ಕೆ ದವಸ ಧಾನ್ಯಗಳನ್ನು ತರಲು ಆತನನ್ನು ತನ್ನ ಸಂಬಂಧಿಕರ ಮನೆಗೆ ಕಳುಹಿಸುವ ಪ್ರಯತ್ನದಲ್ಲಿದ್ದಾಳೆ.

ಜಾತಿಯಿಂದ ಮೇಲಸ್ಥರದವರಾದರೂ ಅವರಲ್ಲೂ ಬಡವರು, ನಿರ್ಗತಿಕರು ಇರುವುದನ್ನು ಸಮಾಜದ ಏಕಮುಖ ದೃಷ್ಟಿಕೋನವನ್ನು ತಿರಸ್ಕರಿಸುತ್ತಾ ಎಲ್ಲ ಜಾತಿ ಜನರಲ್ಲೂ ಬಡವರಿದ್ದಾರೆ. ಅವರಿಗೆ ಸಿಗುವ ಸೌಲಭ್ಯಗಳು ಸಿಗಬೇಕೆಂದು ಅಂತೆಯೇ ಮೂಲಭೂತ ಅಗತ್ಯತೆಗಳು ಅವರಿಗೂ ದೊರಕಬೇಕೆಂಬುದನ್ನು ಪ್ರಬಂಧಕಾರರು ಸಮಾಜಕ್ಕೆ ತೋರಿಸುತ್ತಾರೆ.

ರಾಮುವಿನ ತಲೆಯನ್ನು ಸ್ನೇಹದಿಂದ ತಡಹುತ್ತಾ ಅವನ ತಾಯಿಯು ಹೀಗೆಂದಳು. ರಾಮು ನಾಡಿದ್ದು ನಿಮ್ಮಪ್ಪನ ಶ್ರಾದ್ಧವಪ್ಪ, ಮನೆಯಲ್ಲಾದರೋ ಏನೇನು ಇಲ್ಲ. ಒಂದು ಕಾಳು ಅಕ್ಕಿ ಸಹ ಇಲ್ಲ, ನಿಮ್ಮ ದೊಡ್ಡಮ್ಮನ ಹಳ್ಳಿಗೆ ಹೋಗು ಏನಾದರೂ ತೆಗೆದುಕೊಂಡು ಬಾ ಮಗು. ನೀನು ಅವರ ಮನೆಗೆ ಹೋಗಿ ಎಷ್ಟು ದಿನವಾಯ್ತು. ಎಂಬ ಮಾತಿನಲ್ಲಿ ಅವರ ಪರಿಸ್ಥಿತಿಯನ್ನು ದಿನ ನಿತ್ಯದ ಅನ್ನ, ಆಹಾರವನ್ನು ಪೂರೈಸಿ ಕೊಳ್ಳುವುದೇ ಕಷ್ಟವಿರುವಾಗ ಸಮಾಜದಲ್ಲಿ ರೂಡಿಗತವಾಗಿ ಬಂದ ನಂಬಿಕೆ ಆಚರಣೆ ಪೋಷಣೆಗಳು ಸಮಾಜದ ಸಂಕೀರ್ಣಬದುಕನ್ನು ರೂಪಿಸಿ, ಮಾನವನ ಬದುಕಿನ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ನಿತ್ಯ ಆಹಾರ ಪೂರೈಕೆಯ ಸ್ಥಿತಿಯೇ ಶೋಚನೀಯವಾಗಿರುವ ಯಾವುದೇ ಕಾಲದಲ್ಲಿ ಸತ್ತ ಗಂಡನ ವಾರ್ಷಿಕ ಶ್ರಾದ್ಧವನ್ನು ಮಾಡುವುದು ಅರ್ಥಹೀನವಾದದ್ದು ಎನ್ನಿಸುತ್ತದೆ. ಆದರೂ ಸಮಾಜ ಒಪ್ಪಿತವನ್ನಾಗಿ ಮಾಡಿರುವ ಕಾರ್ಯವನ್ನು ಮಾಡಲೇಬೇಕು. ಮಾಡದೇ ಇದ್ದರೆ ತನ್ನ ಸುತ್ತಲಿನ ನೆರೆಯ ಸಂಬಂಧಿಕರಿಂದ ಅವಗಣನೆಗೆ ಒಳಗಾಗಬೇಕು. ಇಲ್ಲಿ ಸಾಮಾಜಿಕ ಬದುಕನ್ನು ಆ ಸಾಮಾಜಿಕ ಒಪ್ಪಂದದೊಂದಿಗೆ ಒಳಗಾಗಿ ಅದಕ್ಕೆ ಬದ್ಧವಾಗಿ ನಮ್ಮ ನಡೆಯನ್ನು ರೂಪಿಸಿಕೊಳ್ಳಬೇಕು ಎಂಬುದನ್ನು ಪು.ತಿ.ನ. ಅವರು ತಿಳಿಸುತ್ತಾರೆ. ಅಂತಹ ಶ್ರಾದ್ಧಕಾರ್ಯದಿಂದ ತನ್ನ ಮನೆಗೆ ಮಗನಿಗೆ ಒಳ್ಳೆಯದಾಗಬೇಕೆಂದು ಬಯಸಿದಂತೆ, ಶ್ರಾದ್ಧ ಕಾರ್ಯದ ದಿವಸ ರಾಮಾಚಾರಿಯು ತನ್ನ ಪ್ರಾಣವನ್ನು ಕಳೆದುಕೊಳ್ಳುವುದು,

ಹಾಗೂ ಆತನ ತಾಯಿಯ ರೋಧನೆ ಕರಳು ಕಿವುಚುವಂತಹ ಹೃದಯ ವಿದ್ರಾವಕ ಪೂಜನೆಯಾಗಿ ಕಾಡುತ್ತದೆ.

ಆ ದಿವಸ ರಾಮಾಚಾರಿಯು ಲಾಂದ್ರವನ್ನು ಒಂದು ಕೈಯಲ್ಲಿ, ಚೆಂಬನ್ನು ಇನ್ನೊಂದು ಕೈಯಲ್ಲಿ ಹಿಡಿದುಕೊಂಡು ಹೊರಕ್ಕೆ ಬಂದನು. ಜನಿವಾರವನ್ನು ಕಿವಿಗೆ ಸಿಕ್ಕಿಸಿಕೊಂಡು ಲಾಂದ್ರವನ್ನು ಕೆಳಗಿಟ್ಟು ಸ್ವಲ್ಪ ದೂರ ಹೋಗಿ ಕುಳಿತುಕೊಂಡನು. ಲಾಂದ್ರ ದೀಪ ಬೆಳಕಿನ ಸಂಕೇತವಾಗಿ ಕಂಡರೂ ಅದರ ಹಿಂದಿನ ಕರಿನೆರಳು ಅಪಾಯದ ಭೀತಿಯನ್ನು ಸೂಚಿಸುವುದಾಗಿದೆ.

ಲಾಂದ್ರವು ಬೆಳಕಿಗಿಂತಲೂ ನೆರಳನ್ನು ಹೆಚ್ಚಾಗಿ ಚೆಲ್ಲಿತ್ತು. ರಾಮುವಿಗೆ ತನ್ನ ಕಾಲಿನ ಕೆಳಗೆ ಯಾವುದೋ ಮೆತ್ತಗಿರುವ ವಸ್ತುವು ನುಲಿಯುವ ಅನುಭವ ಮಾತ್ರವಾಯಿತು. ಮಾರುತನ ಸುಖ ಸ್ಪರ್ಶಕ್ಕೆ ಮೋಹಿಸಿ ಬಿಲದಿಂದ ಹೊರಕ್ಕೆ ಬಂದಿರುವ ಒಂದು ಸರ್ಪದ ಮೇಲೆ ರಾಮುವು ಕುಳಿತು ಬಿಟ್ಟನು. ತಕ್ಷಣ ಸ್ವಲ್ಪ ಬೆದರಿ ಒಂದು ಸಲ ಹಾವು ಸುತ್ತಿದ್ದ ಕಾಲನ್ನು ಝಾಡಿಸಿ ಒದರಿದನು. ಹಾವು ಸ್ವಲ್ಪದೂರದಲ್ಲಿ ಬಿದ್ದಿತು. ಆದರೆ ಮರುಕ್ಷಣವೇ ಅಂಚಿನ ಮೊಗದಿಂದ ಹಿಂದಿರುಗಿ ರಾಮುವನ್ನು ಕಚ್ಚಿತು. ಸಾಮಾಜಿಕ ಸಂಕೀರ್ಣ ಬದುಕಿನಲ್ಲಿ ಒಂದನ್ನು ಬಿಡಿಸಿಕೊಳ್ಳಲು ಅಥವಾ ಒಂದರಿಂದ ಹೊರಬಂದು ಮತ್ತೊಂದು ಹೊಸದನ್ನು ಸ್ವೀಕರಿಸುವ ಸಂದರ್ಭದಲ್ಲಿ ತನಗೆ ಅರಿವಿಲ್ಲದೆ ಬಂದೆರಗುವ ಸಾಮಾಜಿಕ ಅಪಾಯಗಳು ತನ್ನನ್ನು ಸುತ್ತುವರಿದು ತನ್ನೊಳಗೆ ಸೇರಿಸಿಕೊಳ್ಳುವ ಸಾಂಪ್ರದಾಯಿಕ ಸ್ಥಿತಿಯನ್ನು ರಾಮುವಿನ ಮೂಲಕ ಆತನ ತಂದೆಯ ಶ್ರಾದ್ಧಕಾರ್ಯದ ಮೂಲಕ ಬದುಕು ಮಾನವನ ಅಂತರ ಸಂಕೀರ್ಣ ಸಂಬಂಧಗಳನ್ನು ಪು.ತಿ.ನ. ಅವರು ಸಮಾಜಕ್ಕೆ ತೆರೆದು ತೋರಿಸಿದ್ದಾರೆ.

ಪು.ತಿ.ನ. ಅವರ ಒಂದೊಂದು ಪ್ರಬಂಧಗಳು ಒಂದೊಂದು ರೀತಿಯ ಸಾಮಾಜಿಕ ಬದುಕನ್ನು ರೂಪಿಸುತ್ತವೆ. ಶ್ರೀ ಮತೇ ರಾಮಾನುಜಚಾರ್ಯನಮಃದಲ್ಲಿ ಧಾರ್ಮಿಕ ಪುನರುದ್ಧಾರಕರಾದ ಶಂಕರ, ರಾಮಾನುಜ, ಮಧ್ವಾಚಾರ್ಯರು ಹಿಂದೂ ಧರ್ಮದ, ಹಿಂದೂ ಸಮಾಜ ಉದ್ಧಾರಕ್ಕಾಗಿ ಹಿಂದೂ ಸಾಮಾಜಿಕ ಆಧ್ಯಾತ್ಮಿಕ ಬದುಕನ್ನು ಕಟ್ಟಿಕೊಡಲು ಶ್ರೀ ರಾಮಾನುಜಚಾರ್ಯರ ಬದುಕನ್ನು ಅವರ ಬದುಕಿನ ಮೂಲಕ ಸಾಮಾಜಿಕ ಸ್ಥಿತಿಗತಿಯನ್ನು ಪ್ರಬಂಧಗಳಲ್ಲಿ ವಿವರಿಸುತ್ತಾರೆ.

ಶ್ರೀ ರಾಮಾನುಜರು ಅನುಸರಿಸಿದ ಆಶ್ರಯ ನೀತಿಯನ್ನು ಈ ರೀತಿ ನಿರೂಪಿಸುತ್ತಾರೆ. ಅಬ್ರಾಹ್ಮಣರಾದ ತಿರುಕ್ಕಿ ನಂಬಿಯನ್ನು ಆಶ್ರಯಿಸಿದ ಬಗೆ

ಗೋಪುರದಿಂದ ಮೂಲ ಮಂತ್ರವನ್ನು ಊರಿನವರೆಲ್ಲ ಉದ್ಧಾರವಾಗಲೆಂದು ಎಚ್ಚರಿಸಿದ ದಿಟ್ಟತನ, ಇವರನ್ನು ನೋಡು ಅಸ್ಪೃಶ್ಯರನ್ನು ಕಂಡರೆ ಅವರನ್ನು ಅನುಕಂಪದಿಂದ ನೋಡು, ನಮ್ಮಾಳ್ವರ ಭಕ್ತಿನೋಡು, ಎಂಬ ಮಾತುಗಳನ್ನಾಡುತ್ತಾರೆ. ಜಾತಿ ಶ್ರೇಣಿಕರಣದಿಂದ ಕೂಡಿರುವ ಭಾರತೀಯ ಸಮಾಜದಲ್ಲಿ ಜಾತಿಯ ಅಂತರ ಸಂಬಂಧವನ್ನು ಜಾತಿಯನ್ನು ಮೀರಿ ಒಂದಾಗುವ ಪ್ರಕ್ರಿಯೆಯನ್ನು ರಾಮಾನುಜರು ಅಸ್ಪೃಶ್ಯರಿಗೆ ತೋರಿದ ಆದರದ ಅನುಕಂಪದಂತೆ ಸಮಾಜದ ಜನರು ಅನುಕರಿಸಬೇಕು. ಬದುಕಬೇಕು ಎಂಬುದು ಪ್ರಬಂಧಕಾರರ ಆಶಯವಾಗಿದೆ.

'ನಾರಾಯಣನ ಗುಡಿ' ಎಂಬ ಪ್ರಬಂಧದಲ್ಲಿ ತನ್ನ ಅಂತರಂಗದ ಅನುಭವ ಹಂಚಿಕೆಯಾಗಿ ಪರಸ್ಪರ ಕ್ರಿಯೆಯಾಗಿ ತನ್ನ ಗೆಳೆಯನೊಡನೆ ಸಂಬಂಧದ ಮೂಲಕ ಮನುಷ್ಯ ಸಮಾಜ ಜೀವಿ. ಏಕಾಂಗಿಯಾಗಿ ಬದುಕಲಾರ, ತನ್ನ ಅನುಭವ, ಅನಿಸಿಕೆಗಳನ್ನು ಇನ್ನೊಬ್ಬರೊಡನೆ ಹಂಚಿಕೊಳ್ಳಬೇಕು. ಇಲ್ಲದಿದ್ದರೆ ಅವನು ಪ್ರಾಣಿಗಳಂತಾಗಿ ಬಿಡುತ್ತಿದ್ದನು. ಈ ಅನುಭವ ಹಂಚಿಕೆಗಾಗಿ ಬೆಳೆದ ಸಂವಹನ, ಮಾತುಗಾರಿಕೆಯಾಗಿ ಬೆಳೆಯಿತು. ನಂತರ ಮೌಖಿಕವಾದುದಲ್ಲದೆ ಲಿಖಿತ ಸಾಹಿತ್ಯದ ಮೂಲಕವು ಅಂತರಂಗದ ಅಭಿವ್ಯಕ್ತಿ ಸಾಧ್ಯ. ತನ್ನ ಅನಿಸಿಕೆಗಳನ್ನು ಕಥೆ, ಕಾದಂಬರಿ ಪ್ರಬಂಧದ ಮೂಲಕ ವ್ಯಕ್ತಪಡಿಸಲಾಗುತ್ತದೆ. ಇಲ್ಲಿ ಪ್ರಬಂಧಕಾರರು ತಾನು ಬರೆದ 'ನಾರಾಯಣನ ಗುಡಿ' ಎಂಬ ಪ್ರಬಂಧವನ್ನು ಶಿವನಿಗೆ ಹೇಳುತ್ತಾರೆ. ಓದಿ ಮುಗಿಸಿದ ನಂತರ ಅದು ಹೇಗಿದೆ ಎಂದು ಹೇಳಿ ಅದಕ್ಕೆ ಪ್ರತಿಕ್ರಿಯೆ ಪಡೆಯುವ ಹಂಬಲವನ್ನು ಹೊಂದಿದ್ದಾರೆ.

ಬರಹಕ್ಕೆ ಸಂಬಂಧಿಸಿದಂತೆ ನಿನ್ನ ಪ್ರಶ್ನೆ ಎಂದ ಶಿವ. ಅದಕ್ಕೆ ಪ್ರಬಂಧಕಾರರು ಅನುಭವ ಬೇರೆಯೆ ಬರಹ ಬೇರೆಯೇ ಎಂದೆ, ನಾನು ಪ್ರಬಂಧಕಾರನ ಮನಸ್ಥಿತಿಯು ನುಡಿದಂತೆ ನಡೆಯುವ ಬದುಕಿನ ಬದ್ಧತೆ, ಸಾಮಾಜಿಕ ಬದ್ಧತೆಯನ್ನು ೧೨ನೇ ಶತಮಾನದ ಶರಣರಂತೆ ನುಡಿ ನಡೆಯು ಒಂದಾಗಬೇಕು. ಆಗಲೇ ಸಮಾಜದ ಮಾನ್ಯತೆಗೆ ಸ್ವೀಕಾರ್ಹ ಆದರೆ ಶಿವ ಹೇಳುವ ಮಾತನ್ನು ಕೇಳಿದಾಗ ಆಘಾತವೆನಿಸುತ್ತದೆ. ಅನುಭವ ಬೇರೆಯೆ ಬರಹವೂ ಬೇರೆಯೇ ಎಂದು ಹೇಳಿ ಹಸು ಕರುವಿನ ಉದಾಹರಣೆ ನೀಡುತ್ತಾನೆ, ಕರು ನೋಡು ಅದು ಬಡಕಲಾಗಿದೆ. ಅದು ಅದರ ತಪ್ಪಲ್ಲ ಅದನ್ನು ನೀವು ಚೆನ್ನಾಗಿ ನೋಡಿಕೊಂಡಿಲ್ಲ ಎಂಬ ಮಾತನ್ನು ಅನುಭವವನ್ನು ಕರುವಿನ

ಉದಾಹರಣೆಯಾಗಿ ನೀಡುತ್ತಾರೆ. ಮತ್ತು ಸಮಾಜ ಆಂತರ್ಯದ ಅಭಿವ್ಯಕ್ತಿಯಾಗಿ ಮನುಷ್ಯನ ಮನೋಭಾವಗಳನ್ನು ವ್ಯಕ್ತಪಡಿಸಿದ್ದಾರೆ.

'ರಥಸಪ್ತಮಿ' ಎಂಬ ಪ್ರಬಂಧವು ಗತಕಾಲದ ಬಗೆಗಿನ ಹಳಹಳಿಕೆಯ ಹಾಗೆ ಕಂಡು ಬರುತ್ತದೆ. ಅಂದರೆ ಇಂದಿಗೂ ಇರುವ ಸಾಮಾಜಿಕ ಅಂತರವನ್ನು ವಿವೇಚಿಸುವುದಷ್ಟೇ ಈ ಪ್ರಬಂಧದ ಉದ್ದೇಶವಾಗಿಲ್ಲ. ಅಂತರ್‌ಜ್ವರವೊಂದು ಜನಜೀವನವನ್ನು ಹೊಕ್ಕ ಅದನ್ನು ಶೋಷಿಸುತ್ತಿರುವ ಬಗ್ಗೆ ಓದುಗರ ಗಮನ ಸೆಳೆಯುವುದು ಲೇಖಕರ ಉದ್ದೇಶವಾಗಿದೆ.

'ತೆಲೆಯೋ ಹೊಟ್ಟೆಯೋ' ಎಂಬ ಅತ್ಯಂತ ಅರ್ಥಗರ್ಭಿತವಾದ ಪ್ರಬಂಧದಲ್ಲಿ ಆಧುನಿಕ ವಿದ್ಯಾಭ್ಯಾಸ ಕ್ರಮ ತಲೆಯನ್ನು ಹೊಟ್ಟೆಯೊಳಕ್ಕೆ ತುರುಕುವ ಯಂತ್ರಾಗಾರವಾಗಿದೆ. ಹೊಟ್ಟೆಯ ಸೆಳವಿನಿಂದ ನಮ್ಮ ತಲೆಯನ್ನು ಬಿಡಿಸಿಕೊಳ್ಳುವುದೇ ನಿಜವಾದ ವಿದ್ಯೆ ಎಂದಿದ್ದಾರೆ.

ಹಾಗಾಗಿ 'ರಥಸಪ್ತಮಿ'ಯಲ್ಲಿ ಕಾಣುವಂಥ ಮುಗ್ಧ ತನ್ಮಯತೆ ಇರಬಹುದು. 'ಬೀದಿಯ ಬಸವ' ಪ್ರಬಂಧದಲ್ಲಿ ಕಾಣುವಂತಹ ತಿಳಿಹಾಸ್ಯ ಇರಬಹುದು. 'ಮಸಾಲೆದೋಸೆ' ಪ್ರಬಂಧದ ಚುರುಕಾದ ಮುಸುಕಿನ ಮರೆಯ ವ್ಯಂಗವಿರಬಹುದು. 'ಯದುಗಿರಿಯ ಗೆಳೆಯರು' ಪ್ರಬಂಧದ ಆತ್ಮೀಯ ವ್ಯಕ್ತಿ ಚಿತ್ರಣವಿರಬಹುದು. ಹೀಗೆ ಪು.ತಿ.ನ. ಅವರ ಪ್ರಬಂಧಗಳಲ್ಲಿ ಪ್ರಚಲಿತ ವಿಷಯಗಳೊಡನೆ ಸಾಮಾಜಿಕ ಪ್ರಜ್ಞೆಯು ಅನವರತವಾಗಿ ಹರಿದು ಬಂದಿದೆ.

ಕಪ್ಪೆ ಎಂಬ ಪ್ರಬಂಧದಲ್ಲಿ ಮನುಷ್ಯನ ಸಾಮಾಜಿಕ ಆಂತರ್ಯದಲ್ಲಿ ಬದಲಾವಣೆಗಳು ಸ್ಥಿರಗೊಂಡ ಸಾಮಾಜಿಕ ಜಡವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ. ಯದುಗಿರಿಯಲ್ಲಿ ಶ್ರೀರಾಮಾನುಜರ ಬದುಕು ಅವರು ಅವರ ಸ್ನೇಹಿತರಿಗೆ ಅಲ್ಲೆ ವಾಸಿಸಲು ಹೇಳುತ್ತಿದ್ದರು. ಎಂಬುದು ಆ ಸ್ಥಳದ ಮೇಲಿನ ಪ್ರೇಮ ಅದರ ಅಂತರ ಸಂಬಂಧವನ್ನು ಆ ಸ್ಥಳದ ಅವಿನಾಭಾವ ಸಂಬಂಧವನ್ನು ಹೇಳುತ್ತಾರೆ. ಜನಸಂಖ್ಯೆ ಹೆಚ್ಚಾದಂತೆ ನಗರೀಕರಣದ ಪ್ರಭಾವ ಮೇಲುಕೋಟೆಯ ಮೇಲಾಗಿದೆ. ಸಂಸ್ಕೃತಿಕರಣದ ವೈಭವೀಕತೆಯಲ್ಲಿ ಮೆರೆದ ಸ್ಥಳ ಜನಸಾಮಾನ್ಯರಿಗೆ ಈ ಕಾಲಘಟ್ಟದ ಚಿಂತನೆ ತೆರೆದುಕೊಳ್ಳಬಹುದು. ಅದು ನಗರವಾಗಿ ಆಧುನಿಕ ಸೌಲಭ್ಯಗಳನ್ನು ಪಡೆದುಕೊಳ್ಳುತ್ತ ತನ್ನ ಹಿಂದಿನ ಪ್ರಸಿದ್ಧಿಯನ್ನು ಕಳೆದುಕೊಳ್ಳುವ ಆತಂಕ ವ್ಯಕ್ತಪಡಿಸಿದ್ದಾರೆ. ಪಾಳು ಬಿದ್ದಿರುವ ನೆಲದಲ್ಲಿ ಆ ಊರಿನ ಸಿರಿವಂತರು ಸೇರಿ ಊರಿನವರಿಗೆ ಆಶ್ರಯ

ಕಲ್ಪಿಸಿಕೊಡಬೇಕೆಂಬುದು ಪ್ರಬಂಧಕಾರರ ಹಂಬಲ. ಅಂದರೆ ತಾರತಮ್ಯವನ್ನು ಕಡೆಗಾಣಿಸಿ ಎಲ್ಲರೂ ಒಂದಾಗಿ ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಪು.ತಿ.ನ. ಅವರು ಕರೆ ಕೊಡುತ್ತಿದ್ದಾರೆ.

ಪುರಾಣದ ಕಥೆಗಳಂತೆ ಪಂಚ ತಂತ್ರ ಕಥೆಗಳಂತೆ ಇಲ್ಲಿ ಪ್ರಾಣಿ, ಪಕ್ಷಿ ಮಾನವನ ಸಂಬಂಧವನ್ನು ಬೆಸೆದುಕೊಂಡ ರೀತಿಯನ್ನು ಪು.ತಿ.ನ. ಅವರು ವ್ಯಕ್ತಿಪಡಿಸುತ್ತಾರೆ. ಅವರೇ ಹೇಳುವಂತೆ ಹಿಂದಿರುಗಿ ಪ್ರಾಣಿಗಳೊಡನೆ ವಾಸಿಸುತ್ತಾ ಇದ್ದು ಬಿಡೋಣ ಎಂಬ ಮಾತು ಪರಿಸರ ಪ್ರಕೃತಿಯ ನಡುವಿನ ಮತ್ತು ಮಾನವನ ಸಂಬಂಧವನ್ನು ಕುರಿತು ಹೇಳುತ್ತವೆ.

ಮನುಷ್ಯ ಮಾಡಿಕೊಂಡ ದೇವರು, ಧರ್ಮ, ಜಾತಿ, ಇತರೆ ಅನಾಚಾರ ನಂಬಿಕೆಗಳು ಮನುಷ್ಯನಲ್ಲಿ ಸಮಾಜದ ಬಿರುಕನ್ನು ಉಂಟು ಮಾಡುತ್ತದೆ. ಇದರಿಂದ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತವೆ. ಪ್ರಾಣಿಗಳಂತೆ ಜಾತಿ-ಮತ-ಮರೆತು ಮಾನವ ಸಮಾಜ ನಿರ್ಮಾಣಕ್ಕೆ ಒತ್ತು ಕೊಡುತ್ತಾರೆ. ಧಾರ್ಮಿಕ ಪುರುಷರ ಬದುಕಿಗಿಂತ ಕಪ್ಪೆಗಳ ಬದುಕೇ ಮೇಲು ಎಂಬ ಮಾತಲ್ಲಿ ಅವರಲ್ಲಿನ ಆಂತರ್ಯ ಹಾಗೂ ಬಾಹ್ಯ ಬದುಕಿನ ವಿಭಿನ್ನತೆಯನ್ನು ಹೇಳುತ್ತಾರೆ. ಅಗೋ ನಿಮ್ಮ ವೈಕುಂಠನಾಥನನ್ನು ಆಶ್ರಯಿಸಿರುವ ಆಳ್ವಾರುಗಳಂತೆ ಈ ಪಾಚಿಯ ಮೇಲೆ ಬದುಕುವ ಈ ಮೂರು ಕಪ್ಪೆಗಳು ಹಾಯಾದುವಯ್ಯ ಎನ್ನುತ್ತಾರೆ. ಆದರೆ ಅವು ಒಂದರ ಮೇಲೊಂದು ಏರಿ ಕೆಳಗಿನದನ್ನು ತುಳಿಯುವ ಕಪ್ಪೆಗಳ ಚಿತ್ರಣ ನಮ್ಮ ಸಾಮಾಜಿಕ ವ್ಯವಸ್ಥೆಯ ಶ್ರೇಣಿಕೃತ ಸಮಾಜವನ್ನು ಬಿಂಬಿಸುತ್ತವೆ. ದ್ವೈತ, ಅದ್ವೈತಗಳಿಗಿಂತ ವಿಶಿಷ್ಟಾದ್ವೈತ ಇವುಗಳು ಒಂದಕ್ಕೊಂದು ಕೂಡಿ ಬೆಳೆಯುವುದಕ್ಕಿಂತ ಒಂದನ್ನು ಕಡೆಗಣಿಸಿ ಇನ್ನೊಂದು ಮೇಲೆರುವಂತಹ ನಾಯಕ ಪ್ರಧಾನವಸ್ಥೆಗೆ ತಲುಪಲು ಹೀನವಾದದ್ದು ಎಂಬುದನ್ನು ಹೇಳುತ್ತಾರೆ. ಶ್ರೇಣಿಕೃತ ಸಮಾಜವನ್ನು ಬಿಟ್ಟು ಧರ್ಮದೊಳಗೆ ಸಮಾನತೆ ಮತ್ತು ಸಮಾಜದ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಕಪ್ಪೆಯಂತೆ ಮೀನು ನೀರಿನಲ್ಲೇ ಬದುಕಿದರು ಕಪ್ಪೆಯ ಅಂತ;ಸತ್ವವನ್ನು ಪಡೆಯಲಾರದು ಎಂಬ ಮಾತಿನಲ್ಲಿ ದ್ವಿಜತ್ವ, ತ್ರಿಜತ್ವದ ನಡುವಿನ ಧಾರ್ಮಿಕ ಆಂತರ್ಯದಲ್ಲಿ ಪ್ರಭುತ್ವದ ಪ್ರತಿಷ್ಠಾಪನೆಗಾಗಿ ತನ್ನ ಮತಗಳ ಪ್ರತಿಷ್ಠಾಪನೆಗಾಗಿ ಜೀವನ ನಡೆಸುವ ಆಳ್ವಾರರು ಮತ್ತು ಇತರ ಮತಸ್ಥರು ಒಂದರೊಳಗೆ ಜೀವಿಸುವಂತಹದು.

ಬಾಹ್ಯ ಜಗತ್ತನ್ನು ತನ್ನ ಸೀಮಿತ ದೃಷ್ಟಿಯಿಂದ ಪರೀಕ್ಷಿಸುತ್ತದೆ ಎಂಬುದನ್ನು ಕಪ್ಪೆ ಮೀನುಗಳ ಉದಾಹರಣೆಯಲ್ಲಿ ಕಟ್ಟಿಕೊಡುತ್ತಾರೆ.

ಇಷ್ಟೇ ಅಲ್ಲದೆ 'ಶ್ಯಾಮನ ಘಟ್ಟ' ಎಂಬ ಪ್ರಬಂಧವು ಶ್ಯಾಮನ ವ್ಯಕ್ತಿತ್ವವು ಸಮಾಜದ ಎಲ್ಲ ಜಾತಿ ಜನರನ್ನು ಹೊಂದಿಕೊಳ್ಳುವ ಮಡಿ ಮೈಲಿಗೆಯನ್ನು ಮೀರುವ ಪ್ರಕ್ರಿಯೆಯನ್ನು ಶ್ಯಾಮನಲ್ಲಿ ಕಾಣಬಹುದು. ಎಲ್ಲಾ ಜಾತಿ ಜನರ ಮನೆ ಕೋಣೆಗಳನ್ನು ನಿರ್ಭಯವಾಗಿ ಮುಟ್ಟುವ ಓಡಾಡುವ ಧೈರ್ಯ ಅವನಲ್ಲಿ ಮಾತ್ರ ಎಂಬ ಮಾತು ಶ್ರೇಣಿಕೃತ ಸಮಾಜದಲ್ಲಿ ಕೆಲವರು ಮಾತ್ರ ಅದನ್ನು ಮೀರಲು ಸಾಧ್ಯ. ಮಿಕ್ಕೆಲ್ಲದವರ ಧಾರ್ಮಿಕ ಚೌಕಟ್ಟಿನಲ್ಲಿ ಬಂಧನದೊಳಗಡೆ ಸ್ಥಿರ ಸಾಮಾಜಿಕ ಬದುಕಿನ ವಿಧಾನಗಳ ಬಗ್ಗೆ ತಿಳಿಸುತ್ತದೆ. ಮತ್ತು 'ಬೆಟ್ಟದ ಮೇಲೆ' ಪ್ರಬಂಧದಲ್ಲಿ ಯದುಗಿರಿ ಅಂದರೆ ಮೇಲುಕೋಟೆಯ ಪ್ರಾಕೃತಿಕ ಚಿತ್ರಣ. ಅಲ್ಲಿನ ದೈವ ಕೇಂದ್ರ, ಆಚರಣೆಗಳ ಹಾಗೂ ಸಾಂಪ್ರದಾಯಿಕ ಬದುಕನ್ನು ಮೀರುವ ಎಲ್ಲ ಅಂಶಗಳನ್ನು ಕಾಣಬಹುದು.

ಒಟ್ಟಾರೆಯಾಗಿ ಎಲ್ಲ ಪ್ರಬಂಧಗಳು ನೋವನ್ನು ಅನುಭವಿಸುವ ತಳ ಸಮುದಾಯದ ಬಗ್ಗೆ, ಅವರ ಜೀವನ ಸಿದ್ಧತೆಯ ಬಗ್ಗೆ ಅವರ ಅಂತ;ಸತ್ವವನ್ನು ಸ್ಪರ್ಶಿಸುವಂತೆ ಚಿಂತಿಸಲಾಗಿದೆ. ಹಾಗಾಗಿ ಪು.ತಿ.ನ ಅವರು ವೈಧಿಕ ಬ್ರಾಹ್ಮಣರ ವೈಷ್ಣವರ ಯಾತ್ರಾ ಕೇಂದ್ರವಾದ ಮೇಲುಕೋಟೆ ಅಲ್ಲಿನ ಸುತ್ತ ಮುತ್ತಲಿನ ಸಮಾಜದ ಬಗ್ಗೆ ಬ್ರಾಹ್ಮಣರ ಆಚರಣೆ ಹಬ್ಬಗಳ ಬಗ್ಗೆ, ಅವರ ಆಧ್ಯಾತ್ಮ ಗುರುವಾದ ಶ್ರೀ ರಾಮಾನುಜರ ಬಗ್ಗೆ ವೈಭವಯುತವಾಗಿ ವರ್ಣಿಸಿದ್ದಾರೆ. ನಿರ್ದಿಷ್ಟವಾದ ಸೀಮಿತ ವ್ಯಾಪ್ತಿಯ ಸಮಾಜದ ಸಂಕೀರ್ಣ ಬದುಕಿನ ಅನುಭವದ ಸ್ಥಿತ್ಯಂತರಗಳು ಇವರ ಪ್ರಬಂಧದಲ್ಲಿ ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ಪ್ರತಿಬಿಂಬಿಸುತ್ತಾ ಮುನ್ನಡೆದಿದೆ ಎಂಬ ಆಶಯವನ್ನು ವ್ಯಕ್ತಪಡಿಸಬಹುದಾಗಿದೆ.

ಅಧ್ಯಾಯ ಆರು
ಉಪಸಂಹಾರ

ಪು.ತಿ.ನ. ಅವರು ಆಧುನಿಕ ಸಂದರ್ಭದಲ್ಲಿ ಬಹುದೊಡ್ಡ ಲೇಖಕರಾದರೂ ಅವರ ಸೃಜನ ಶೀಲ ಸಾಹಿತ್ಯದಲ್ಲಿ ಅಂದರೆ ಕಾವ್ಯ, ನಾಟಕ, ಪ್ರಬಂಧಗಳಲ್ಲಿ ವ್ಯಕ್ತಗೊಂಡಿರುವ ಧೋರಣೆಗಳಲ್ಲಿ ಅಗಾಧವಾದ ಅಂತರವಿದೆ. ಇವರು ಸಮಾಜ ಸಂಸ್ಕೃತಿಗಳನ್ನು ಕಂಡರಿಸಿದ ರೀತಿಯಲ್ಲಿ ಅನೇಕ ವ್ಯತ್ಯಾಸಗಳಿವೆ, ವೈರುದ್ಯಗಳಿವೆ, ಅದನ್ನು ಇದುವರೆವಿಗೂ (ಬೇರೆ–ಬೇರೆ ನೆಲೆಯಲ್ಲಿ) ಚರ್ಚೆ ಮಾಡಲಾಗಿದೆ. ಇಂತಹ ವೈರುದ್ಯಕ್ಕೆ ಕಾರಣಗಳನ್ನು ನಾವು ಲೇಖಕರ ಪರಿಸರ, ಸಾಮಾಜಿಕ ಹಿನ್ನೆಲೆ, ಶಿಕ್ಷಣ ಮುಂತಾದವುಗಳಲ್ಲಿ ಹುಡುಕಬಹುದು.

ಸೃಜನ ಶೀಲ ಲೇಖಕರಾದವರಿಗೆ ಪ್ರೇರಣೆ ಒದಗಿಸುವ ಬಹುರೂಪಿ ನೆಲೆಗಳಲ್ಲಿ ಅವರು ಬೆಳೆದ ಪರಿಸರ ಮುಖ್ಯವಾದದು. ನಮ್ಮ ದೇಶದ ಪರಿಸರವೆಂದರೆ ಒಂದು ರೀತಿಯಲ್ಲಿ ಜಾತಿ, ವರ್ಗ, ಪಡೆದ ಚಿತ್ರಣಗಳೆಲ್ಲವೂ ಸೇರುತ್ತವೆ. ಸೃಜನಶೀಲ ಲೇಖಕರಾದವರು ಮಾನವೀಯ ದೃಷ್ಟಿಕೋನದ ಮೂಲಕ ತಮ್ಮ ಈ ಎಲ್ಲಾ ಹಿನ್ನೆಲೆಗಳನ್ನು ಮೀರಿ ಕೃತಿಯಲ್ಲಿ ಅಭಿವ್ಯಕ್ತಗೊಳ್ಳುತ್ತಾದರೂ ಈ ಎಲ್ಲಾ ಅಂಶಗಳು ಅವರ ಕೃತಿಗಳನ್ನು ಒಂದಲ್ಲಾ ಒಂದು ರೀತಿಯಲ್ಲಿ ನಿಯಂತ್ರಿಸುತ್ತವೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ನಾವು ಪು.ತಿ.ನ ಅವರ ಸೃಜನ ಶೀಲ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವಂತಹ ಸಾಮಾಜಿಕ ಪ್ರಜ್ಞೆಯ ಅಂಶವನ್ನು ಗಮನಿಸಬೇಕಾಗುತ್ತದೆ.

ಈಗಾಗಲೇ ಪು.ತಿ.ನ.ರವರ ಸಾಹಿತ್ಯದಲ್ಲಿ 'ಸಾಮಾಜಿಕ ಪ್ರಜ್ಞೆ' ಎಂಬ ಅಧ್ಯಯನಕ್ಕೆ ಸಂಬಂಧಿಸಿದಂತೆ ಉದ್ದೇಶ ಮತ್ತು ವ್ಯಾಪ್ತಿ, ಸಮಾಜದ ಪರಿಕಲ್ಪನೆ, ಕಾವ್ಯ, ಗೀತನಾಟಕ ಮತ್ತು ಪ್ರಬಂಧಗಳಲ್ಲಿ ವಿವೇಚಿಸಿರುವ ಹಾಗೆ ಪು.ತಿ.ನ. ಅವರು ಪರಕಾಯ ಪ್ರವೇಶದಲ್ಲಿ ಸಿದ್ಧಿಯನ್ನು ಪಡೆದವರು. ನಮ್ಮ ಸಂಸ್ಕೃತಿಯ ಸಾರಭೂತ ಸಂಗತಿಗಳನ್ನು ಪ್ರತೀಕಗಳ ರೂಪದಲ್ಲಿ ಹಿಡಿದಿಡುವ ಪುರಾಣಗಳ ಜಗತ್ತು ಅವರಿಗೆ ಸ್ವಂತ ಮನೆಯಂತೆ ಪರಿಚಿತ. ವರ್ತಮಾನದ ಬದುಕಿನ ಅರ್ಥವನ್ನು ಶೋಧಿಸುವುದಕ್ಕೆ ಅವರು ಮಾಡಿಕೊಳ್ಳುವ ಬುದ್ಧಿಪೂರ್ವಕ ಆಯ್ಕೆಯು ಪೌರಾಣಿಕ ಆವರಣವಾಗಿರುತ್ತದೆ. ಈ ಮಾತಿಗೆ ಅಹಲ್ಯೆ ನಾಟಕಕ್ಕಿಂತ ಉತ್ತಮ ನಿದರ್ಶನ ಬೇರೆಲ್ಲೂ ಕಂಡು ಬರುವುದಿಲ್ಲ. ತನ್ನ ಸುತ್ತಲಿನ ನಿಸರ್ಗದ ವಿವರಗಳನ್ನು ವರ್ಣಿಸುವುದಕ್ಕೆ ಪೌರಾಣಿಕ ಪ್ರತಿಮೆಗಳನ್ನು

ಕೊಡುವುದರಿಂದ ಹಿಡಿದು ಪ್ರಾಚೀನರಾದರೂ ಸಾರ್ವಕಾಲಿಕವಾದ ಪಾತ್ರಗಳ ನಿರ್ಮಾಣದವರೆಗೆ ಅವರ ಕಾವ್ಯಗಳು, ಪುರಾಣ ಪೂರ್ವ ಪ್ರತಿಮೆಯಾಗಿ ಗೋಚರಿಸುತ್ತವೆ ಎಂಬುದಾಗಿ ಹೇಳಬಹುದು.

ಹೀಗೆ ಪಾರಂಪರಿಕವಾಗಿ ಬಂದ ಆಸ್ತಿಕತೆಯ ಮೂಲಭಿತ್ತಿ ಇದ್ದೇ ಇರಬಹುದು. ಹೃದಯ ಹೇಳಿದ ಮಾತಿಗೆ ಪುರಾವೆಗಳನ್ನು ಹುಡುಕದೆ ಸಮಾಧಾನ ಪಡಲಾರದ ಮನಸ್ಸು ಅವರದು. ಅವರೇ ಹೇಳುವಂತೆ

"ನನ್ನ ಮನಕೊ ನೀನೊಂದನುಮಾನ
ನನ್ನೆದೆಗೂ ನಿನ್ನರಿತ ಸಮಾನ"

ಎಂಬ ತಾತ್ವರ್ಯದಿಂದ ಪು.ತಿ.ನ. ಅವರು ಕನ್ನಡ ಕಾವ್ಯದಲ್ಲಿ ಒಂದು ದ್ವೀಪದಂತೆ ಇರುವುದಕ್ಕೆ ಕಾರಣವಾದ ಸಂಗತಿಯೆಂದರೆ ಕವಿತೆಯ ರೂಪ ಕ್ರಿಯೆಯಲ್ಲಿ ಅವರು ತೋರಿಸಿದ ಚಿತ್ರಣವು ಬಹು ಮುಖ್ಯವಾದುದೆಂದು ಕಾಣುತ್ತದೆ.

'ಹಣತೆ' ಯಿಂದ ಪ್ರಾರಂಭವಾಗಿ ಗಣೇಶದರ್ಶನ, ರಸಸರಸ್ವತಿ, ಮಲೆದೇಗುಲ, ಮಾಂದಳಿರು, ಇರುಳ ಮೆರಗು ಮುಂತಾದ ಇತ್ತೀಚಿನ ಸಂಕಲನದವರೆಗೆ ಅವರು ಕನ್ನಡ ಕಾವ್ಯದ ಇತಿಹಾಸದಲ್ಲಿ ಆದ ಸ್ಥಿತ್ಯಂತರಗಳ ಬಗ್ಗೆ ಅನಾಸಕ್ತರಾಗಿಯೇ ಉಳಿದು ಬಿಟ್ಟಿದ್ದಾರೆ 'ಜಿ.ಎಸ್. ಶಿವರುದ್ರಪ್ಪನವರು' ಹೇಳುವಂತೆ ಪು.ತಿ.ನ. ಅವರಷ್ಟು ನವೀನ ಕಾಲದಲ್ಲಿಯೂ ಸಂಪ್ರದಾಯ ಪ್ರಜ್ಞೆಯುಳ್ಳ ಕವಿ ಬೇರೆ ಇಲ್ಲವೇನೋ ಎನ್ನುವಂತೆ ಅವರ ಕವಿತೆ ಭಾಗವತ ಪರಂಪರೆಯಲ್ಲಿ ಧ್ಯಾನಸ್ಥವಾಗಿದೆ. ಪು.ತಿ.ನ. ಅವರ ಅನೇಕ ಕವನಗಳು ಕನ್ನಡ ಕಾವ್ಯಕ್ಕೆ ಶ್ರೀಮಂತಿಕೆಯನ್ನು ತಂದುಕೊಟ್ಟಿದೆ ಎನ್ನುವುದರಲ್ಲಿ ಯಾವ ಅನುಮಾನವು ಇಲ್ಲ. ಯದುಗಿರಿಯ ಮೌನ ವಿಕಾಸ ದಿಂದ ಹಿಡಿದು 'ಶರ್ವರೀ ಸುಷಮೆ' ವರೆಗಿನ ನೂರಾರು ಕವಿತೆಗಳ ಕಾವ್ಯ ಸೌಂದರ್ಯವನ್ನು ವರ್ಣನೆಗಳಲ್ಲಿ ವಿವರಿಸುವುದು ಅಸಾಧ್ಯ.ಎಂಬುದಾಗಿ ಹೇಳಬಹುದು. ಈ ನೆಲೆಯಲ್ಲಿ ಸೃಜನಶೀಲ ಚಿಂತನ ಕವಿ ಪು.ತಿ.ನ. ಅವರನ್ನು ಪ್ರೇರೇಪಿಸುವ ಪ್ರಭಾವಿಸಿದ ಅಂಶಗಳನ್ನು ಗಮನಿಸಿದಾಗ ಪು.ತಿ.ನ. ಅವರ ಬಾಲ್ಯವು ಮೇಲುಕೋಟೆ, ಮೈಸೂರಿನಂತಹ ನಿಸರ್ಗ ಸಹಜಸುಂದರ ವಾತಾವರಣದಿಂದ ಕೂಡಿದ್ದು ಕಾವ್ಯ ಸೃಷ್ಟಿಗೆ ನಿರಂತರ ಪ್ರೇರಕ ಶಕ್ತಿಗಳಾಗಿವೆ. ಮೇಲುಕೋಟೆಯ ಬೆಟ್ಟ, ಕಣಿವೆ, ಕೆರೆ, ಪುಷ್ಕರಣಿಗಳು, ದೇಗುಲಗಳು, ಪಾಠಶಾಲೆ, ಸಂಸ್ಕೃತ ವಿದ್ಯಾಭ್ಯಾಸ, ಉತ್ಸವಗಳು, ಪುರಾಣ ಪ್ರವಚನಗಳು, ಇತ್ಯಾದಿ

ಸ್ವಭಾವತಃ ಅಂತರ್ಮುಖಿಯಾದ ಈ ಕವಿಯ ಬದುಕಿಗೆ ವಿಭಿನ್ನವಾದ, ವಿಶೇಷವಾದ ಆಯಾಮಗಳನ್ನು ಮೂಡಿಸಿವೆ.

ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸಮಾನಾಂತರವಾಗಿ ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಕೂಡಾ ಪಡೆದು ಎರಡೂ ಪದ್ಧತಿಗಳ ಉತ್ತಮಾಂಶಗಳನ್ನು ಮೈಗೂಡಿಸಿಕೊಂಡು ಪರಂಪರೆ ಮತ್ತು ಆಧುನಿಕತೆಗಳ ಅತ್ಯುತ್ತಮ ಸಮನ್ವಯಶೀಲರಾಗಲು ಪು.ತಿ.ನ.ರಿಗೆ ಅವಕಾಶ ದೊರಕಿದ್ದು ಒಂದು ಸುಯೋಗ ತತ್ವಶಾಸ್ತ್ರ, ವೇದಾಂತ ದರ್ಶನ, ಸಂಸ್ಕೃತ ಸಾಹಿತ್ಯ ಅವರ ಅಧ್ಯಯನದ ವಿಷಯಗಳಾಗಿದ್ದವು. ವಿಮರ್ಶಕರು ಗುರುತಿಸಿರುವಂತೆ ಪು.ತಿ.ನ. ಅವರದು ವಾಲ್ಮೀಕಿ, ವ್ಯಾಸ, ಕಾಳಿದಾಸ, ವರ್ಡ್ಸ್‌ವರ್ತ್, ಷೇಕ್ಸ್‌ಪಿಯರ್, ಗಯಟೆ ಮುಂತಾದವರಿಂದ ಪ್ರಭಾವಿತವಾದ ಮನೋಧರ್ಮ, ಪಾಶ್ಚಾತ್ಯ ಕೃತಿಗಳಿಗಿಂತ ಹೆಚ್ಚಿನದನ್ನು ಸಂಸ್ಕೃತದಿಂದಲೇ ಪಡೆಯಬಹುದೆಂಬ ನಂಬಿಕೆ ಅವರಿಗಿತ್ತು. ಅವರು ಆಧುನಿಕ ದೃಷ್ಟಿಯುಳ್ಳವರಾದರೂ, ವೈದಿಕ ಪರಂಪರೆಯ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದರು. ಅದರಿಂದಲೇ ಅವರಿಗೆ ಭಾರತೀಯ ಕಾವ್ಯ ಜಿಜ್ಞಾಸೆಯನ್ನು ಹೊಸಪರಿಭಾಷೆಯಲ್ಲಿ ಹೇಳಲು ಸಾಧ್ಯವಾಯಿತು. ತಮ್ಮ ಪ್ರೇರಣೆಯ ಪ್ರಧಾನಾಂಶವನ್ನು ಭಾರತೀಯ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಿಂದ ಪಡೆದಿರುವುದು ಗಮನಾರ್ಹ ಅಂಶ. "ಭಾರತೀಯ ಕವಿ ಪರಂಪರೆಗೆ, ಕಾವ್ಯಕಲೆಗೆ ಒಂದು ಮಾರ್ಗವುಂಟು. ಒಂದು ರೀತಿಯುಂಟು, ಒಂದು ದರ್ಶನವುಂಟು, ಒಂದು ಸಂಪ್ರದಾಯವುಂಟು. ನಮ್ಮ ಬೇರುಗಳು ಬರಡಾಗಬಾರದು". ಎಂಬ ಪು.ತಿ.ನ. ಅವರ ಮಾತುಗಳು ಮುಂದಿನ ಪೀಳಿಗೆಗೆ ಆದರ್ಶನವಾಗಿದೆ. ಹಾಗಾಗಿ ಪು.ತಿ.ನ. ರವರ ಕಾವ್ಯಗಳಲ್ಲಿ ಸಾಮಾಜಿಕ ಪ್ರಜ್ಞೆಯ ಚಿಂತನೆಯನ್ನು ಬಹು ಸುಂದರವಾಗಿ ಮತ್ತು ಕೂಲಂಕಷವಾಗಿ ತಿಳಿಯಬಹುದಾಗಿದೆ. ಅಲ್ಲದೇ ಪು.ತಿ.ನ ಅವರು ಪ್ರಕಟಿಸಿರುವ ಗೀತ ನಾಟಕಗಳು ಸಾಕಷ್ಟು ಪ್ರಬುದ್ಧವಾಗಿ ಚಿತ್ರವಾಗಿವೆ.

ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ಕವಿ, ದೋಣಿಯ ಬನದ, ವಿಕಟ ಕವಿ ವಿಜಯ, ಹಂಸ ದಮಯಂತಿ,ಮತ್ತು ಇತರ ರೂಪಕಗಳು, ಶ್ರೀ ರಾಮ ಪಟ್ಟಾಭಿಷೇಕ, ಸತ್ಯಾಯನ ಹರಿಶ್ಚಂದ್ರ ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ಈ ನಾಟಕಗಳಿಗೆ ಹಲವು ಪ್ರೇರಣೆಗಳಿವೆ. ಯಕ್ಷಗಾನ, ಬಯಲಾಟಗಳಂತಹ ಜಾನಪದ ರಂಗ ರೂಪಗಳು. ಶಾಸ್ತ್ರೀಯ ಸಂಗೀತದ ರೂಪಕಗಳು, ಪಾಶ್ಚಾತ್ಯಗೀತ ನಾಟಕಗಳು, ಸಂಪೂರ್ಣವಾಗಿ ಸಂಗೀತಮಯವಾದ ತಮಿಳು ನಾಟಕಗಳು ಇತ್ಯಾದಿ. ಹೀಗೆ ಜಾನಪದ ಅಂಶಗಳನ್ನು

ಒಳಗೊಂಡಿರುವ ಸರಳ ಪ್ರೇಮಕಥೆಯಾದ ದೋಣಿಯ ಬಿನದವಾಗಲಿ ಜಗತ್ತಿನ ನೋವು-ನಲಿವುಗಳನ್ನು ನಿರ್ಲಿಪ್ತವಾಗಿ ಪರಿಭಾವಿಸಿ, ಕಲೆಯಾಗಿ ಪರಿವರ್ತಿಸುವ ಕವಿಕಾರ್ಯವನ್ನು ವಿಜೃಂಭಿಸುವಂತೆ ಆಕರ್ಷಕವಾಗಿ ಕಂಡುಬರುತ್ತದೆ. ವಿಕಟಕವಿ ವಿಜಯ ನಾಟಕದಲ್ಲಿ ತನ್ನಕಾಲದ ರಾಜಕೀಯ ಪರಿಸ್ಥಿತಿಯ ಬಗ್ಗೆ ಕವಿಯ ಅಂತರಂಗದಲ್ಲಿ ಮೂಡಿರುವ ಪ್ರತಿ ಸ್ಪಂದನದಂತೆ ಮತ್ತು ಗೋಕುಲ ನಿರ್ಗಮನ ಮತ್ತು ಅಹಲ್ಯೆ ನಾಟಕಗಳೆರಡೂ ತಮ್ಮ ಪುರಾಣ ಮೂಲದಲ್ಲಿಯೇ ಭಾವನಿರ್ಭರವಾದ ಹೃದಯ ವಿದ್ರಾವಕವಾದ ವಸ್ತುಗಳನ್ನು ಒಳಗೊಂಡಿದೆ. ಕೃಷ್ಣನ ಬದುಕಿನಲ್ಲಿ ಮಹತ್ವದ ಘಟ್ಟವೊಂದನ್ನು ಆರಿಸಿಕೊಂಡು ಅವನಲ್ಲಾದ ಪರಿವರ್ತನೆಯು ಅವನ ಸುತ್ತಮುತ್ತಲಿನವರ ಮೇಲೆ ಬೀರುವ ಪರಿಣಾಮವನ್ನು ಚಿತ್ರಿಸುವುದು ಗೋಕುಲ ನಿರ್ಗಮನದ ವಸ್ತು ಹೀಗೆ ಪು.ತಿ.ನ.ಅವರ ನಾಟಕಗಳಲ್ಲಿ ರಂಗಭೂಮಿಯ ಪರಿಕಲ್ಪನೆಯಿಂದ ಹಿಡಿದು ಸಾಮಾಜಿಕ ಪ್ರಜ್ಞೆಯ ತನಕ ವಾಸ್ತವಾಂಶ ಚಿಂತನೆಯನ್ನು ವಿವೇಚಿಸಬಹುದಾಗಿದೆ.

ಕಾವ್ಯ ಮತ್ತು ನಾಟಕಗಳ ನಂತರ ಪು.ತಿ.ನ.ರವರ ಬಹುಮುಖ್ಯ ಕ್ಷೇತ್ರವೆಂದರೆ ಲಲಿತ ಪ್ರಬಂಧ ಮತ್ತು ಭಾವಪ್ರಬಂಧಗಳ ರಚನೆಯ ಕಡೆಗೆ ಎಂದು ಹೇಳಬಹುದು. ರಾಮಾಚಾರಿಯ ನೆನಪು, ಧ್ವಜರಕ್ಷಣೆ, ರಥಸಪ್ತಮಿ ಇವುಗಳ ಪೈಕಿ ರಾಮಾಚಾರಿಯ ನೆನಪು ಇವರ ಕವನ ಸಂಕಲನವಾದ ಹಣತೆಗಿಂತ ಮುಂಚಿತವಾಗಿ ಅಂದರೆ ೧೯೩೧ರಲ್ಲಿ ಪ್ರಕಟವಾಯಿತೆನ್ನಬಹುದು.

ಈ ಮೇಲ್ಕಂಡ ಬರಹಗಳೆಲ್ಲವೂ ಕಥೆ ಹಾಗೂ ಲಲಿತ ಪ್ರಬಂಧಗಳ ಗಡಿ ರೇಖೆಗಳ ನಡುವೆ ಚಲಿಸುತ್ತಿರುತ್ತದೆ. ಏಕೆಂದರೆ ಇವು ಬಹುಮಟ್ಟಿಗೆ ನಿರ್ದಿಷ್ಟ ಅನುಭವ ಪ್ರೇರಿತವೂ ಘಟನಾ ಕೇಂದ್ರಿತವೂ ಆಗಿರುತ್ತದೆ. ಆದ್ದರಿಂದಲೇ ಜೀವನದ ಅನುಭವ ಇಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಆದರೆ ಲೇಖಕರು ತನ್ನ ಜೀವನದಲ್ಲಿ ನಡೆದಂತಹ ಘಟನಾವಳಿಗಳ ಚಿತ್ರಣವನ್ನು ಮತ್ತು ತನ್ನ ಅನುಭವಕ್ಕೆ ಬಂದಂತಹ ಹಲವಾರು ವಿಷಯಗಳನ್ನು ತಮ್ಮ ಪ್ರಬಂಧದ ಮೂಲಕ ರಚಿಸಿದ್ದಾರೆ.

ಒಟ್ಟಾರೆಯಾಗಿ ಪು.ತಿ.ನ.ಅವರು ಹುಟ್ಟಿ ಬೆಳೆದದ್ದು ಮೇಲುಕೋಟೆಯ ಶ್ರೀ ಚೆಲುವನಾರಾಯಣನ ಸುಂದರ ಪರಿಸರದಲ್ಲಿ ಬ್ರಾಹ್ಮಣ ಕುಟುಂಬದಲ್ಲಿಯೇ ಆದರೂ ಸಹ ತಾವು ಕಲಿತ ವೈಚಾರಿಕತೆಯ ಮೂಲಕ ತಮ್ಮ ಬ್ರಾಹ್ಮಣ್ಯದ ಶ್ರೇಷ್ಠತೆಯನ್ನು ಮೀರಲೆತ್ನಿಸಿದವರು. ಹಾಗಾಗಿ ತಮ್ಮ ಜೀವನದ ಪ್ರಾಯೋಗಿಕ ಭಾಗವಾಗಿಯೇ ಧರ್ಮ

ಪುರಾಣಗಳನ್ನು ನಂಬಿದರೂ ಸಹ ಇಲ್ಲಿ ಇಡೀ ಮನುಕುಲವನ್ನು ಪೋಷಿಸುವ ತಾಯತ್ತನದ ಅಂಶಗಳು ಅವರ ಚಿಂತನೆಗಳಲ್ಲಿ ಸೇರಿಕೊಂಡಿವೆ ಮತ್ತು ಈ ಹೊತ್ತಿಗೂ ಅದು ನಮ್ಮನ್ನು ಬಗೆ ಬಗೆಯಾಗಿ ಪ್ರೇರೇಪಿಸುತ್ತವೆ ಹಾಗಾಗಿ ಪು.ತಿ.ನ. ಅವರ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಯ ಚಿಂತನೆಯು ಬಹಳ ಅರ್ಥಗರ್ಭಿತವಾಗಿ ಜೀವನದ ಮೌಲ್ಯಗಳ ಬಗ್ಗೆ ವೈಚಾರಿಕತೆಯ ಬಗ್ಗೆ ತಿಳಿಸಿಕೊಡುತ್ತದೆ.

ಹೀಗೆ ಸಮಾಜ ಸಂಸ್ಕೃತಿಯ ಏಕರೂಪಿಕರಣಕ್ಕೆ ಒತ್ತಾಯಿಸುತ್ತಿರುವ ಈ ಹೊತ್ತಿನ ಜಾಗತೀರಣ ಹಿನ್ನೆಲೆಯಲ್ಲಿ ಪು.ತಿ.ನ. ಅವರ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕಾದಂತಹ ಅಗತ್ಯವಿದೆ. ಅಲ್ಲದೇ ಸಾಮಾಜಿಕ ಪ್ರಜ್ಞೆಯನ್ನು ನ್ಯಾಯದ ಅಧ್ಯಾತ್ಮದ ಚಿಂತನೆಯನ್ನು ಅತ್ಯಂತ ತುರ್ತಿನಲ್ಲಿ ಜಾಗತೀಕರಣವಾಗಿ ವಿಸ್ತರಿಸಬೇಕಾದ ಹೊಣೆ ನಮ್ಮೆಲ್ಲರ ಕರ್ತವ್ಯ ಎಂಬ ಆಶಯವನ್ನು ಈ ಅಧ್ಯಯನದ ಮೂಲಕ ವಿವೇಚಿಸಬಹುದಾಗಿದೆ.

ಪರಾಮರ್ಶನ ಗ್ರಂಥಗಳು

೧ ಪು.ತಿ.ನ. ಸಮಗ್ರ ಕಾವ್ಯ ಸಂಗ್ರಹ : ಪು.ತಿ.ನ. ಟ್ರಸ್ಟ್, ಬೆಂಗಳೂರು

೨ ಪು.ತಿ.ನ. ಸಮಗ್ರ ನಾಟಕ ಸಂಗ್ರಹ : ಪು.ತಿ.ನ. ಟ್ರಸ್ಟ್, ಬೆಂಗಳೂರು

೩ ಪು.ತಿ.ನ. ಸಮಗ್ರ ಗದ್ಯ ಸಂಗ್ರಹ : ಪು.ತಿ.ನ. ಟ್ರಸ್ಟ್, ಬೆಂಗಳೂರು

೪ ಆಧುನಿಕ ಕನ್ನಡ ಕವಿಗಳ ಕಾವ್ಯ ಜಿಜ್ಞಾಸೆಗಳು : ಡಾ. ಶಾಂತಲಕ್ಷ್ಮಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫ ಶತಮಾನದ ಕನ್ನಡ ಸಾಹಿತ್ಯ : ಜಿ.ಎಚ್. ನಾಯಕ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ

೬ ಪು.ತಿ.ನ. ಪರಿಕ್ರಮ : ಎಚ್.ಎಸ್. ವೆಂಕಟೇಶ್ ಮೂರ್ತಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು

೭ ಕನ್ನಡ ನಾಟಕಗಳು : ತ.ಸು. ಶಾಮರಾಯ, ತಳುಕಿನ ವೆಂಕಣ್ಣಯ್ಯ ಪ್ರಕಾಶನ, ಮೈಸೂರು

೮ ಕವಿಗಳ ಬೆನ್ನೇರಿ : ಅ.ರಾ. ಮಿತ್ರ, ವಸಂತ ಪ್ರಕಾಶನ, ಬೆಂಗಳೂರು

೯ ಪು.ತಿ.ನ. ಒಂದು ಅಧ್ಯಯನ : ಮಿತ್ರ ಪ್ರಕಾಶನ, ಮೈಸೂರು

೧೦ ಸಾಲು ದೀಪಗಳು : ಎಂ.ಎಚ್. ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೧ ಪು.ತಿ.ನ. ಅವರ ನಾಟಕಗಳು : ಡಾ. ಡಿ.ಬಿ. ರಾಮಚಂದ್ರಾಚಾರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೨ ಆಧುನಿಕ ಕನ್ನಡ ನಾಟಕ : ಕೆ. ಮರುಳ ಸಿದ್ದಪ್ಪ, ಅಂಕಿತ ಪ್ರಕಾಶನ, ಬೆಂಗಳೂರು

೧೩ ಆಧುನಿಕ ಕನ್ನಡ ಮಹಾಕಾವ್ಯಗಳು : ಡಾ.ಬಿ.ಎಸ್. ಸ್ವಾಮಿ, ಗಿರೀಶ್ ಎಂಟರ್ ಪ್ರೈಸಸ್, ಬೆಂಗಳೂರು.